ಮಹಾತ್ಮರ ಮನೋರಂಗ		ವಚನಶಾಸ್ತ್ರ ರಹಸ್ಯ
ಅನುವಾದಕರು : ಶ್ರೀ. ರಂ. ರಾ. ದಿವಾಕರ. ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ. ೩೦೪ ಪುಟ, ಬೆಲೆ: ೪-೮-೦ ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ	ಬೆಲೆ: ಎರಡು ಆಣೆ	ಲೇ: ಶ್ರೀ. ರಂ. ರಾ. ದಿವಾಕರ. ಕರ್ನಾಟಕದ ... ವಚನಗಳ ಬಗ್ಗೆ ವಿಚಾರ ... ಬೆಲೆ: ... ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಕರ್ಮವೀರ

ಸಂಪಾದಕರು : ಹ. ರಾ. ಪುರೋಹಿತ ಎಂ. ಎ.

]——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——[

Editor : H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೨---೬---೧೯೪೭ —(ಸಂಚಿಕೆ ೯)—

ಸ್ವತಂತ್ರ ಭಾರತ ಮತ್ತು ಬ್ರಿಟನ್ನುಗಳ ಭಾವೀ ಸಂಬಂಧ

"ಭಾರತದ ರಕ್ಷಣೆಯ ಹೊಣೆಯನ್ನು ಎರಡೂ ರಾಷ್ಟ್ರಗಳು ಹೊರಬೇಕು"

"ಹಳೆಯ ಕಾಲದ ಸಾಮ್ರಾಜ್ಯಶಾಹಿಯ ಧೋರಣವನ್ನು ಬಿಟ್ಟು ಜಾಗತಿಕ ಅಥವಾ ಪ್ರಾದೇಶೀವಾಗಿ ಉಭಯಸಮ್ಮತ ಕರ್ತವ್ಯದೃಷ್ಟಿಯಿಂದ ರಕ್ಷಣಾವ್ಯವಸ್ಥೆಯ ಬಗ್ಗೆ ಭಾರತದೊಡನೆ ನಮ್ಮ ಸಂಬಂಧವನ್ನು ನಿಶ್ಚಯಿಸಿಕೊಂಡರೆ ಮತ್ತೊಂದು ಯುದ್ಧದ ಕಷ್ಟನಷ್ಟ ಮತ್ತು ಭಯಂಕರ ಪರಿಣಾಮಗಳಿಂದ ಏಶಿಯದ ಜನಾಂಗಗಳನ್ನು ಉಳಿಸಲು ತಮ್ಮ ಸಂಯುಕ್ತ ಕಾರ್ಯಾಚರಣೆಗೆ ಬೇಕಾದಷ್ಟು ಅವಕಾಶವಿದೆ"— ಎಂದು ಸದ್ಯದ ಭಾರತ ಮಂತ್ರಿಗಳಾದ ಲಾರ್ಡ ಲಿಸ್ಟೊವೆಲ್ಲರು ಮಂತ್ರಿತ್ವವಹಿಸುವುದರ ಮೊದಲು ಬರೆದ ಒಂದು ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

"ಇಂದು ಭಾರತದ ದೃಷ್ಟಿಪಥ ಮತ್ತು ಬ್ರಿಟನ್ ಭಾರತಗಳೆರಡರ ಹಿತಕರವಾದ ಸಹಕಾರವನ್ನು ಬಹಳಕಾಲ್ಬಿಡದು ಕಾಪಾಡುವ ಭವಿಷ್ಯ-ಇವು ಯುದ್ಧಾನಂತರ ಎಂದಿಗಿಂತಲೂ ಹೆಚ್ಚು ಸ್ಪಷ್ಟವಾಗಿಯೂ ಆಶಾದಾಯಕವಾಗಿಯೂ ಇವೆಯೆಂದು ನಾನು ನಂಬುತ್ತೇನೆ. ಯುದ್ಧದ ನಿಮಿತ್ತ ಪುನರ್ನಿವಾರ್ಯವಾಗಿ ತಡೆದು ನಿಂತ ತಾತ್ಕಾಲಿಕವಾಗಿ ಕೇಂದ್ರದಲ್ಲಿ ಹಿಂದೀಯ ಪ್ರಾತಿನಿಧಿಕ ಸರಕಾರವನ್ನು ಸ್ಥಾಪಿಸಿ ಭಾರತದ ರಾಜಕೀಯ ಪ್ರಗತಿಯನ್ನು ಪುನಃ ಪ್ರಾರಂಭಿಸುವ ವಾಯಿಸರಾಯರ ಯೋಜನೆಗೆ ಕಾಂಗ್ರೆಸ್ಸಿನ ಮತ್ತು ಸಾಮಾನ್ಯವಾಗಿ ಹಿಂದುಸ್ಥಾನದ ಸ್ವಾಗತ ದೊರೆತುದೇ ನಾನು ಹೀಗೆ ನಂಬಲು ಕಾರಣ. ಅಂತಹ ಸರಕಾರ ರಚಿಸಲು ಸಾಧ್ಯವಾದರೆ ಕೂಡಲೆ ಬ್ರಿಟಿಶ ಹಿಂದುಸ್ಥಾನದ ಪ್ರಾಂತಗಳಲ್ಲಿ ಭಾರತೀಯ ಆಡಳಿತವನ್ನು ಪುನರುತ್ಥಾನಗೊಳಿಸಲಾದೀತು.

ಇದು ೧೯೪೦ರಲ್ಲಿ ಪ್ರಾರಂಭವಾದ ಭಾರತದೊಡನೆ ನಮ್ಮ ಸಂಬಂಧವನ್ನು ಉತ್ತಮಗೊಳಿಸುವ ಪ್ರಯತ್ನದ ಗುರುತಾಗಿದೆ. ಬ್ರಿಟಿಶ ಸಾಮ್ರಾಜ್ಯದೊಳಗೆ ಅಥವಾ ಹೊರಗೆ ಉಳಿಯುವ ಹಕ್ಕಿನೊಂದಿಗೆ ಸಂಪೂರ್ಣ ಸ್ವರಾಜ್ಯವನ್ನು ಕೊಡುವ 'ಕ್ರಿಪ್ಸ್ ಕೊಡುಗೆ' ಯೇ ಬ್ರಿಟಿಶ ಧೋರಣದ ಮುಖ್ಯ ಸೂತ್ರವೆಂದು ವಾಯಿಸರಾಯರು ಹೇಳಿದಾಗ ಅವರು ಬ್ರಿಟಿಶ ಜನರ ಪರವಾಗಿಯೂ ಆಡಳಿತದ ಅಧಿಕಾರಗಳ ಪರವಾಗಿಯೂ ಮಾತನಾಡಿದ್ದರು. ಬಹು ಜನ ಬ್ರಿಟಿಶರಿಗೆ ಹಿಂದುಸ್ಥಾನ ಅಪರಿಚಿತವಾಗಿರುವುದೇನೋ ನಿಜ. ಆದರೆ ಭಾರತೀಯ ಮುಂದಾಳುಗಳನ್ನೆದುರಿಸುವ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಅರಿಯದವರಾಗಿದ್ದರೂ ಹಿಂದುಸ್ಥಾನ ಕೇಳುತ್ತಿರುವ ಸ್ವಾತಂತ್ರ್ಯವನ್ನು ಉಳಿಸಲು ಕಳೆದ ೫ ವರ್ಷಗಳಿಂದ ಸಾವಿರಾರು ಸ್ವದೇಶಿಯರು ಮೃತರೂ ಅಂಗಹೀನರೂ ಆದರೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಹಿಂದುಸ್ಥಾನದ ಸ್ವರಾಜ್ಯಪ್ರಶ್ನೆಯು ಬ್ರಿಟಿಶ ಜನಾಂಗವನ್ನು ಎರಡು ಶತ್ರುಪಕ್ಷಗಳಾಗಿ ವಿಂಗಡಿಸುತ್ತಿದ್ದ ೧೯೪೦ರ ದಿನ ಸ್ವರಾಜ್ಯದ ಪ್ರಶ್ನೆಯು ಇಂತಿಲ್ಲ. ಎಲ್ಲೋ ಹಲಕೆಲ ಜನರನ್ನು ಬಿಟ್ಟು ಬ್ರಿಟನ್ನಿನಲ್ಲಿರುವ ಪ್ರಧಾನ ರಾಜಕೀಯ ಪಕ್ಷಗಳೆಲ್ಲಾ ಭಿನ್ನ ಪ್ರಮಾಣದ ಉತ್ಸಾಹದಿಂದ ಅದನ್ನು ಪ್ರಕಟವಾಗಿ ಘೋಷಿಸಿವೆ. ಈ ಧೋರಣವನ್ನು ಕಾರ್ಯರೂಪಕ್ಕೆ ತರವುದರಲ್ಲಿರುವ ಶಕ್ತಿಯ ಮೇಲೂ ವೇಗದ ಮೇಲೂ ಇಲ್ಲಿಯ ರಾಜಕೀಯ ಪಕ್ಷಗಳು ಪರಿಣಾಮ ಮಾಡುತ್ತವೆ; ಆದರೆ ಅದು ಸಾಗಬೇಕೆಂದಿರುವ ದಿಕ್ಕನ್ನಾಗಲಿ ಇಲ್ಲವೆ ಅದು ಮುಟ್ಟಬೇಕೆಂದಿರುವ ಗುರಿಯನ್ನಾಗಲಿ ಬದಲಿಸುವದಿಲ್ಲ.

ಬ್ರಿಟನ್ನಿನ ರಕ್ತಗತವಾದ ಸಂಕುಚಿತ ದೃಷ್ಟಿ

ಮೊಟ್ಟಮೊದಲು ಲಾರ್ಡ ಹಾಲಿಫಾಕ್ಸರು ಹಿಂದುಸ್ಥಾನಕ್ಕೆ ಸ್ವರಾಜ್ಯ ನೀಡುವದು ಬ್ರಿಟನ್ನಿನ ಗುರಿಯೆಂದ ಕಾಲದಿಂದ ಇಂದಿನವರೆಗೆ ಆದ ಪ್ರಗತಿಯು ಬಹಳ ಕಡಿಮೆ. ಇದಕ್ಕೆ ಬ್ರಿಟಿಶ ಸರಕಾರದ ವಂಚಕತ್ವ ಮತ್ತು ತಮ್ಮ ಸಾಮ್ರಾಜ್ಯದ ಮೇಲಿನ ಪ್ರಭುತ್ವವನ್ನು ಸ್ವೇಚ್ಛೆಯಿಂದ ಬಿಟ್ಟುಕೊಡಬಾರದೆಂಬ ಅವರ ಗುಪ್ತ ನಿರ್ಣಯ - ಇವುಗಳೇ ಕಾರಣವೆಂದು ಕೆಲವೊಮ್ಮೆ ಹೇಳಲಾಗುತ್ತದೆ.

ವಚನ ಮತ್ತು ಅದರ ಪೂರೈಕೆ-ಇವು ಒಟ್ಟಿಗಿರದೆ ತಪ್ಪಿಹೋಗಿವೆಯೆಂಬುದೇನೋ ಸತ್ಯವಾದ ಮಾತು.

ಬ್ರಿಟಿಶರ ತಪ್ಪನ್ನು ದೃಷ್ಟಿಯಲ್ಲಿಟ್ಟು ನೋಡುವುದಾದರೆ ಈ ವ್ಯತ್ಯಾಸಕ್ಕೆ ಅವರ ಸಹಜವಾದ ಸಂಕುಚಿತ ಮನೋವೃತ್ತಿಯೇ ಕಾರಣವೆನ್ನಬೇಕಾಗುತ್ತದೆ.

ಸ್ವದೇಶದಲ್ಲಾಗಲಿ, ಸಾಮ್ರಾಜ್ಯದಲ್ಲಾಗಲಿ, ಶೀಘ್ರವಾಗಿ ಪರಿವರ್ತನವಾಗುವುದನ್ನು ಉಳಿದ ದೇಶಗಳಂತೆ ನಾವು ಸ್ವಾಗತಿಸಲಾರೆವು. ನಾವು ಎಚ್ಚರಿಕೆಯಿಂದ ಮೆಲ್ಲಗೆ ಸಾಗುವ ಜನರು; ಮತ್ತು ಇನ್ನಾವ ಆಧುನಿಕ ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲೂ ನೂರಾರು ವರ್ಷಗಳಿಂದ ನಡೆದು ಬಂದ ಪದ್ಧತಿಗಳು ಮತ್ತು ಪರಂಪರೆಯು ವ್ಯಾಪಕ ಹಸ್ತ ಇವು ನಮ್ಮಲ್ಲಿಯಷ್ಟು ದೃಢವಾಗಿ ಬೇರು ಬಿಟ್ಟಿಲ್ಲ. ನಾವು ತಪ್ಪುಗಳಿಂದ ದೂರ ಇರುತ್ತೇವೆ; ಆದುದರಿಂದ ನಾವು ಪ್ರದರ್ಶನೀಯವಾದ ವಿಜಯದಿಂದ ವಂಚಿತರಾಗುತ್ತೇವೆ. ಅಂತಹ ಪ್ರದರ್ಶನೀಯ ವಿಜಯಗಳನ್ನು ಸಾಮಾಜಿಕ ಬದಲಾವಣೆಗಳು ಬಹಳ ವೇಗವಾಗಿಯೂ ಅಕ್ರಮವಾಗಿಯೂ ಸಾಗುವ ದೇಶಗಳಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ.

ಬ್ರಿಟಿಶ ಪ್ರಜಾಸತ್ತೆಯ ಲೋಪದೋಷಗಳನ್ನು ಭಾರತದ ನಮ್ಮ ಗೆಳೆಯರು ಕ್ಷಮಿಸುವರೆಂದು ನಾನು ಆಶಿಸುತ್ತೇನೆ. ಬ್ರಿಟಿಶರಲ್ಲಿ ಅವರಂತೆಯೇ ನಿರಾಶರಾದ ಹಲವು ಪ್ರಗತಿಶೀಲ ಮಿತ್ರರು ಸಿಗುತ್ತಾರೆ. ಆದರೆ ಈ ದೇಶದ ಒಲವು ಶೀಘ್ರಗಾಮಿತ್ವದ ಕಡೆಗೆ ಇದೆ. ಸಾಮ್ರಾಜ್ಯದಲ್ಲೆಲ್ಲ ಸಾಮಾನ್ಯ ಪ್ರಜೆಗೆ ತನ್ನ ಆಶೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹೆಚ್ಚಿನ ಅವಕಾಶ ಮತ್ತು ಹೆಚ್ಚು ಪರಿಣಾಮಕಾರಿಯಾದ ಸ್ವಾತಂತ್ರ್ಯ-ಇವುಗಳನ್ನು ತರುವ ಬಹು ಮುಖ್ಯವಾದ ಸಾಮಾಜಿಕ ಬದಲಾವಣೆಗಳು ಇನ್ನೊಂದು ಹತ್ತುವರುಷಗಳಲ್ಲಿ ನಡೆಯಲಿವೆಯೆಂದು ನನ್ನ ನಿರೀಕ್ಷೆ. ಈಗ ಇಲ್ಲಿ ಆಗುತ್ತಿರುವದು ಈಗ ತಾನೆ ಯುರೋಪಿನಲ್ಲಿ ಫ್ಯಾಸಿಸಮ್ಮಿನ ಮೇಲಾದ ಜಯದಿಂದ ಮುಕ್ತಿ ಪಡೆದ ಸಾಮಾಜಿಕ ಶಕ್ತಿಗಳ ವರ್ಧಮಾನ ಪ್ರಭಾವದ ಒಂದು ನಿದರ್ಶನವೇ ಎಂದು ಹೇಳಬಹುದು. ಜಪಾನೀ ಸಾಮ್ರಾಜ್ಯಶಾಹಿಯನ್ನು ಹಿಂದೊತ್ತಿದ ಮರುಕ್ಷಣದಲ್ಲಿ ಆ ಶಕ್ತಿಗಳು ಏಶಿಯದಲ್ಲೂ ಮೇಲುಗೈಯಾಗುವವೆಂಬುದು ಕೂಡ ಅಷ್ಟೇ ನಿಶ್ಚಿತವಾದದ್ದು.

ಬ್ರಿಟನ್ ಭಾರತಗಳ ಸಹಕಾರ

ಯುದ್ಧ ಕಲಿಸಿದ ಪಾಠದಿಂದ ರಾಷ್ಟ್ರಪ್ರೇಮ ಮತ್ತು ರಾಷ್ಟ್ರೀಯ ಅಭಿಮಾನವು ಹೆಚ್ಚುತ್ತಿರುವದನ್ನು ಎಲ್ಲೆಲ್ಲೂ ಕಾಣಬಹುದಾಗಿದೆ. ಈ ಹೊಸ ಪ್ರತಿಭಟನಾಂದೋಲನಗಳು ಧೀರರಾದ ತರುಣರ ಬೆಂಬಲದಿಂದ ಸಾಮಾಜಿಕ ಮತ್ತು ರಾಷ್ಟ್ರೀಯ ಪುನರುತ್ಥಾನಕ್ಕಾಗಿ ಹೋರಾಡುವ ಗುರಿಯಿಂದ ರಾಜಕೀಯ-ಅಧಿಕಾರ ಇಲ್ಲವೆ ಆರ್ಥಿಕ ಹಕ್ಕುಗಳು ಎದುರು ಬಂದರೆ ಅವನ್ನು ಲೆಕ್ಕಿಸದೆ ಸಾಮಾನ್ಯ ಪ್ರಜೆಯ ಹಕ್ಕಿನ ಪುನಃಪ್ರತಿಷ್ಠಾಪನೆಯ ಕಾರ್ಯವನ್ನು ನಡೆಸುತ್ತಿವೆ. ಯುರೋಪಿನ ಯುದ್ಧೋತ್ತರ ಹವಾಮಾನವು ಅಂಥದು. ಇಲ್ಲಿಯ ವರೆಗೆ ಪ್ರತಿಭಟನೆ ವಿಶಿಷ್ಟ ಅಲ್ಪಸಂಖ್ಯಾಕರ ಆಜ್ಞೆಗೆ ಮತ್ತು ಸುಲಿಗೆಗೆ ಆಧೀನರಾಗಿ ಬಾಳಿದ ಜನರ ಬುದ್ಧಿಗೆ ಬಲವಾದ ಪೆಟ್ಟು ಬಿದ್ದಿದೆಯೆಂಬುದಕ್ಕೆ ಸಮಾಜಸತ್ತಾವಾದ, ಸಮತಾವಾದ ಮತ್ತು ಉದಾರತಾ ... ತಲೆಯೆತ್ತುತ್ತಿರುವದೇ ಸಾಕ್ಷಿ. ನಮ್ಮ ಸದ್ಭಾವನೆಗೊಪ್ಪುವಂತಿರುವ ... ಘಟನಾತ್ಮಕ ಮತ್ತು ಸಾಮಾಜಿಕ ಪ್ರಗತಿಗೆ ಹೆಚ್ಚಿನ ಬೆಂಬಲ ಮತ್ತು ಪ್ರೋತ್ಸಾಹಸಿಗುತ್ತದೆಂಬುದಕ್ಕೆ ಬ್ರಿಟನ್ನಿನಲ್ಲಿ ಜನಾಭಿಪ್ರಾಯ ಶೀಘ್ರಗಾಮಿತ್ವದ ಕಡೆಗೆ ಒಲಿದಿರುವುದೊಂದು ಬಲವಾದ ಭರವಸೆಯಾಗಿದೆ. ಸ್ವದೇಶದಲ್ಲಿ ಜನಾಭಿಪ್ರಾಯಕ್ಕೆ ಅತಿಮಂದವಾಗಿ ತಲೆಬಾಗುವ ಯಾವ ಬ್ರಿಟಿಶ ಸರಕಾರಕ್ಕೇ ಆಗಲಿ ಅಮೇರಿಕದ ಸಂಯುಕ್ತ ಸಂಸ್ಥಾನದ ಮತ್ತು ಯುರೋಪಿನ ವಿರುದ್ಧ ಟೀಕೆಗೆ ಗುರಿಯಾಗುವ ಭಯವು ಅದರ ಮುಂದಾಳುತ್ವಕ್ಕೆ ಕುಠಾರಪ್ರಾಯವಾದುದು. ಬ್ರಿಟಿಶರು ತಮ್ಮ ಕೈಯಿಂದ ಭಾರತೀಯರ ಕೈಗೆ ಅಧಿಕಾರವನ್ನು ವರ್ಗಾಯಿಸುವುದೊಂದೇ ನಮ್ಮೆರಡು ದೇಶಗಳು ಜಗತ್ತಿನ ಮತ್ತು ತಮ್ಮ ಒಳ್ಳೆಯದಕ್ಕಾಗಿ ಒಮ್ಮತದಿಂದ ಕೆಲಸಮಾಡುವ ಮಾರ್ಗವಲ್ಲ. ಹೊಸ ಜಾಗತಿಕ ಸಂಘದ ಸದಸ್ಯರಾಷ್ಟ್ರಗಳು ಎಷ್ಟರ ವರೆಗೆ ಒಗ್ಗಟ್ಟಿನಿಂದ ನಡೆಯುವವು ಮತ್ತು ಎಷ್ಟರ ಮಟ್ಟಿಗೆ ಭಾವೀ ಆಕ್ರಮಣಶೀಲ ರಾಷ್ಟ್ರವನ್ನೆದುರಿಸಲು ಸಂಯುಕ್ತ ಸೈನ್ಯಶಕ್ತಿಯನ್ನು ಬೆಳೆಸಲು ಇಚ್ಛಿಸುವುವು— ಎಂಬುದರ ಮೇಲೆಯೇ ಈ ಯುದ್ಧೋತ್ತರ ಕಾಲದ ಏಸಿಯದ ಶಾಂತಿ ಆಧರಿಸಿ ನಿಲ್ಲಬೇಕಾಗಿದೆ. ಹಳೆಯ ಕಾಲದ ಸಾಮ್ರಾಜ್ಯಶಾಹೀ ಪದ್ಧತಿಯನ್ನು ಬಿಟ್ಟುಕೊಟ್ಟು ಜಾಗತಿಕ ಅಥವಾ ಪ್ರಾದೇಶಿಕ ಕರ್ತವ್ಯದ ದೃಷ್ಟಿಯಿಂದ ಹಿಂದುಸ್ಥಾನ ಮತ್ತು ನಮ್ಮ ದೇಶದ ರಕ್ಷಣಾವ್ಯವಸ್ಥೆಯ ಸಂಬಂಧವು ಎರಡು ರಾಷ್ಟ್ರಗಳೂ ಒಪ್ಪುವಂತೆ ನಿರ್ಣಯಿಸಲ್ಪಟ್ಟದ್ದೇ ಆದರೆ ಮತ್ತೊಂದು ಯುದ್ಧದಿಂದಾಗಬಹುದಾದ ಭಯಂಕರ ಕಷ್ಟನಷ್ಟಗಳಿಂದ ಏಸಿಯದ ರಾಷ್ಟ್ರಗಳನ್ನು ಉಳಿಸಬಹುದು.

ರಕ್ಷಣೆಯಲ್ಲಿ ಪಾಲುಗಾರಿಕೆ

ಹಿಂದುಸ್ಥಾನದಲ್ಲಿ ರಾಜಕೀಯ ಸಂಗತಿಗಳು ಎತ್ತ ತಿರುಗಿದರೂ ಸರಿ, ಬ್ರಿಟನ್ ಭಾರತಗಳು ಒಟ್ಟು ಸೇರಿ ರಕ್ಷಣಾವ್ಯವಸ್ಥೆಯ ಬಗ್ಗೆ ಸಂಯುಕ್ತ ಯೋಜನೆಯನ್ನು ಸದ್ಯದಲ್ಲೇ ತಯಾರಿಸುವುದು ಅಪೇಕ್ಷಣೀಯವಾಗಿದೆ.

ಅತ್ಯಂತ ಮುಂಬರಿದ ರಾಷ್ಟ್ರವಲ್ಲದೆ ಇನ್ನಾವುದೂ ಈ ಕಾಲದಲ್ಲಿ ಬಹು ದೊಡ್ಡದಾದ ಆಧುನಿಕ ಯುದ್ಧೋಪಕರಣಗಳ ಭಾರವನ್ನು ಹೊರಲಾರದು. ಈಗಿರುವ ಹಿಂದುಸ್ಥಾನದ ಕೈಗಾರಿಕೆಯ ಬೆಳವಣಿಗೆಯನ್ನು ಕಂಡರೆ ಈ ಕಾಲದ ಭೂವಿಮಾನ ಸೈನ್ಯಗಳಿಗೆ ಬೇಕಾದ ಆಯುಧ ಸಾಮಗ್ರಿಗಳನ್ನು ಅದು ಒದಗಿಸಿಕೊಡಲಾರದು. ಅದಲ್ಲದೆ, ಅದು ಯುದ್ಧೋಪಕರಣಗಳನ್ನು ಕಾರಖಾನೆಗಳಲ್ಲಿ ತಯಾರಿಸಲು ಪ್ರಾರಂಭಿಸಿದ್ದೇ ಆದರೆ ಸಾಮಾನ್ಯ ಜನತೆ ಲೆಕ್ಕವಿಲ್ಲದಷ್ಟು ಕಷ್ಟನಷ್ಟ ಪರಂಪರೆಗಳನ್ನು ಅನೇಕ ಕಾಲದ ವರೆಗೆ ಅನುಭವಿಸಬೇಕಾಗಬಹುದು. ಈ ರಕ್ಷಣಾವ್ಯವಸ್ಥೆಯ ಪಾಲುಗಾರಿಕೆಯನ್ನು ಯುದ್ಧ ಸಂಭವಿಸದಂತೆ ಮಾಡುವ ಒಂದು ಜಾಗತಿಕ ಪದ್ಧತಿಯ ನಿರ್ಮಾಣಕ್ಕಾಗಿ ಪರಸ್ಪರರು ತಮ್ಮ ಸಮ್ಮತಿಯ ಮೇರೆಗೆ ಪರಸ್ಪರ ಅನುಕೂಲದೃಷ್ಟಿಯಿಂದ ರಚಿಸತಕ್ಕದ್ದು; ಮತ್ತು ಏಸಿಯದ ಸುಸ್ಥಿತಿಯನ್ನು ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಿಂದ ಕಾಯ್ದುಕೊಳ್ಳುವುದು ಕೂಡ ಭಾರತ ಬ್ರಿಟನ್ನುಗಳಿಗೆ ಮುಖ್ಯವಾದುದು.


ಅರ್ಧೋಪವಾಸವೇ ಅಭ್ಯಾಸವಾಗಿ ಹೋಗಿರುವ ಹಿಂದೀಯರನ್ನು ಆ ಮಟ್ಟದಿಂದ ಮೇಲೆತ್ತಬೇಕಾದರೆ ನಮ್ಮೆರಡು ರಾಷ್ಟ್ರಗಳ ಸಹಕಾರವು ಅತ್ಯಾವಶ್ಯಕವಾದುದು. ವಿಜ್ಞಾನದ ಸಹಾಯ... ಭಾರತದ ಬೆಳೆಯನ್ನು ಅತ್ಯಧಿಕ ಪ್ರಮಾಣದಿಂದ ಹೆಚ್ಚಿಸ...ದರೆ ಬ್ರಿಟನ್ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳಂತಹ ಆಗಲೇ ಕೈಗಾರಿಕೆಯಲ್ಲಿ ಮುಂಬರಿದ ದೇಶಗಳಿಂದ ಸಾಮಾನುಗಳನ್ನೂ ಕೆಲಸಗಾರರನ್ನೂ ಕರೆಸಿಕೊಳ್ಳುವುದು ಅವಶ್ಯವಾದುದು. ಜನರಿಗೆ ಬೇಕಾದ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆಗಳ ಬೆಳವಣಿಗೆಯ ಜೊತೆಜೊತೆಗೇ ಮಣ್ಣಿನ ಪೋಷಕ ಶಕ್ತಿಯನ್ನು ವೃದ್ಧಿಗೊಳಿಸಿ ವ್ಯವಸಾಯ ತಂತ್ರವನ್ನು ಸುಧಾರಿಸಿದ ಹೊರತು ಹಿಂದುಸ್ಥಾನದ ಬಡತನವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ವ್ಯವಸಾಯ ಮತ್ತು ಕೈಗಾರಿಕೆಗಳ ವೃದ್ಧಿಯ ಮಟ್ಟವನ್ನು ಬೇಕಾದಷ್ಟು ಮೇಲಕ್ಕೇರಿಸದೆ ಹೋದರೆ ಪ್ರಾಂತೀಯ ಸರಕಾರಗಳ ಮೂಲಭೂತ ಸಾಮಾಜಿಕ ಸೇವೆಗಳಾದ ವಿದ್ಯಾದಾನ ಮತ್ತು ಸಾರ್ವಜನಿಕ ಆರೋಗ್ಯ ಸುಧಾರಣೆ- ಇವುಗಳಿಂದ ಏನೂ ಪ್ರಯೋಜನವಾಗಲಾರದು. ಏಕೆಂದರೆ, ಭಾರತದಲ್ಲೇ ಉತ್ಪನ್ನವಾದ ಐಶ್ವರ್ಯದಿಂದ ಅವುಗಳ ವೆಚ್ಚವನ್ನು ನಿರ್ವಹಿಸಬೇಕಾಗಿದೆ.

ಇದರಿಂದ ವ್ಯವಸಾಯ ಮತ್ತು ಕೈಗಾರಿಕೆಗಳಿಂದಾಗುವ ಉತ್ಪನ್ನವನ್ನು ಹೆಚ್ಚಿಸಲು ಬೇಕಾದ ದೊಡ್ಡದೊಡ್ಡ ಯಂತ್ರೋಪಕರಣಗಳಿಗಾಗಿಯೂ ವೈಜ್ಞಾನಿಕ ಸಲಹೆಗಳಿಗಾಗಿಯೂ ಹಿಂದುಸ್ಥಾನವು ಬ್ರಿಟನ್ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳ ಗಿರಾಕಿಯಾಗಬೇಕೆಂದು ಸಿದ್ಧವಾದಂತಾಯಿತು. ಆದರೆ ಹಿಂದುಸ್ಥಾನವು ಈ ವಿಷಯದಲ್ಲಿ ಈಗ ತನ್ನ ಚರಿತ್ರೆಯಲ್ಲೇ ಕಾಣಸಿಗದಂತಹ ಉತ್ತಮ ಪರಿಸ್ಥಿತಿಯಲ್ಲಿದೆಯೆಂದು ಹೇಳಬಹುದು. ಯುದ್ಧ ಪ್ರಾರಂಭ ಕಾಲದಿಂದ ಈ ವರೆಗೆ ಭಾರತವು ಬ್ರಿಟನ್ನಿಗೆ ಕೊಡಬೇಕಾಗಿದ್ದ ಸಾಲವೆಲ್ಲವನ್ನು ತೀರಿಸಿದ್ದಲ್ಲದೆ ೭೦ ಕೋಟಿ ಪೌಂಡುಗಳಷ್ಟು ಧನವನ್ನು ಬ್ರಿಟನ್ನಿನಿಂದಲೇ ಪಡೆಯಲಿದೆ. ದೇಶದ ಪುನರ್ರಚನೆಗಾಗಿ ಕೈಗಾರಿಕೆಯನ್ನು ವಿಸ್ತರಿಸಲು ಬೇಕಾದ ಆಧುನಿಕ ಯಂತ್ರಸಾಮಗ್ರಿಗಳನ್ನೂ ತಜ್ಞರನ್ನೂ ತರಿಸಿಕೊಳ್ಳಲು ಭಾರತವು ಈ ಧನವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಪಂ. ನೆಹರೂರವರಿಗೆ ಮನ್ನಣೆ

ಮೇಲೆ ಹೇಳಿದ ಕಾರ್ಯವೆಲ್ಲ ನಡೆವುದು ಭಾರತದ ಜನನಾಯಕರ ಮೇಲೆಯೇ ಅವಲಂಬಿಸಿದೆ. ಇದಕ್ಕೆ ಭಾರತದ ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚನೆಯ ಬಗ್ಗೆ ವಾಯಿಸರಾಯರು ಮಾಡಿದ ಸಲಹೆಗಳಿಗೆ ಶೀಘ್ರ ಪುರಸ್ಕಾರ ದೊರೆತದ್ದೇ ನಿದರ್ಶನವಾಗಿದೆ. ಅದು ಬ್ರಿಟಿಶ ಭಾರತದ ಪ್ರಾಂತಗಳಲ್ಲಿ ಭಾರತೀಯರ ಆಳಿಕೆಯನ್ನು

—೩ ನೇ ಪುಟ ನೋಡಿರಿ



ದತ್ತವಾಣಿ

ಬರೆದವರು ಶ್ರೀ ಬಿ.ಜಿ. ಅಣ್ಣಾರಾಯರು; ಪ್ರಕಾಶಿಸಿದವರು ಧಾರವಾಡ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರು; ಪುಟಗಳು ೨೦೩ ಮತ್ತು ಬೆಲೆ ೧—೪—೦ ರೂಪಾಯಿ.

ಗ್ರಂಥಮಾಲೆಯ ಸಂಪಾದಕರೆಂದಂತೆ ಕನ್ನಡದಲ್ಲಿ ವಿಮರ್ಶಾ ಸಾಹಿತ್ಯ ಕಡಿಮೆ. ಸುಪ್ರಸಿದ್ಧ ಗ್ರಂಥಕರ್ತರ ಗ್ರಂಥಗಳ ಪರಿಚಯ ಮಾಡಿಕೊಡುವ ವಿಮರ್ಶಾತ್ಮಕವಾದ ರಸಜ್ಞತೆಯುಳ್ಳ ಪ್ರಬಂಧಗಳು ಇಂಗ್ಲೀಷಿನಲ್ಲಿ ಹೇರಳವಾಗಿವೆ. ಕನ್ನಡದಲ್ಲಿ ಅಂಥವುಗಳ ಕೊರತೆ ಹೆಚ್ಚಾಗಿದೆ. ಅದನ್ನು ತುಂಬಲು ಮಾಡಿದ ಪ್ರಯತ್ನರೂಪವಾದ 'ದತ್ತವಾಣಿ'ಯು ಸ್ವಾಗತಾರ್ಹವಾಗಿದೆ.

ಗ್ರಂಥಕರ್ತರು ಇಲ್ಲಿ ಶ್ರೀ ಬೇಂದ್ರೆಯವರ ಹಲವಾರು ಕವಿತೆಗಳ ವಿವೇಚನೆ, ದೃಷ್ಟಾಂತಗಳೊಡನೆ ಅವುಗಳಲ್ಲಿಯ ದೇಶಪ್ರೇಮ, ಪ್ರಕೃತಿಪ್ರೇಮ, ಸಮಾಜಪ್ರೇಮ, ಅಧ್ಯಾತ್ಮಿಕ ಪ್ರೇಮ, ರತಿಪ್ರೇಮಗಳ ಬಗೆಯನ್ನು ವಿವರವಾಗಿ ಪ್ರತಿಪಾದಿಸಿರುವುದು ತಿಳಿಯಬರುತ್ತದೆ. ಶ್ರೀ ಅಣ್ಣಾರಾಯರು ದತ್ತಕಾವ್ಯದರ್ಶನ ತಮ್ಮ ಹೃದಯದ ಮೇಲೆ ಮಾಡಿದ ಪರಿಣಾಮವನ್ನು ಸೋದಾಹರಣವಾಗಿ ವಿವರಿಸಿದ್ದಾರೆ,

ಮೊದಲು ಶ್ರೀ ಮಾಧವರಾಯರ 'ಬಾಹಿರ'ದಲ್ಲಿ ಎಂಬ ಪದ: 'ಶ್ರೀಧರ,' 'ಪ್ರಕೃತಿಯ ಮಡಿಲಲ್ಲಿ ಬೇಂದ್ರೆ,' 'ಬೇಂದ್ರೆಯವರ ಸಾಮಾಜಿಕ ಕವನಗಳು,' 'ಅಂಬಿಕಾತನಯದತ್ತರ ಆಧ್ಯಾತ್ಮಿಕತೆ,' 'ಬೇಂದ್ರೆಯವರ ಪ್ರೇಮಗೀತಗಳು,' 'ಸಖೀಗೀತ,' 'ಮೂರ್ತಿ'—ಎಂಬ ೭ ಪ್ರಬಂಧಗಳಿವೆ. ಅವುಗಳಲ್ಲಿ ಬೇಂದ್ರೆಯವರ ಹಲವು ಕವನ ಸಂಗ್ರಹಗಳ ಪದ್ಯಗಳನ್ನಾಯ್ದುಕೊಂಡು ಗುಣಪ್ರಶಂಸೆ ಮಾಡಲಾಗಿದೆ; ಮತ್ತು ಕೊನೆಗೆ ಶ್ರೀ ಬೇಂದ್ರೆಯವರ ಸಿದ್ಧಿಯ ವಿವಿಧ ಮುಖಗಳನ್ನು ತೋರಿಸಿ ಕೊಡಲಾಗಿದೆ.

ಗ್ರಂಥವನ್ನು ಓದಿ ಮುಗಿಸಿದ ಬಳಿಕ ಗ್ರಂಥಕರ್ತರು ಮುನ್ನುಡಿಯಲ್ಲಿ ಹೇಳಿದಂತೆ ಗ್ರಂಥದಲ್ಲಿರುವುದು ಕೇವಲ ಗುಣಗ್ರಹಣವಲ್ಲದೆ ಗುಣದೋಷವಿಮರ್ಶೆಯಲ್ಲವೆಂಬುದು ಸ್ಪಷ್ಟವಾಗಿ ಭಾಸವಾಗುತ್ತದೆ. ಹೊಸ ಕನ್ನಡ ಕವಿತೆಗಳೇ ಅರ್ಥವಾಗುವದಿಲ್ಲ, ಇನ್ನು ಸ್ವತಃ ಕವಿಗಳೇ ಓದಿದಾಗ ಅರ್ಥವಾಗುವುದು—ಎಂದು ಮಂಕಾಗಿ ಅಭಿಪ್ರಾಯಪಡುವ ರಸಿಕವರ್ಗಕ್ಕೆ ಇಂತಹ ಪುಸ್ತಕ ಬಹಳ ಉಪಕಾರಿಯಾದುದು. ಅಂಬಿಕಾತನಯರ ಹಾಡುಗಳಲ್ಲಿ ಆಸ್ವಾದ ಮಾಡಬೇಕಾದ ಮುಖ್ಯಾಂಶಗಳನ್ನು ಎತ್ತಿತೋರಿಸಿ ಓದುಗರಿಗೆ ಮಾರ್ಗದರ್ಶನ ಮಾಡುವ ಕಾರ್ಯವನ್ನು ಈ ಪುಸ್ತಕದಲ್ಲಿ ಶ್ರೀ ಅಣ್ಣಾರಾಯರು ಜಯಪ್ರದವಾಗಿ ಸಾಗಿಸಿದ್ದಾರೆ. ಈ ಬಗ್ಗೆ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಪುನರಾಗಮನ

ಬರೆದವರು 'ಧನ್ವಂತ'ರು; ಪ್ರಕಾಶಿಸಿದವರು ಶ್ರೀ ಎಚ್.ಎಸ್.ರಾವ್, ಬ್ರದರ್ಸ್ ಅವರು; ಬೆಂಗಳೂರು; ಪುಟಗಳು ೧೩೦; ಬೆಲೆ ೧—೪—೦ ರೂಪಾಯಿ.

ಇದೊಂದು ಜಯಪುರವನ್ನು ಕ್ಷೇತ್ರವಾಗಿ ತೆಗೆದುಕೊಂಡು ಬರೆದ ಕಥೆ. ಗ್ರಂಥಕರ್ತರು ಇದರಲ್ಲಿಯ ವಿಷ್ಣು, ಮಹಾದೇವ, ಶಂಭು, ಮನೋರಂಜನ, ಜ್ಞಾನೇಂದ್ರಕುಮಾರ, ಪದ್ಮೇಶ್ವರ, ಜಯಂತಿ, ರೂಪಚಂದ್ರ—ಇವರತ್ತ ಓದುಗರ ಗಮನವನ್ನೆಳೆದಿದ್ದಾರೆ.

ಕಥಾವೃತ್ತಾಂತವು ಸಹಜವಾದುದೆನಿಸಿದರೂ ಕಥಾನಿರೂಪಣ, ಪಾತ್ರಪರಿಪೋಷಣ—ಇವು ಅತಿ ತ್ವರೆಯಿಂದ ಸಾಗುವುದರಿಂದ ಓದುಗರ ಮನಸ್ಸಿನ ಮೇಲೆ ಪಾತ್ರಗಳು ಸ್ಥಿರಮುದ್ರೆಯನೊತ್ತಲಾರವು; ಅವು ಗ್ರಂಥಕರ್ತರ ಸೂತ್ರದ ಬೊಂಬೆಗಳಂತೆ ನಿಬಂಧನಾರ್ಥದಲ್ಲಿ ಉದ್ದಿಷ್ಟ ಕಾರ್ಯವನ್ನು ಮಾಡುವುವು; ಸಿರ್ಣಯಗಳನ್ನು ಬದಲಾಯಿಸುವುವು ಮತ್ತು ತಮ್ಮ ಭಾವನೆಗಳನ್ನು ತಿದ್ದಿಕೊಳ್ಳುವುವು. ಶಿಲ್ಪಕಲೆಯ ಪುನರುಜ್ಜೀವನ ಪ್ರಯತ್ನದ ದಿವ್ಯಾದರ್ಶದ ಸಡಿಲಿಕೆಯು ರಾಗಿಣಿಯಾದ ಜಯಂತಿಯಾದರೂ

ತರ್ಕಸ್ಸಿನ ಸಿಂಹವೇ. ಈ ಪಾತ್ರಗಳು ಹೀಗೆ ದುರ್ಬಲಗಳಾಗಿರದಿದ್ದರೆ ಕಥೆಯು ಉತ್ತಮ ದರ್ಜೆಯದಾಗಬಹುದಿತ್ತು. ಉಳಿದದ್ದೆಲ್ಲ ಚೆನ್ನಾಗಿದೆ.

ಲಂಚ ಪ್ರಪಂಚ

ಬರೆದವರು ಶ್ರೀ ಮ. ಶ್ರೀಧರಮೂರ್ತಿಗಳು; ಪ್ರಕಾಶಿಸಿದವರು ಸಾಹಿತ್ಯಾಲಯ, ಚಿತ್ರದುರ್ಗ, ಅವರು; ಪುಟಗಳು ೬೩; ಬೆಲೆ ೮ ಆಣೆಗಳು.

ಲಂಚ ತೆಗೆದುಕೊಳ್ಳುವುದೊಂದು ಸ್ವಯಂಪ್ರಾಪ್ತವಾಗಿ ವ್ಯವಹಾರ ಪ್ರಪಂಚದಲ್ಲಿ ಸಾಗಿರುವುದು ಸರ್ವವೇದ್ಯವಾಗಿದೆ. ಇದನ್ನೇ ವಸ್ತುವಾಗಿಟ್ಟುಕೊಂಡು ಶ್ರೀ ಶ್ರೀಧರಮೂರ್ತಿಯವರು ಲಂಚಕೋರರಾದ ೫ ವ್ಯಕ್ತಿಗಳ ಚಿತ್ರವನ್ನು ಈ ಕಥಾಸಂಗ್ರಹದಲ್ಲಿ ಕೊಟ್ಟಿದ್ದಾರೆ. ಈ ೫ ಜನರಲ್ಲಿ ಒಬ್ಬೊಬ್ಬರು ಒಂದೊಂದು ಮಾರ್ಗದಿಂದ ಲಂಚ ತೆಗೆದುಕೊಳ್ಳುವುದನ್ನು ಜಯಪ್ರದವಾಗಿ ಸಾಧಿಸಿದವರಿದ್ದಾರೆ. ಎಲ್ಲ ಸರಿ; ಆದರೆ ಒಂದು ಮಾತನ್ನು ಮಾತ್ರ ಇಲ್ಲಿ ಹೇಳದಿರಲಾಗದು: ಮಾತಾಡುವ ಸರಳ ಶೈಲಿಯಲ್ಲಿ ಗುಮಾಸ್ತ, ಶಂಕರ ಅಯ್ಯರ್, ಶಾನುಭೋಗರು, ಪೋಲೀಸ ಮತ್ತು ರೇಲ್ವೆ ನೌಕರರು, ಅಂಗಡಿಯ ಸಾಹುಕಾರ—ಇವರೆಲ್ಲ ಕಾಯಿದೆಯ ಕಣ್ಣಿಗೆ ಧೂಳೆರಚುವ ... ಚೆನ್ನಾಗಿ ವಿಶದಪಡಿಸಿರುವರಾದರೂ ಆಯಾ ವ್ಯಕ್ತಿಗಳ ಗುಣ ಸ್ವಭಾವಗಳನ್ನು ಇನ್ನೊಬ್ಬರ ಹೇಳಿಕೆಯ ರೂಪದಲ್ಲಿ ಕೊಟ್ಟಿರುವುದರಿಂದ ಈ ಕಥೆಗಳಲ್ಲಿ ಕಥಾಲಕ್ಷಣಗಳಿಗಿಂತ ಹರಟೆಯ ಲಕ್ಷಣಗಳೇ ಹೆಚ್ಚಾಗಿವೆಯೆನ್ನಿಸದಿರದು. ಒಟ್ಟಿನ ಮೇಲೆ ಸಂಗ್ರಹ ಸ್ವಾಗತಾರ್ಹವಾಗಿದೆ.

ಗಗನ ಚುಕ್ಕಿ

ಬರೆದವರು: ಶ್ರೀ ಎಸ್.ವಿ. ಪರಮೇಶ್ವರ ಭಟ್ಟರು; ಪ್ರಕಾಶಿಸಿದವರು ಶ್ರೀ ಎಚ್. ಎಸ್. ದೊರೆಸ್ವಾಮಿ ಬಿ. ಎಸ್‌ಸಿ; ಮಿತ್ರಸಂಘ, ಬೆಂಗಳೂರು ಅವರು; ಪುಟಗಳು ೬೮; ಬೆಲೆ ೧ ರೂಪಾಯಿಗಳು.

'ರಾಗಿಣಿ'ಯಿಂದ ಹೆಸರು ಪಡೆದ ಭಟ್ಟರು ಇಂದು ಒಂದೇ ಸಲ 'ಗಗನ ಚುಕ್ಕಿ'ಗೆ ಹಾರಿದ್ದಾರೆ. ಇವರು ಶಕ್ತ ಕವಿಗಳು, ಇವರದು ಪಳಗಿದ ಕೈ. ವರ್ಣನೆಯಲ್ಲಿ ಅವರು ನಿಪುಣರು. ಸಂಗ್ರಹದಲ್ಲಿರುವ ೪೪ ಕವನಗಳಲ್ಲಿ ಅವರ ವರ್ಣನಾ ಶಕ್ತಿಯನ್ನು ಸ್ಪಷ್ಟಪಡಿಸುವ ಕಿರೀಟಪ್ರಾಯವಾದ ಪದ್ಯವೆಂದರೆ 'ಭಟ್ಕಳ'ವೇ. ಇವರು ವಿರಳವಾಗಿ ಉಪಯೋಗಿಸುವ ಸಾಂಗತ್ಯದಲ್ಲಿ.

ತಾಯಿ ವಸುಂಧರೆ ತೊಡವಾಗಿ ಧರಿಸಿದ
ಹಚ್ಚನೆ ಹೊಲಗದ್ದೆ ತೋಟಗಳು!
ಉತ್ತರ ದಿಕ್ಕಿಗೆ ನೊಗವಾಡಿ ಮಲಗಿದ
ಉನ್ನತ ಮಲೆಗಳ ಮೂರ್ತಿಗಳು!
ಭಟ್ಕಳವೆಂದರೆ ಧರೆಬಂದ ಕಡಲಂ
ಕವಿಯೆದೆ ಮುಬ್ಬುವುದುಕ್ಕುವುದು'— ಎಂಬ

ರಸಾನಂದ ಲಹರಿಯು ಸಮುದ್ರದ ತೆರೆಗಳಂತೆ ಸಾಗುವುದು. ಇಂತಹ ಸ್ವಭಾವೋಕ್ತಿಗಳಿಂದ ತುಂಬಿದ ಪದ್ಯಗಳು ಹಲವಾಗಿವೆ. 'ಮೈಸೂರಿನ ಒಂದು ಸಂಜೆ' 'ಮುತ್ತುಗದ ಮರ, ಬೇಸಗೆಯಲ್ಲಿ ತುಂಗಾದರ್ಶನ' ಎಂಬವು ಅಂಥವು. ಕವಿಗಳು ಅರಿಕೆ ಮಾಡಿಕೊಂಡ ಅವರ ಮುಂದಗಾಮಿತ್ವವನ್ನು ಖಂಡಿಸುವವೋ ಎಂಬಂತೆ 'ನೋಡಿ ಪ್ರಪಂಚವನ್ನು ಏನೆಂಥ ಬಾಳು!' 'ಮನೆಮನೆಗೆ ತಿರುಗುತಿಹ ಪರದೇಸಿ ಭಿಕ್ಷುಕಿಯ ನೋಡಿ ಪುಳಕಿತನಾಗು ಭಯಚಕಿತನಾಗಿ,' 'ನವಯುಗದ ಸಂಸ್ಕೃತಿಯ ನಾಗರಿಕ ಅವತಾರ; ಏನಿದೋ ಧಿಕ್ಕಾರ ಸಾವಿರ ತಿರಸ್ಕಾರ!' 'ಪಟದಂಪ್ಯಕೇಶರಗಳ ಬೆಳಸಿ ಫರ್ಜೆಸ್ಸೆ' ಎಂಬಂಥ ಕೆಲವು ಸಾಲುಗಳು ಕಳ್ಳತನದಿಂದ ಕಾಣಿಸಿಕೊಂಡಿವೆ. ವೆಂಕಟಾಚಾರ್ಯ, 'ಶ್ರೀ'ಯವರು, ಶ್ರೀನಿವಾಸರು, ಮಹಾತ್ಮಾ ಗಾಂಧಿ, ವೇದವ್ಯಾಸ— ಇವರನ್ನು ಸ್ತೋತ್ರ ಮಾಡಿ 'ಅರಿಕೆ'ಯಲ್ಲಿ ಹೇಳಿದ 'ಅಪೇಕ್ಷೆಯವಾದುದರಲ್ಲಿಯೂ ಆರ್ಯರಾದವರಲ್ಲಿಯೂ ಗೌರವ ವಿಶ್ವಾಸಗಳನ್ನು ವ್ಯಕ್ತಪಡಿಸುವ ಶರಣಾಗತಿ ಭಾವವನ್ನು ವ್ಯಕ್ತ ಮಾಡಿದ್ದಾರೆ. ಈ ಧರ್ಮರಾಯ ಸ್ವಭಾವದ ಶಾಂತ ಮಧುರ ಪ್ರವೃತ್ತಿಯ ಈ ಕವಿಗಳು ರಕ್ತಿಮ, ನೀಲಿಮ, ಕಾಳಿಮ ಆದಿ ಕನ್ನಡಕ್ಕೆ ಸಹಜವಲ್ಲದ ಕೆಲವು ಪದಪ್ರಯೋಗಗಳನ್ನು ಬಿಟ್ಟು ಮುಂದೆಯೂ ಹೀಗೇ ಉತ್ತಮ ಕವಿತೆಗಳನ್ನು ರಚಿಸುತ್ತ ಕನ್ನಡ ಸಾಹಿತ್ಯವನ್ನು ಬೆಳಸಿ ಉಪಕರಿಸಲೆಂದು ಹಾರೈಸುವುದಲ್ಲದೆ 'ಮೇಘನಾದ' ಹೊರಡಿಸಿದ ಕೆಲವೇ ಕಾಲದ ಬಳಿಕ ಮತ್ತೊಂದಾದ ಈ ಕವನಸಂಗ್ರಹವನ್ನು ಪ್ರಕಾಶ ಮಾಡಲು ಶಕ್ತರಾದ ಶ್ರೀ ದೊರೆಸ್ವಾಮಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರೇಮ ಕಾಶ್ಮೀರ

ಲೇಖಕರು:— ಶ್ರೀ ಕುವೆಂಪು. ಪ್ರಕಾಶಕರು: ಕಾವ್ಯಾಲಯ, ಮೈಸೂರು. ೭೨ ಪುಟ ಬೆಲೆ ರೂ. ೧/೮.

"ಪ್ರೇಮ ಕಾಶ್ಮೀರ"ದಲ್ಲಿ ಶ್ರೀ ಪುಟ್ಟಪ್ಪನವರು ಕಾಲಕಾಲಕ್ಕೆ ಬರೆದ ಪ್ರೇಮ ಗೀತಗಳ ಸಂಗ್ರಹವುಂಟು. ೭೨ ಪುಟಗಳಲ್ಲಿ ೫೬ ಭಾವಗೀತೆಗಳಿವೆಯೆಂದ ಮೇಲೆ ಅವೆಲ್ಲ ಚುಟುಕಾಗಿವೆಯೆಂದು ಬೇರೆ ಹೇಳಬೇಕಾಗಿಲ್ಲ. ಒಂದೇ ರಸದ ಸಂಚಾರವಿರುವ ಕವಿತೆಗಳನ್ನು ಒಂದೆಡೆ ಸೇರಿಸಿ ಕೊಟ್ಟದ್ದು ಕವಿಯ ಲೇಖನಿ ಆ ರಸದ ಮೇಲೆ ಸಾಧಿಸಿದ ಪ್ರಭುತ್ವವನ್ನು ಅಳೆಯಲು ಅನುಕೂಲ ಮಾಡಿಕೊಟ್ಟಿದೆ. ಅದರೊಂದಿಗೆ ಬರೆದ ದಿನಾಂಕಗಳೂ ಕೊಡಲ್ಪಟ್ಟಿದ್ದರೆ ಇನ್ನಷ್ಟು ಗುಣವಿತ್ತು. "ಪ್ರೇಮ ಕಾಶ್ಮೀರ"ದಲ್ಲಿ ಕಾಣುವ ಪ್ರೀತಿನಿರೂಪಣ ಬಹುಮುಖವಾದುದು— ಸ್ತ್ರೀ-ಪುರುಷ ಪ್ರೇಮವೊಂದೇ ಅಲ್ಲ. ಮಾತಾ-ಪುತ್ರ ಪ್ರೇಮ, ಮಾತೃಮಹಿಮೆ, ಜೀವೇಶ್ವರ ಪ್ರೇಮ, ಮೊದಲಾದ ಹಲಬಗೆಯನ್ನು ಅವರ ಕಾವ್ಯದ ಹಕ್ಕಿಯ ರೆಕ್ಕೆ ಮುಟ್ಟುತ್ತದೆ.

"ಸೊಬಗು", "ಪ್ರೇಮ" ಎಂಬವು ತಪ್ಪಿಸಿಕೊಂಡು ಓಡಬೇಕಾದ ಹೇಯ ವಸ್ತುಗಳಲ್ಲವೆಂಬ ಪ್ರೇಮಿಕನ ತತ್ವಜ್ಞಾನ

"ಸೊಬಗನೇಕೆ ಹಳಿಯುತಿರುವೆ,
ಬಣಗು ವೈರಾಗಿ?"

ಎಂದು ಕೇಳಿ

"ಪರಮಪುರುಷ ಸೃಷ್ಟಿರೂಪಿ
ಅದನ ಹಳಿಯುವವನೆ ಪಾಪಿ"
(ಗೋಪಿ)

"ಜಗದೀಶ್ವರನೆ ವಿಶ್ವಸಂಸಾರಿಯಾಗಿರಲು
ಸಂಸಾರ ಪಾಶವೆಂದೆನಬೇಡನ್ನೆ"
(ಬಟ್ಟಕಾಯಿಗೆ)

ಎಂದು ತರ್ಕಮಾಡುತ್ತದೆ. ಅವನಿಗೆ

"ರಾಗವೇ ವೈರಾಗ್ಯವಪ್ಪುದಲ್ಲಿ
ಭೋಗವೇ ತ್ಯಾಗವಾಗಿರುವುದಲ್ಲಿ"
(ಹೃದಯ ಮಂದಿರದಲ್ಲಿ)

(೧೩ ನೇ ಪುಟ ನೋಡಿರಿ)

ಕದ್ದು ಕೇಳಿದ್ದು

ಸಪ್ತಬ್ದ ಪೂರ್ತಿ

ಲೇ:— ವೆಂಕಣ್ಣಾಚಾರ್ಯ ಪಪ್ಪು ಬಿ. ಎ. ಎಲ್. ಎಲ್. ಬಿ. ವಕೀಲ ಹುಬ್ಬಳ್ಳಿ

ಕಲ್ಲಪ್ಪಾ:— ಕಾಳಪ್ಪನವರೂ ನಾಳೆ ತಾವು ವಯಸ್ಸಿನ ಅರವತ್ತರ ಮನಿ ದಾಟತೀರಿ. ಅಂದರೆ ಸಪ್ತಬ್ದ ಪೂರ್ತಿಯಾಗತದ.

ಕಾಳಪ್ಪಾ:— ಓಳತನ್ನು, ನೌಕರಿ ಬಿಡೂತನಕಾ ೫೫ ರ ಮ್ಯಾಲೆ ಒಂದು ದಿವಸ ಸಹಿತ ಹೆಚ್ಚಾಗದು.

ಕಲ್ಲಪ್ಪಾ:— ಸತಿ ಸಾವಿತ್ರಿ ಸೌಭಾಗ್ಯ ಸೂರ್ಯೋದಯಕ್ಕ ಹೋಗಬೇಕಂತ ಶಾಪ ಇತ್ತು, ಆದರ, ಆ ಸೂರ್ಯ ಉದಯ ಅಗಬೇಲ್ಲಾ ಹಾಂಗ ನಿಮ್ಮ ನೌಕರಿ ಮುಗಿಯೋತನಕಾ ೫೬ ನೇ ವರ್ಷ ಹಣೆಕೀ ಹಾಕೂ ಹಾಂಗ ಇಲ್ಲಾ ಅನ್ನರಿ.

ಕಾ:— ಅಂತಹ ದೊಡ್ಡ ಪೌರಾಣಿಕ ಉಪಮಾನ ನನಗ್ಯಾಕ.

ಕ:— ಪೌರಾಣಿಕ ಅಥವಾ ಸಾಮಾಜಿಕ ಉಪಮಾ ಕೊಡಲಿಕ್ಕೆ ಇದೇನು ರೆಕ್ಕಿರಂಟಿಓ? ಇಲ್ಲಿ ೫೫ ರ ಮ್ಯಾಲೆ ಅದರ ಏನತಪ್ಪ ಅದ. ನೀವು ಮುಲ್ಕಿ ಖಾತೀದಿಂದ ನಿವೃತ್ತಾಗಿ ಪುನಃ ಅಹಾರ ಖಾತೀದ ನೌಕರಿಗೆ ಪ್ರವೃತ್ತ ಅಗೀರಿ.

ಕಾ:— ಖಾತೆ ಬ್ಯಾರೆ ಅವರೂ......

ಕ:— ಮುಲ್ಕಿ ವಳಗೂ ಖಾತೆ (ತಿಂಬೋದು) ಅಹಾರದಾಗೂ ಖಾತೆ (ತಿಂಬೋದು) ಅಲ್ರೀ. ಹೀಂಗ ಆಕೋ ನಾಕ ತಿಂದೂ ನಿಮಗೆ ಅಜೀರ್ಣ ಆಗಿಲ್ಲ..

ಕಾ:— ......

ಕ:— ಆ "೧೦೦೦" "೫೦೦" ರೂಪಾಯಿ ನೋಟೀನ ರದ್ದೀಕರಣದ ಜುಲಾಬು ನಿಮಗೇನಾದರೂ ನಾಟೇದೊ?

ಕಾ:— ಛೀ! ನಮಗೆ ಕ್ರಾನಿಕ್ ಮಲಬದ್ಧತೆ.

ಕ:— ಅಂದರ ತಿಂದದ್ದೆಲ್ಲಾ ಭದ್ರತೆ.

ಕಾ:— ಎಲ್ಲೀ ತಿಂಬೋದ್ರೀ, ಅದೆಲ್ಲಾ ಹಳೆ ಮಾತಾದವು.

ಕ:— ಇವನ್ನೆಲ್ಲಾ ಬಿಟ್ಬಿಡ್ರಿ. ಈಗ ಅಹಾರ ಖಾತೇದ ಕಾರಕೂನರ ಅಂದರ ಈಸ್ಟ ಇಂಡಿಯಾ ಕಂಪನಿ ಕಾರಕೂನರೆ ಅಗೇದ. ಆ ಕಾರಕೂನರು ಇಂಗ್ಲಂಡಿಗೆ ತಿರುಗಿ ಹೋದಮ್ಯಾಲೆ ಅವರಿಗೆ "ಹಿಂದೀ ನವಾಬರು" ಅಂತ ಸಂಬೋಧಿಸತಿದ್ದರು. ನಿಮಗೆ ಏನಂತ ಕರಿಬೇಕು?

ಕಾ:— ಈಗ ತಿಳಿಲಿಕ್ಕೆ ಸಾಧ್ಯ ಇಲ್ಲಾ. ಲಂಚಕೋರ್ನ ಹಿಡಿಲಿಕ್ಕೆ ಹೊಂಚು ಹಾಕ್ಯಾರ.

ಕ:— ಏನ ಹೊಂಚೋ, ಹೆಗ್ಗಣಾ, ಅಂದರೆ ಹೆಗ್ಗಣಾ ಹೋಗದೆ ಗುದ್ದು ಮೆತ್ತಿದ್ಹಾಂಗ. ತಿಂಬೋದೆಲ್ಲಾ ತಿಂದಬಿಟ್ಟೀರಿ. ಜನತಾದ ಅರ್ಥಿಕ ಚರ್ಮಾನೂ ಸುಲದೀರೀ.

ಕಾ:— ಹಾ! ತಪ್ಪತೀರಿ, ಜನತಾದ್ದಲ್ಲಾ ಕಳ್ಳಪ್ಯಾಟಿ ಲಾಭಬಡಕರ ಚರ್ಮಾ ಅನ್ನರಿ. ನಮ್ಮ ಚೌಥಾಯಿ ಹೆಚ್ಚಾಗಿ ಅವರ ಮ್ಯಾಲೆ ಹೇರತೇವಿ.

ಕ:— ಅರ್ಥಾತ್, ಅಪ್ರತ್ಯಕ್ಷ ರೀತಿಯಿಂದ ಜನತಾದ್ದು.

ಕಾ:— ದ್ರೌಪದಿ ವಸ್ತ್ರಾಪಹರಣಾ ಸಮಯ ಶ್ರೀಕೃಷ್ಣ ಯಾವ ಪ್ರಕಾರಾ ತೀರಿ ಹಿಡಿಗಟ್ಟಿ ಮತ್ತೆ ಹಿಡದಿದ್ದೊ, ಆ ಪ್ರಕಾರ ಅತಿಪ್ರಸರಣ (ಇನಫ್ಲೇಶನ್) ಜನತಾಕ್ಕೆ ಅರ್ಥಿಕ ಚರ್ಮ ಸುಲಿಯೋದರೊಳಗೆ ಚರ್ಮ ಬಂತು.

ಕ:— ಅದರೂ ಬಡವರ ಸುಲಿಗಿ ಬಹಳ ಗೇದ.

ಕಾ:— ಬಡತನಕ್ಕ ಪುರಾಣ ಪ್ರಸಿದ್ಧಾದ ಭರತಭೂಮಿಯೊಳಗೆ ಇವತ್ತಿನ ಮಿತಿಗೆ ಬಡವರು ಇಲ್ಲಾ. ಕೆಂಪರಾಜಕಾರಣದ ಕನ್ನಡಕ ಹಾಕಿಕೊಂಡ ಕೆಲವರ ಉದ್ದೇಶಪೂರ್ವಕ ದೃಷ್ಟಿಗೆ ಮಾತ್ರ ಬಡವರ ಕಾಣ್ಸತಾರ. ಬಡವರಂತ ಚುಟ್ಟಾ ಕಾಣದ ಹಳ್ಳಿ ಕುಂಬಾರ ಸಹಿತ, ವ್ಹಿ ನಿತಿಯನ್, ಇಂಗ್ಲೀಷಾ ಗ್ಯಾಬರ್ಡೀನ ಡಬಲ್ ಬ್ರೆಸ್ಟ ಕೋಟು ಹಾಕಿಕೊಂಡು ಚಹಾದಂಗಡಿ, ಸಿನೇಮಾದಾಗ ಹತ್ತಿಭಾಷ ಬೀಡಿ ಬತ್ತಿ ಸೇದಿದ್ರು.

ಕ:— ಲಂಚದ್ವಾರಾ ಕಾಂಚನಗಿರಿ ಮ್ಯಾಲೆ ನಿಂತ ನಿಮಗ ಬಡವರು ಹ್ಯಾಂಗ ಕಂಡಾರು! ನಾಳೆ ಅರ್ಥಿಕ ಮಾಂದ್ಯತೆ (ಡಿಪ್ರೆಶನ್) ಸೂರ್ಯ ಪ್ರಖರಾಗಿ ಕಾಂಚನಗಿರಿ ಕರಗಿದ್ರ ನೀವೂ ಬಡವರ ಪಂಕ್ತೀಗೆ ಬರತೀರಿ.

ಕಾ:— ಕಾಂಚನಗಿರಿ ಹಿಂದ ನಿಮ್ಮ ...... ಅಡಗಿದ್ರ.

ಕ:— ... ಕುಬೇರರಾಗೊ ಕಾಯಕಾ ... ದಾನಾ ಧರ್ಮಾ ಮಾಡಿ ಲಂಚದಪಾಪ ಕೊಂ ... ಕಮ್ಮಿ ಮಾಡಿಕೊಳ್ರಿ.

ಕಾ:— ದಾನಾ ಧರ್ಮ ಅಂದರ ... ಮಾಡಬೇಕು?

ಕ:— ಅನಾಯಾಸಾ ನಿಮ್ಮ ಷಷ್ಟ್ಯಬ್ದ ಪೂರ್ತಿ ಬಂದಕ್ಕದ ನಿಮ್ಮನ್ನ ನೀವೇ ತೂಗಿಕೊಂಡು ನಿಮ್ಮ ತೂಕದಷ್ಟು ಬೆಳ್ಳಿ ಬಂಗಾರ ಬಡವರಿಗೆ ಹಂಚರಿ.

ಕಾ:— ಬೆಳ್ಳಿ ಬಂಗಾರ ಎಲ್ಲಿಂದ ತರ್ಲಿ?

ಕ:— ನೀವಂತೂ ರೇಶನ್ ... ರಿಗೆ ಎನ ಸಿಗುದುಲ್ಲಾ ಆ ಜಿನಸೆಲ್ಲಾ ನಿಮ್ಮಲ್ಲಿ ಕಳ್ಳಪ್ಯಾಟಿ ವ್ಯಾಪಾರಸ್ಥರಲ್ಲೆ ಸಿಗೋದು.

ಕಾ:— ಮುಂದೇನು?

ಕ:— ಈಗ ಕಡ್ಡಿಪೆಟ್ಟಿಗಿ ಚಿಮಣಿ ಎಣ್ಣಿ ಇವು ಬಡವರತನಕಾ ರೊಕ್ಕಾ ಕೊಟ್ಟರೂ ಬರದುಲ್ಲಾ ಅದಕ್ಕೆ ಬೆಳ್ಳಿ ಬಂಗಾರದಕಿಂತಾ ಕಡ್ಡಿಪೆಟಗಿ ಚಿಮಣಿ ಎಣಿ ಇವನ್ನ ಹಚ್ಚಿ ತೂಗಿಕೊಂಡು ಬಡವರಿಗೆ ಹಂಚಬಿಡ್ರಿ......

ಕಾ:— ೬೦ ವರ್ಷದ ಶಾಂತಿ ಸಮಾರಂಭಕಾಲಕ್ಕೆ ಎಂಥಾ ಅಶುಭ ಸೂಚನಾ.

ಕ:— ೬೦ ವರ್ಷ ನೀವು ಮಾಡಿದ ಕೆಲಸಕ್ಕ ತಕ್ಕ ಸೂಚನಾ ಇದು.

ಕಾ:— ಷಷ್ಟ್ಯಬ್ದ ಪೂರ್ತಿ...... ತುಲಾಭಾರಾ...... ಕಡ್ಡಿಪೆಟಗಿ ಚಿಮಣಿ ಎಣಿ......

ಕ:— ಮತ್ತೇನು? ನಾಯಿ ಶ್ರಾದ್ಧಕ್ಕ...... ಹೋರಗಿ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಸಕಾಲಿಕ ಸಲಹೆ

ಜೂನ ಎರಡನೆಯ ತಾರೀಖು ಹಿಂದುಸ್ತಾನದ ಭವಿತವ್ಯದ ನಿರ್ಣಾಯಕ ದಿನ. ಬ್ರಿಟಿಶ್ ಸರಕಾರದವರು ಅಧಿಕಾರ ತ್ಯಾಗದ ವಿವರವನ್ನು ಸಾರುವ ದಿನ. ಅದರ ಪ್ರತಿಕ್ರಿಯೆ ದೇಶದಲ್ಲಿ ಎಂತಾಗುವುದೆಂಬ ಬಗ್ಗೆ ಹಿಂದೀ ಧುರೀಣರು ವಿವಂಚನೆಗೊಳಗಾದುದು ಸ್ವಾಭಾವಿಕ. ವಿಶೇಷತಃ ಈಗಾಗಲೆ ಅಶಾಂತ ಪರಿಸ್ಥಿತಿಯಿದ್ದ ಭಾಗದಲ್ಲಿ ಮತ್ತಿಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಹೆಚ್ಚುವುದೊ ಎಂಬ ಶಂಕೆ ಅನೇಕರಿಗೆ. ಅಂತೆಯೆ ದೇಶದಲ್ಲಿಯ ಪ್ರಮುಖರು ಆ ಬಗ್ಗೆ ಹಿತೋಕ್ತಿಗಳನ್ನು ಹೇಳುತಿರುವರು. ಬಂಗಾಲದ ಗವರ್ನರ ಸಾಹೇಬರು ಈ ಬಗ್ಗೆ ಒಂದು ಪ್ರಕಟನೆಯನ್ನು ಹೊರಡಿಸಿ ಆ ದಿವಸ ಎಲ್ಲರೂ ಅತ್ಯಂತ ಶಾಂತ ರೀತಿಯಿಂದ ವರ್ತಿಸಿ ಗಾಂಧಿ—ಜಿನ್ನಾರವರು ಹೊರಡಿಸಿದ ಶಾಂತಿ ಪ್ರಕಟನೆಯನ್ನು ಕಾರ್ಯತಃ ಪಾಲಿಸಬೇಕೆಂದು ಕೇಳಿಕೊಂಡಿದ್ದಾರೆ. ಬಂಗಾಲದ ಮುಖ್ಯಮಂತ್ರಿ ಸುಹ್ರವರ್ದಿ, ಶರಚ್ಚಂದ್ರ ಬೋಸ, ಕಿರಣಶಂಕರರಾಯ ಪ್ರಭೃತಿಗಳೂ ಈ ಸಂಬಂಧದಲ್ಲಿ ಸಂಯುಕ್ತ ಪ್ರಕಟನೆಯನ್ನು ಹೊರಡಿಸಿ ಜೂನ ಎರಡನೆಯ ತಾರೀಖು ಅತ್ಯಂತ ಶಾಂತರೀತಿಯಿಂದ ಇರಬೇಕೆಂದು ಕೇಳಿಕೊಂಡಿರುವರು. ಇದು ಸಕಾಲಿಕ ಸಲಹೆಯಾಗಿದೆಂಬುದು ನಿರ್ವಿವಾದವಾಗಿದೆ. ಹಿಂದುಸ್ತಾನದ ಭವಿತವ್ಯದ ಬಗ್ಗೆ ಬ್ರಿಟಿಶರು ಯಾವದೇ ನಿರ್ಣಯ ಕೊಟ್ಟರೂ ಅದನ್ನು ಶಾಂತ ರೀತಿಯಿಂದ ಸ್ವೀಕರಿಸಿ ದೇಶಹಿತ ದೃಷ್ಟಿಯಿಂದ ಅದರ ಉಪಯೋಗ ಮಾಡಿಕೊಳ್ಳುವುದು ಭಾರತೀಯರ ಕರ್ತವ್ಯವಾಗಿದೆ. ತದ್ವಿರುದ್ಧವಾಗಿ ನಿರ್ಣಯವು ಯಾವುದೊಂದು ಪಕ್ಷದ ವಿರುದ್ಧವಾಗಿದೆಂಬ ನೆವ ಮುಂದೆ ಮಾಡಿ ಯಾರಾದರೂ ಹಿಂಸೆಗೆಳಸಿದ್ದಾದರೆ ಹಿಂದುಸ್ತಾನಕ್ಕೆ ಅಪರಿಮಿತ ಹಾನಿಯಾಗುವುದಲ್ಲದೆ ಸ್ವಾತಂತ್ರ್ಯದ ಸುಖವೂ ಹಿಂದೀಯರಿಗೆ ದೊರೆಯದು. ಇದನ್ನು ನೆನೆದು ಭಾರತೀಯರು ಆ ದಿನವನು ಅತ್ಯಂತ ಶಾಂತ ರೀತಿಯಿಂದ ಕಳೆದು ಭಾರತ ಸ್ವಾತಂತ್ರ್ಯದ ಮಾರ್ಗವನ್ನು ಧೈರ್ಯದಿಂದ ಕ್ರಮಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಆಹಾರ ಪರಿಸ್ಥಿತಿ

ಹಿಂದುಸ್ತಾನದ ಆಹಾರ ಪರಿಸ್ಥಿತಿ ಸುಧಾರಿಸದಿದ್ದುದು ಶೋಚನೀಯ ಸಂಗತಿಯಾಗಿದೆ. ಪರದೇಶಗಳಿಂದ ಬರಬೇಕಿದ್ದ ಆಹಾರ ಪದಾರ್ಥಗಳು ಅವಶ್ಯಕ ಪ್ರಮಾಣದಲ್ಲಿ ಬಾರದಿದ್ದುದರಿಂದ ಪರಿಸ್ಥಿತಿ ನಿಕೃಷ್ಟವಾಗಿದೆ. ಆಹಾರ ಖಾತೆಯ ಮತ್ತು ಆಹಾರ ಮಂತ್ರಿಗಳಾದ ಡಾ. ರಾಜೇಂದ್ರಬಾಬುಗಳು ಈ ಸಂಬಂಧದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೋಡಿದರೆ ಪರಿಸ್ಥಿತಿಯ ಭೀಕರತೆಯ ಕಲ್ಪನೆ ಬರುವದು. ೪೫ ಲಕ್ಷ ಟನ್ ಆಹಾರ ಕೊರತೆಯನ್ನು ಭಾರತವಿಂದು ಎದುರಿಸಬೇಕಾಗಿದೆ; ದೂ ಜುಲೈ ಮತ್ತು ಆಗಸ್ಟ ತಿಂಗಳು ತೀರ ಚಿಂತಾಜನಕವಾಗಿವೆಂದೂ ಆಹಾರ ಮಂತ್ರಿ ಬಾಬೂ ರಾಜೇಂದ್ರ ಪ್ರಸಾದರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಂತಿಕ ಸರಕಾರಗಳು ಸಕಾಲದಲ್ಲಿಯೆ ಸೀದಾ ಪ್ರಮಾಣವನ್ನು ಕಡಮೆ ಮಾಡಿದ್ದು ಜಾಣತನದ್ದಾಗಿದ್ದರೂ ಕೆಲ ಪ್ರದೇಶಗಳಲ್ಲಿ ಸೀದಾ ಪ್ರಮಾಣವನ್ನು ಇನ್ನೂ ಕಡಮೆ ಮಾಡಬೇಕಾಗುವುದೆಂದೂ ಹೇಳಿರುವರು. ಧಾನ್ಯ ಸಂಗ್ರಹಿಸುವ ಯೋಜನೆಯು ಯಶಸ್ವಿಯಾಗಿಲ್ಲೆಂದು ಮಂತ್ರಿಗಳು ಹೇಳಿರುವರು. ಆಯಾ ರೈತರು ತಮಗೆ ಸಾಲುವಷ್ಟು ಧಾನ್ಯವನ್ನಿಟ್ಟುಕೊಂಡು ಉಳಿದುದೆಲ್ಲವನ್ನು ಸರಕಾರದವರಿಗೇ ಮಾರಿಬಿಟ್ಟರೆ ಧಾನ್ಯ ಸಂಗ್ರಹ ಕಾರ್ಯ ಯಶಸ್ವಿಯಾಗುವಲ್ಲಿ ಸಂದೇಹವಿಲ್ಲ. ಆದರೆ ಹೆಚ್ಚು ಹಣ ದೊರೆಯುವದೆಂಬ ಸ್ವಾರ್ಥದಿಂದ ವ್ಯಾಪಾರೀತರರಿಗೆ ರೈತರು ಧಾನ್ಯ ಕೊಟ್ಟದ್ದಾದರೆ ಸಾಮಾನ್ಯವಾಗಿ ಆಹಾರ ಕೊರತೆಯಾಗುವಲ್ಲಿ ಸಂದೇಹವಿಲ್ಲ. ಆದುದರಿಂದ ಈಗಲಾದರೂ ರೈತರು ತಮಗೆ ಸಾಲುವಷ್ಟು ಕಾಳನ್ನಿಟ್ಟುಕೊಂಡು ಉಳಿದುದನ್ನೆಲ್ಲ ಸರಕಾರದವರಿಗೇ ಮಾರಿಬಿಡಬೇಕು ಅಲ್ಲದೆ ಪ್ರತಿಯೊಬ್ಬ ಸ್ವಾವಲಂಬಿಯಾಗಬೇಕೆಂಬುದಾಗಿಯೂ ರಾಜೇಂದ್ರಬಾಬುಗಳು ಉಪದೇಶಿಸಿದ್ದಾರೆ. ಸರಕಾರದವರು ಈ ಸಂಬಂಧದಲ್ಲಿ ಸಾಕಷ್ಟು ತ್ವರೆಯಿಂದ ಕಾರ್ಯ ಸಾಗಿಸುವದಿಲ್ಲೆಂದು ವಿಷಾದದಿಂದ ಹೇಳಬೇಕಾಗುವದು. ಮಳೆ ಬಂದಕೂಡಲೆ ಇಲ್ಲವೆ ನೀರಾವರಿಯ ಉಪಯೋಗ ಮಾಡಿಕೊಂಡು ಅಲ್ಪಾವಧಿಯ ಧಾನ್ಯದ ಬೆಳೆ ಬೆಳೆಯಲು ರೈತರಿಗೆ ಎಲ್ಲಬಗೆಯ ಅವಕಾಶ ಕೊಡುವದಾದರೆ ಧಾನ್ಯದ ಕೊರತೆ ಬಹಳಮಟ್ಟಿಗೆ ಕಡಮೆ ಯಾಗುವದು. ಉಳಿದ ಧಂದೆಗಳ ನೆವಮಾಡಿ ಫಲವತ್ತಾದ ಪ್ರದೇಶವನ್ನು ಬೇರೆ ಕೆಲಸಕ್ಕಾಗಿ ಮಾರ್ಪಡಿಸುವ ಪ್ರವೃತ್ತಿ ಈಚೆಗೆ ಸರಕಾರದಲ್ಲಿಯೇ ಹುಟ್ಟಿದೆ. ಇದು ನಿಲ್ಲಲಿಕ್ಕೆ ಬೇಕು. ಸರಕಾರದವರು ಮತ್ತು ಸಾರ್ವಜನಿಕರು ಕೂಡಿಯೆ ಈ ಕೆಲಸ ಕೈಕೊಂಡದ್ದಾದರೆ ಧನ ಸಂಪತ್ತಿ ಹೆಚ್ಚುವದರಲ್ಲಿ ಸಂದೇಹವಿಲ್ಲ. ಇಡೀ ಜಗತ್ತಿನಲ್ಲಿಯೇ ಆಹಾರ ಪದಾರ್ಥಗಳ ಕೊರತೆ ಇದೆಂದು ಎಲ್ಲ ದೇಶಗಳೂ ಕೂಗುತಿವೆ. ಈ ಪರಿಸ್ಥಿತಿಯಲ್ಲಿ ಭಾರತೀಯರೂ ಆಹಾರ ಪದಾರ್ಥಗಳ ನಾಶವಾಗದಂತೆ ಮಿತವ್ಯಯದಿಂದ ಅವುಗಳನ್ನು ಉಪಯೋಗಿಸಿ ಆಹಾರ ಕೊರತೆಯನ್ನು ಯಶಸ್ವಿಯಾಗಿ ಎದುರಿಸಬೇಕೆಂದು ಸೂಚಿಸ ಬಯಸುತ್ತೇವೆ.

ಘಾತಕ ಬೇಡಿಕೆ

ಮುಸ್ಲಿಂಲೀಗಿನ ಅಧ್ಯಕ್ಷರಾದ ಬ್ಯಾ. ಜಿನ್ನಾ ಸಾಹೇಬರು ಹಿಂದುಸ್ತಾನದ ಸರ್ವನಾಶಕ್ಕೆ ಕಾರಣವಾಗಬಹುದಾದ ಘಾತುಕ ಬೇಡಿಕೆಗಳನ್ನು ಒಂದರ ಹಿಂದೊಂದರಂತೆ ಮುಂದೆ ಮಾಡುತಿರುವದು ನಿಜವಾಗಿ ಶೋಚನೀಯವಾಗಿದೆ. ಹಿಂದುಸ್ತಾನವನ್ನು ಒಡೆದು ಹಿಂದುಸ್ತಾನ ಮತ್ತು ಪಾಕಿಸ್ತಾನವೆಂದು ಜಾತೀಯ ತತ್ವದನ್ವಯ ಎರಡು ತುಂಡು ಮಾಡಿಬಿಡಬೇಕೆಂದು ಅವರು ದುರಾಗ್ರಹ ತಳೆದರು. ಅದನ್ನು ಸಾಧಿಸಲು ಮುಸ್ಲಿಂಲೀಗಿನವರು ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಹಿಂಸೆಗೆ ಅವಕಾಶ ಕೊಡುತಿರುವರು. ದೇಶದಲ್ಲಿಯ ಇತರ ಪಕ್ಷಗಳು ಮತ್ತು ಬ್ರಿಟಿಶ ಸರಕಾರ 'ಹೋಗಿ ಬಿಡಲಿ ಒಮ್ಮೆ ಪಾಕಿಸ್ತಾನ ತೆಗೆದುಕೊಂಡು, ಅನಂತರವಾದರೂ ಹಿಂದುಸ್ತಾನದಲ್ಲಿಯ ಸದ್ಯದ ಯಾದವಿ ನಿಲ್ಲಬಹುದು' ಎಂದು ಮುಂತಾಗಿ ಆಲೋಚಿಸಿ ಪಾಕಿಸ್ತಾನಕ್ಕೆ ಒಂದು ಒಗೆಯಿಂದ ಒಪ್ಪಿಗೆ ಕೊಟ್ಟರು. ಜೂನ ೨ಕ್ಕೆ ಬ್ರಿಟಿಶ ಸರಕಾರ ಮಾಡುವ ಘೋಷಣೆಯಲ್ಲಿ ಪಾಕಿಸ್ತಾನದ ಘೋಷಣೆ ಮಾಡಲ್ಪಡಬಹುದೆಂದೂ ನಿರೀಕ್ಷಿಸಲಾಗಿದೆ. ಯಾವ ತತ್ವದನ್ವಯ ಜಿನ್ನಾರು ಪಾಕಿಸ್ತಾನವನ್ನು ಬೇಡುತಿರುವರೊ ಅದೇ ತತ್ವದ ಪ್ರಕಾರ ಪಂಜಾಬ ಬಂಗಾಲಗಳನ್ನೂ ವಿಭಜಿಸಬೇಕಾದುದು ಅನಿವಾರ್ಯವಾಗಿದೆ. ಆದರೆ ಜಿನ್ನಾ ಸಾಹೇಬರು ಮಾತ್ರ ಅದಕ್ಕೆ ಸಿದ್ಧರಿಲ್ಲ. ಈ ಮಾತು ಇನ್ನೂ ಅನಿರ್ಣೀತವಾಗಿರುವಾಗಲೆ ಜಿನ್ನಾರು ಪಂಜಾಬ ಮತ್ತು ಬಂಗಾಲವನ್ನು ಜೋಡಿಸುವುದಕ್ಕಾಗಿ ಅಲ್ಲಿಂದ ಇಲ್ಲಿಯ ವರೆಗೆ ನೂರಿದ್ದ ದೊಂದು ಕೂಟಪಟ್ಟಿಯನ್ನು ಬೇಡುತಿರುವರು. ಈ ಕೂಟಪಟ್ಟಿಯು ಹಿಂದು ಬಹುಮತದ ಪ್ರದೇಶದಲ್ಲಿ ಒಂಬ್ಯಾಸಿ ಮೈಲು ಹಾಯದು ಹೋಗುತ್ತದೆ. ಈ ಬೇಡಿಕೆ ಎಷ್ಟೊಂದು ಅನ್ಯಾಯದ್ದು ಮತ್ತು ಘಾತುಕವಾದದ್ದನ್ನು ಬೇರೆ ಹೇಳಬೇಕಾಗಿಲ್ಲ. ಪೋಲಂಡಿನಲ್ಲಿಯ ಡ್ಯಾಂಝಿಗ್ ಕೂಟಪಟ್ಟಿಯು ಎರಡನೇ ಮಹಾಯುದ್ಧಕ್ಕೆ ಕಾರಣವಾಗಿ ಜಗತ್ತಿನಲ್ಲಿ ಎಂಥ ಅನರ್ಥವನ್ನೆಸಗಿತೆಂಬುದು ಸರ್ವಶ್ರುತ. ಇಡೀ ಜಗತ್ತು ಈಗಲೂ ಅದರ ಕಹಿ ಫಲಗಳನ್ನನುಭವಿಸುತ್ತಿದೆ. ಈ ಬಗೆಯ ಅನುಭವವಿರುವಾಗ ಈ ಕೂಟಪಟ್ಟಿಗೊಪ್ಪಿ ಇದ್ದೊಂದು ಬಾವಿಯಲ್ಲಿ ಹಗಲು ಯಾರೂ ಬೀಳಲಾರರೆಂಬುದು ಸ್ಪಷ್ಟವಾಗಿದೆ. ಆದುದರಿಂದ ಭಾರತೀಯರು ಎಲ್ಲ ಬಗೆಯಿಂದ ಈ ಬೇಡಿಕೆಯನ್ನು ವಿರೋಧಿಸಿ ಹಿಂದುಸ್ತಾನದ ಇಡೀ ಜಗತ್ತಿನ ಸರ್ವನಾಶವನ್ನು ತಪ್ಪಿಸಬೇಕೆಂದು ಆಗ್ರಹಪಡಿಸುತ್ತೇವೆ.

ಅಖಂಡ ಭಾರತದಲ್ಲಿಯೆ ಹಿತ

ತಾವು ಬೇಡುತಿರುವ ಪಾಕಿಸ್ತಾನ ಸರ್ವಸಮೃದ್ಧ ದೇಶವಾಗಲಾರದೆಂಬ ಅಂಜಿಕೆ ಜಿನ್ನಾ ಸಾಹೇಬರಿಗಿದ್ದುದರಿಂದಲೆ ಸಾವಿರ ಮೈಲು ಸಮೃದ್ಧ ಪ್ರದೇಶವನ್ನು ಕೂಟಮಾರ್ಗವೆಂದು ಬೇಡುತಿರುವರು. ಈ ಬಗೆಯ ಘಾತಕ ಬೇಡಿಕೆಗಳನ್ನು ಮುಂದೆ ಮಾಡುವುದಕ್ಕಿಂತ ಭಾರತವನ್ನು ಅಖಂಡವಾಗಿಟ್ಟುಕೊಂಡೆ ಇಡೀ ದೇಶದ ಹಿತವನು ಸಾಧಿಸುವದು ಇಷ್ಟವಾಗಿದೆ. ಸಮಂಜಸ ಬುದ್ಧಿಯ ಭಾರತೀಯರೆಲ್ಲರೂ ಜಿನ್ನಾ ಸಾಹೇಬರಿಗೆ ಆ ಬಗೆಯ ಹಿತೋಪದೇಶವನ್ನು ಮಾಡಿದ್ದುಂಟು. ದೇಶವನ್ನು ಒಡೆಯುವದರಿಂದ ಉದ್ದೇಶ ಸಾಧ್ಯವಾಗುವದಿಲ್ಲೆಂದು ಬಂಗಾಲದ ಕೃಷಿಕ ಪ್ರಜಾಪಕ್ಷದ ನೂರು ಜನ ಸದಸ್ಯರು ಪ್ರಕಟನೆಯೊಂದನ್ನು ಹೊರಡಿಸಿರುವರು. ಇಂದಿನ ಪರಿಸ್ಥಿತಿಯಲ್ಲಿ ಬ್ರಿಟಿಶ ಸರಕಾರದ ಮೇ ಘೋಷಣೆಯೆ ಅತ್ಯಂತ ಸೂಕ್ತವಾದ ಸೂಚನೆಯಾಗಿದೆಂದು ಅವರು ಅಭಿಪ್ರಾಯ ಪಟ್ಟಿರುವರು. ಈ ಯೋಜನೆಯನ್ನೇ ಕಾರ್ಯರೂಪಕ್ಕಿಳಿಸುವಂತೆ ಬ್ರಿಟಿಶ ಸರಕಾರಕ್ಕೆ ಒತ್ತಾಯ ಮಾಡಬೇಕೆಂದೂ ಅವರು ಕಾಂಗ್ರೆಸ್ ವರಿಷ್ಠರನ್ನು ಬಿನ್ನವಿಸಿಕೊಂಡಿದ್ದಾರೆ. ರಾಷ್ಟ್ರಹಿತದ ದೃಷ್ಟಿಯಿಂದ ಮುಸ್ಲಿಂ ಲೀಗೂ ಈ ಯೋಜನೆಯನ್ನು ಒಪ್ಪಿಕೊಳ್ಳಬೇಕೆಂದು ಇವರು ಬಿನ್ನವಿಸಿಕೊಂಡಿರುವರು. ಕೃಷಿಕ ಪ್ರಜಾಪಕ್ಷದ ಧುರೀಣರು ಇಷ್ಟಕ್ಕೇ ನಿಲ್ಲದೆ ಮುಸ್ಲಿಂ ಲೀಗು ಒಂದು ವೇಳೆ ಈ ಯೋಜನೆಗೆ ಒಪ್ಪದಿದ್ದರೆ ಅಖಂಡ ಭಾರತದಲ್ಲಿ ಅಖಂಡ ಬಂಗಾಲ ಇಲ್ಲವೆ ವಿಭಕ್ತ ಭಾರತದಲ್ಲಿ ವಿಭಕ್ತ ಬಂಗಾಲ ಈ ಮುದ್ದೆಯ ಮೇಲೆ ಹೊಸ ಚುನಾವಣೆ ನಡೆಸಬೇಕೆಂದೂ ಕೇಳಿಕೊಂಡಿರುವರು. ಚುನಾವಣೆಗಳು ಶಾಂತರೀತಿಯಿಂದ ನಡೆಯುವಂತೆ ಈಗಿನ ಮಂತ್ರಿಮಂಡಳವನ್ನು ವಿಸರ್ಜಿಸಿಬಿಡಬೇಕೆಂದೂ ಜೋಡಾಸನಾ ಸರಕಾರವನ್ನು ಸ್ಥಾಪಿಸಬೇಕೆಂದೂ ಕೇಳಿಕೊಂಡಿರುವರು. ಜಾತೀಯ ಕೊಲೆ ಸುಲಿಗೆಗಳಿಂದ ಸ್ವಾತಂತ್ರ್ಯ ಸಿಕ್ಕದೆಂದೂ ನ್ಯಾಯ ಮತ್ತು ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಸಾಮ್ಯವಾದೀ ಸರಕಾರ ಸ್ಥಾಪಿಸುವದೇ ಯುಕ್ತವೆಂದೂ ಅವರು ಹೇಳಿರುವರು. ಜಿನ್ನಾ ಸಾಹೇಬರು ಈಗಲಾದರೂ ಸಮಂಜಸ ಬುದ್ಧಿಯನ್ನು ತಾಳುವರೋ?

ಪೊಳ್ಳು ಆಶ್ವಾಸನೆ

ಬ್ಯಾ. ಜಿನ್ನಾ ಸಾಹೇಬರು ಪಾಕಿಸ್ತಾನವನ್ನು ಬೇಡುವಾಗ ಮತ್ತು ಕೂಟಪಟ್ಟಿಯನ್ನು ಬೇಡುವಾಗಲೂ ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳ ರಕ್ಷಣೆಯ ಆಶ್ವಾಸನ ಕೊಡುತಿರುವುದುಂಟು. ಆದರೆ ಈಗ ದೇಶದಲ್ಲೆಲ್ಲ ನಡೆದ ಲೀಗಿನವರ ಘಾತಕ ಚಟುವಟಿಕೆಗಳನ್ನು ನೋಡಿದರೆ ಈ ಆಶ್ವಾಸನ ಎಷ್ಟು ಪೊಳ್ಳು ಪೊಳ್ಳಾಗಿದೆಂಬುದು ಒಡೆದು ಕಾಣುವುದು. ಪಂಜಾಬ ಬಂಗಾಲ ಸಿಂಧಗಳಲ್ಲಿ ಲೀಗಿನವರು ತಮ್ಮ ಪಾಶವೀ ಬಹುಮತದ ಬಲುವೆಯಿಂದ ಮುಸಲ್ಮಾನೇತರರನ್ನು ಎಷ್ಟೊಂದು ಥಳಿಸುತಿರುವರೆಂಬುದು ಅಲ್ಲಿ ನಡೆಯುತಿರುವ ಘಟನೆಗಳಿಂದ ಸ್ಪಷ್ಟವಾಗುವುದು. ಸಿಂಧದಲ್ಲಿ ವಿಶ್ವವಿದ್ಯಾಲಯ ಮಸೂದೆಯಲ್ಲಿಯೂ ಸರಕಾರದವರು ಜಾತೀಯತೆಗೆ ಹೆಚ್ಚು ಪ್ರಾಧಾನ್ಯ ಕೊಟ್ಟು ಮುಸಲ್ಮಾನೇತರರ ಹಕ್ಕು ಬಾಧ್ಯತೆಗಳನ್ನು ಕಡೆಗಣಿಸಿದ್ದು ಸರ್ವಶ್ರುತ. ಅಲ್ಲದೆ ಶಾಸನಸಭೆಯಲ್ಲಿ ಮತ್ತು ಬೇರೆ ಸ್ಥಳಗಳಲ್ಲಿ ಮುಸ್ಲಿಂ ಲೀಗಿನವರು ವ್ಯಕ್ತಪಡಿಸುತಿರುವ ಅಭಿಪ್ರಾಯಗಳು ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳ ರಕ್ಷಣೆಯ ಆಶ್ವಾಸನಕ್ಕೆ ಸ್ವಲ್ಪವೂ ಸಹಾಯಕವಾಗಿಲ್ಲೆಂಬುದೂ ಅಷ್ಟೇ ಸ್ಪಷ್ಟವಿರುವವು. ಅತ್ಯಂತ ಸಮೃದ್ಧವಾದ ಈ ಒಂದು ಸಾವಿರ ಮೈಲಿನ ಕೂಟಪಟ್ಟಿಯನ್ನು ಮುಸಲ್ಮಾನೇತರರಿಂದ ಸೆಳೆದುಕೊಂಡು ತಮ್ಮ ಬೊಜ್ಜು ಬೆಳೆಯಿಸಿಕೊಳ್ಳಲು ಪ್ರಯತ್ನಿಸುತಿರುವ ಜಿನ್ನಾ ಸಾಹೇಬರು ಅಲ್ಪಸಂಖ್ಯಾಕರ ಹಿತರಕ್ಷಣೆಯನ್ನೆಂತು ಮಾಡಬಲ್ಲರೆಂಬುದೂ ಒಡೆದು ಕಾಣುತಿದೆ. ಆದುದರಿಂದ ಅವರ ಬಾಯಿಮಾತಿನ ಪೊಳ್ಳು ಆಶ್ವಾಸನೆಯಿಂದ ಯಾರೂ ಮರುಳು ಹೋಗರೆಂಬುದೂ ಅಷ್ಟೇ ಸ್ಪಷ್ಟವಾಗಿದೆ. ಅಲ್ಪಸಂಖ್ಯಾಕರ ಹಕ್ಕುಗಳನ್ನು ರಕ್ಷಿಸುತ್ತೇನೆಂದು ಬಾಯಿಂದ ಹೇಳುವದಕ್ಕಿಂತ ಒಂದಾದರೂ ಕೃತಿ ಮಾಡಿ ತೋರಿಸಿದರೆ ಅವರ ಮೇಲೆ ಯಾರಾದರೂ ವಿಶ್ವಾಸವಿಡಬಹುದು.

ಸ್ಟರ್ಲಿಂಗ ಶಿಲ್ಕು

ಸ್ಟರ್ಲಿಂಗ ಸಾಲದ ಶಿಲ್ಕಿನ ಸಂಬಂಧದಲ್ಲಿ ಬ್ರಿಟಿಶ್ ಸರಕಾರದವರೊಡನೆ ವಿಚಾರ ವಿನಿಮಯ ಮಾಡುವುದಕ್ಕಾಗಿ ಹಿಂದುಸ್ತಾನದಿಂದ ಶಿಷ್ಟಮಂಡಳವೊಂದು ಹೋಗಲಿದೆ. ಅರ್ಥಸಚಿವರಾದ ಲಿಯಾಕತ ಅಲ್ಲಿಖಾನರ ಹಿರಿಯತನದಲ್ಲಿ ಈ ಶಿಷ್ಟಮಂಡಳ ಬ್ರಿಟಿಶ್ ಸರಕಾರದವರನ್ನು ಕಂಡು ಈ ಮಹತ್ವದ ಪ್ರಶ್ನೆಯ ಇತ್ಯರ್ಥ ಮಾಡಿಕೊಳ್ಳುವುದಿದೆ. ಇವರಲ್ಲಿ ರಾಜಾಜಿ ಜಾನ ಮಥಾಯಿಯವರಂಥ ಅರ್ಥಶಾಸ್ತ್ರ ವಿಶಾರದರೂ ಇದ್ದುದು ಸಂತೋಷದ ಸಂಗತಿಯಾಗಿದೆ. ಅಲ್ಲದೆ ಸರಕಾರೇತರ ಅರ್ಥಶಾಸ್ತ್ರ ವಿಶಾರದರನ್ನೂ ಈ ಶಿಷ್ಟಮಂಡಳದಲ್ಲಿ ಸೇರಿಸಿಕೊಂಡುದೂ ಆನಂದದ ಸಂಗತಿ. ಈ ಸ್ಟರ್ಲಿಂಗ ಸಾಲವನ್ನು ಹಾರಿಸಿಬಿಡುವ ಇಲ್ಲವೆ ಬಹಳ ಮಟ್ಟಿಗೆ ಕಡಮೆ ಮಾಡುವ ಬ್ರಿಟಿಶ್ ಸರಕಾರದ ಕುತಂತ್ರಕ್ಕೆ ಅವಕಾಶ ಬಡೆಯುವದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ. ಭಾರತೀಯರು ಈ ಸ್ಟರ್ಲಿಂಗ ಸಾಲವನ್ನು ತಮ್ಮ ನೆತ್ತರವನ್ನು ಸೋಸಿ ಕೊಟ್ಟಿದ್ದಾರೆಂಬುದು ನಿರ್ವಿವಾದ. ಇಂಥ ಸಾಲವನ್ನು ಒಂದಿಲ್ಲೊಂದು ನೆವ ಮುಂದೆ ಮಾಡಿ ಹಾರಿಸಿಬಿಡುವದು ಅತ್ಯಂತ ಅನ್ಯಾಯದ್ದು ಮತ್ತು ಅಸಮಂಜಸವಾಗಿದೆ. ಈ ಸಾಲವನ್ನು ಮುಟ್ಟಿಸುವಷ್ಟು ಬ್ರಿಟನ್ನಿನ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲೆಂದು ಹೇಳುವದಂತೂ ತೀರ ಅಸಮಂಜಸವಾದ ಮಾತಾಗಿದೆ. ಬ್ರಿಟಿಶ ಬಂಡವಲುದಾರರು ಮನಸು ಮಾಡಿದರೆ ಈ ಸಾಲವನ್ನಿಲ್ಲಿ ಕ್ಷಣಾರ್ಧದಲ್ಲಿ ಯಂತ್ರೋಪಕರಣಗಳಿಂದ, ಇಲ್ಲಿಯ ಆಸ್ತಿಗಳನ್ನು ಮಾರುವದರಿಂದ ಮುಟ್ಟಿಸಬಹುದು. ಭಾರತೀಯ ಶಿಷ್ಟಮಂಡಳವು ಯಾವದೊಂದು ಸಬಿಬಿನಿಗೆ ಬಲಿಯಾಗಿ ಈ ಸ್ಟರ್ಲಿಂಗ ಸಾಲವನ್ನು ಹಾರಿಸಿಬಿಡುವ ಬ್ರಿಟನ್ನಿನ ಸಂಚುಗಾರಿಕೆಗೆ ಅವಕಾಶ ಕೊಡಬಾರದೆಂದು ಆಗ್ರಹಪಡಿಸುತ್ತೇವೆಯಲ್ಲದೆ ಬ್ರಿಟಿಶ್ ಸರಕಾರದವರು ತಮ್ಮ ಈ ಅನ್ಯಾಯದ ಧೋರಣವನ್ನು ಬಿಟ್ಟುಕೊಡಬೇಕೆಂದು ಬಿನ್ನವಿಸುತ್ತೇವೆ.

ಬಳ್ಳಾರಿ ಸಮಸ್ಯೆ

ಬಳ್ಳಾರಿಯನ್ನು ನುಂಗಿ ನೀರು ಕುಡಿಯಬೇಕೆಂದು ಆಂಧ್ರರು ಬಗೆಬಗೆಯಿಂದ ಪ್ರಯತ್ನಿಸುತಿರುವರೆಂಬುದು ಜೆಚ್ಚುಹೆಚ್ಚು ಸ್ಪಷ್ಟವಾಗಹತ್ತಿದೆ. ಮದ್ರಾಸ ಸರಕಾರದಲ್ಲಿ ತಮ್ಮ ವರ್ಚಸ್ಸನ್ನು ಉಪಯೋಗಿಸಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಬೇಕೆಂದೂ ಅವರು ಹವಣಿಸಿರುವರು. ಆಂಧ್ರ ವಿಶ್ವವಿದ್ಯಾಲಯದ ಕಾಯದೆ ತಿದ್ದುಪಡಿ ಮಸೂದೆಯೊಂದು ಶಾಸನಸಭೆಯಲ್ಲಿ ಬಂದಿದ್ದು ಅದಕ್ಕೊಂದು ಉಪಸಮಿತಿಯನ್ನು ನೇಮಿಸಲ್ಪಟ್ಟಿದೆ. ಆ ಉಪಸಮಿತಿಯವರು ಮೊನ್ನೆ ಮೊನ್ನೆ ವಾಲ್ಟೇರದಲ್ಲಿ ಸಭೆ ಸೇರಿ ಬಳ್ಳಾರಿ ಜಿಲ್ಲೆಯನ್ನೂ ಕರ್ನೂಲು ದತ್ತಮಂಡಲ ಮತ್ತು ಚಿತ್ತೂರು ಜಿಲ್ಲೆಗಳನ್ನು ಆಂಧ್ರ ವಿಶ್ವವಿದ್ಯಾಲಯದ ಅಧಿಕಾರದಲ್ಲಿ ಸಲಿಕ್ಕೆ ಯೋಗ್ಯ ತಿದ್ದುಪಡಿ ತರಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆಂದು ತಿಳಿಯುತ್ತದೆ. ಇದು ಅತ್ಯಂತ ಘಾತುಕವಾದ ಸೂಚನೆಯು. ಬಳ್ಳಾರಿ ಜಿಲ್ಲೆಯ ಶಿಕ್ಷಣ ಸಂಸ್ಥೆಗಳು ಒಮ್ಮೆ ಆಂಧ್ರ ವಿಶ್ವವಿದ್ಯಾಲಯಕ್ಕೆ ಜೋಡಿಸಲ್ಪಟ್ಟರೆ ಆ ಜಿಲ್ಲೆ ಆಂಧ್ರರ ಪಾಲಾಯಿತೆಂದೇ ತಿಳಿಯಬೇಕಾಗುವದು. ಕರ್ನಾಟಕದ ವಿಶ್ವವಿದ್ಯಾಲಯಕ್ಕೆ ಮುಂದೆ ಎಂದಾದರೂ ಜೋಡಿಸಲ್ಪಡುವದೂ ಅಸಂಭವವಾಗುವದು. ಆದುದರಿಂದ ಬಳ್ಳಾರಿ ಜಿಲ್ಲೆಯ ಕನ್ನಡಿಗರು ಶಾಸನ ಸಭಾಸದಸ್ಯರು ಇದನ್ನು ತೀವ್ರರೀತಿಯಿಂದ ವಿರೋಧಿಸಬೇಕು. ಬಳ್ಳಾರಿಯಲ್ಲಿರುವ ವೀರಶೈವ ಕಾಲೇಜನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಜೋಡಿಸಿದರೆ ಮಾತ್ರ ಅದಕ್ಕೆ ಮನ್ನಣೆ ಕೊಡಲ್ಲಾಗುವದು. ಇಲ್ಲದಿದ್ದರೆ ಮನ್ನಣೆಯನು ಕೊಡಲಾಗುವದಿಲ್ಲೆಂದು ಮದ್ರಾಸ ಸರಕಾರದ ಪ್ರಮುಖ ಮಂತ್ರಿಗಳೊಬ್ಬರು ಕಾಲೇಜಿನ ಸಂಚಾಲಕರಿಗೆ ಬೆದರಿಕೆ ಹಾಕಿರುವರೆಂದೂ ಸುದ್ದಿ. ಇದು ನಿಜವಿದ್ದರೆ ಅಧಿಕಾರದ ಬಲದಿಂದ ಈ ರೀತಿ ದಬ್ಬಾಳಿಕೆ ನಡೆಸುವದಂತೂ ಅತ್ಯಂತ ಅಸಮಂಜಸವೆಂದು ಅದರಲ್ಲಿಯೂ ಕಾಂಗ್ರೆಸ್ ಮಂತ್ರಿಗಳಿಗೆ ಅದು ಸ್ವಲ್ಪವೂ ಭೂಷಣವಲ್ಲ. ವೀರಶೈವ ಕಾಲೇಜಿನವರು ಸ್ವತಂತ್ರ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿತವಾಗುವ ವರೆಗೆ ಕಾಲೇಜನ್ನು ಮುಚ್ಚಿದರೂ ಚಿಂತೆಯಿಲ್ಲ. ಆದರೆ ಆಂಧ್ರ ವಿಶ್ವವಿದ್ಯಾಲಯಕ್ಕೆ ಅದನ್ನು ಜೋಡಿಸುವ ರಾಕ್ಷಸೀ ಮಹತ್ವಾಕಾಂಕ್ಷೆಗೆ ಅವಕಾಶ ಕೊಡಬಾರದು. ಅವರೀ ಪ್ರಯತ್ನದಲ್ಲಿ ಇಡೀ ಕರ್ನಾಟಕದ ಸಕ್ರಿಯ ಬೆಂಬಲ ಸಿಕ್ಕುವುದೆಂಬುದು ಖಂಡಿತ

ದಕ್ಷಿಣ ಆಫ್ರಿಕೆಯ ಪ್ರಶ್ನೆ

ಹಿಂದುಸ್ತಾನದ ನಡುಗಾಲ ಸರಕಾರದವರು ಬೇರೆ ಬೇರೆ ರಾಷ್ಟ್ರಗಳಲ್ಲಿ ರಾಯಭಾರಿಗಳನ್ನು ನೇಮಿಸಿ ಪರಸ್ಪರ ಸಂಬಂಧವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತಿರುವರು. ಈಗ ಗಲೆ ಹಲವು ರಾಷ್ಟ್ರಗಳಲ್ಲಿ ರಾಯಭಾರಿಗಳನ್ನು ನೇಮಿಸಿದ್ದೂ ಉಂಟು. ಆದರೆ ದಕ್ಷಿಣ ಆಫ್ರಿಕೆಯ ಸರಕಾರದವರು ಹಿಂದೀಯರ ಹಕ್ಕು ಬಾಧ್ಯತೆಗಳನ್ನು ಮುಳುಗಿಸುವ ಬಗೆ ಬಗೆಯ ತೊಂದರೆಗಳನ್ನು ಹಿಂದೀಯರಿಗೆ ಕೊಡುತಿದ್ದುದರಿಂದ ಆ ರಾಷ್ಟ್ರದ ಗಾಢ ಸಂಬಂಧ ಬೆಳೆಸಲು—ಇದೆಲ್ಲ ಕಪ್ಪು ಕಾಯಿದೆ ಇರುವ ವರೆಗೆ—ನಡುಗಾಲ ಸರಕಾರ ಸಿದ್ಧವಿಲ್ಲ. ಹಿಂದುಸ್ತಾನದ ಹಾಯಕಮೀಶನರರನ್ನು ಕಳಿಸಬೇಕೆಂದು ದಕ್ಷಿಣ ಆಫ್ರಿಕೆಯ ಮುಖ್ಯಮಂತ್ರಿಗಳಾದ ಜನರಲ ಸ್ಮಟ್ಸರು ನಡುಗಾಲ ಸರಕಾರದ ವಿದೇಶಖಾತೆಯ ಮಂತ್ರಿಗಳಾದ ಪಂಡಿತ ಜವಾಹರಲಾಲರಿಗೆ ಬರೆದದ್ದಕ್ಕೆ ಘೆಟ್ಟೊ ಕಾಯಿದೆ ರದ್ದಾಗುವವರೆಗೆ ಇದು ಶಕ್ಯವಿಲ್ಲೆಂದು ತಿಳಿಸಿರುವರು. ಹಾಯ ಕಮೀಶನರರ ಮುಖಾಂತರವಾಗಿಯೆ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದಲ್ಲವೆ ಎಂದು ಸ್ಮಟ್ಸರ ಅಭಿಪ್ರಾಯ. ಎರಡೂ ರಾಷ್ಟ್ರಗಳು ಸಮಾನಸ್ಥರೆಂಬುದನ್ನು ಮೊದಲು ಒಪ್ಪದಿರೇನೇ ಬಾಂಧವ್ಯ ಬೆಳೆಯುವ ವಿಚಾರ ಶಕ್ಯವಷ್ಟೇ? ಘೆಟ್ಟೊ ಕಾಯಿದೆ ಇರುವವರೆಗೆ ಅದು ಶಕ್ಯವಿಲ್ಲದಿರಾಗ ಹಾಯ ಕಮೀಶನರರನ್ನು ನೇಮಿಸಿ ಪ್ರಯೋಜನವೇನು?

ನಡುಗಾಲ ಸರಕಾರದ ವಿಸರ್ಜನೆಯೆ?

ಭಾರತದ ವಿಭಜನೆಗೆ ಗಾಂಧೀ—ಸಾಮ್ಯವಾದೀ ವಿರೋಧ

ಗಲಭೆಗಳಲ್ಲಿ ಆತ್ಮರಕ್ಷಣೆಗೆ ಸಿದ್ಧರಾಗಲು ಸರದಾರರ ಕರೆ

ಬಂಗಾಲವು ಬ್ರಿಟಿಶ ಸರಕಾರದ ಮೇ ಯೋಜನೆಯನ್ನು ಜೂನ ೨ ರ ಮುಂದಾಳುಗಳ ದಿಲ್ಲಿ ಸಭೆಯಲ್ಲಿ ಒಪ್ಪದಿದ್ದರೆ ಅಲ್ಲಿ ಮಂತ್ರಿಮಂಡಲವನ್ನು ವಿಸರ್ಜಿಸಿ ಪಂಜಾಬದಂತೆ ಗವರ್ನರರ ರಾಜ್ಯವನ್ನು ಸ್ಥಾಪಿಸಲಾಗುವದೆಂದು ಇದೀಗ ಬಂದ ಸುದ್ದಿಗಳಿಂದ ವಿದಿತವಾಗುತ್ತದೆ. ಅರ್ಥಾತ್ ಬಂಗಾಲ ಮತ್ತು ಪಂಜಾಬಗಳ ವಿಭಜನೆಯ ಬಗ್ಗೆ ಜನಮತಗ್ರಹಣ ಮಾಡಲಾಗುವದೆಂದೂ ಆ ಸಮಯದಲ್ಲಿ ನಿಷ್ಪಕ್ಷಪಾತವಾದ ಆಡಳಿತ ಆ ಪ್ರಾಂತಗಳಲ್ಲಿರಬೇಕೆಂದು ಬ್ರಿಟಿಶ ಸರಕಾರದ ಅಪೇಕ್ಷೆಯಿದೆಯೆಂದು ಹೇಳಬಹುದು.

ವಾಯುಸರಾಯರು ತಮ್ಮದೊಂದು ಯೋಜನೆಯನ್ನು ತಯಾರಿಸಿಕೊಂಡು ಬ್ರಿಟಿಶ ಮಂತ್ರಿಮಂಡಲದ ಒಪ್ಪಿಗೆಯನ್ನು ಪಡೆಯವುದಕ್ಕಾಗಿ ಅದನ್ನು ತೆಗೆದುಕೊಂಡು ಲಂಡನ್ನಿಗೆ ಹೋಗಿರುವರಷ್ಟೆ. ಆ ಯೋಜನೆಯಲ್ಲಿ ಬಂಗಾಲ ಪಂಜಾಬಗಳ ವಿಭಜನೆ ಮಾತ್ರ ಪಾಕಿಸ್ತಾನ ಕೊಡುವ ಸೂಚನೆಯುದೆಯೆಂದು ಪ್ರಸಿದ್ಧವಾಗಿದೆ. ಹಿಂದುಸ್ತಾನದ ಸಾರ್ವತ್ರಿಕ ಹಿತದ ದೃಷ್ಟಿಯಿಂದ ಕಾಂಗ್ರೆಸ್ಸು ಮೊದಲಿನಿಂದಲೂ ಅಖಂಡ ಹಿಂದುಸ್ತಾನಕ್ಕಾಗಿ ಹೋರಾಡುತ್ತಿರುವುದು ಸ್ಪಷ್ಟವಿದೆ. ಈಗ ಬ್ರಿಟಿಶ ಮುಖ್ಯ ಮಂತ್ರಿಗಳಿಗೂ ವಾಯುಸರಾಯರಿಗೂ ನಡೆದ ಮಾತುಗಳಲ್ಲಿ ಸಂರಕ್ಷಣೆಯ ದೃಷ್ಟಿಯಿಂದ ಹಿಂದುಸ್ತಾನದ ವಿಭಜನೆಯು ನ್ಯಾಯವಾದುದಲ್ಲವೆಂದು ಮುಖ್ಯ ಮಂತ್ರಿಗಳು ಅಭಿಪ್ರಾಯಪಟ್ಟ ಸುದ್ದಿ ಬಂದಿದೆ. ಜೊತೆಗೆ ಹಿಂದುಸ್ತಾನದ ಸೈನ್ಯಾಧಿಕಾರಿಗಳು ಕೂಡ ಇದೇ ಅಭಿಪ್ರಾಯಕ್ಕೆ ಹೊಂದಿಕೊಂಡು ಭಾರತದ ರಕ್ಷಣೆಯ ದೃಷ್ಟಿಯಿಂದ ಸೈನ್ಯದ ವಿಭಜನೆಯಾಗಕೂಡದೆಂದು ಹೇಳಿದ ಸಂಗತಿ ಬೆಳಕಿಗೆ ಬಂದಿದೆ. ಆದರೆ ಜಿನ್ನಾರ ಹಟಕ್ಕೆ ಸೋತು ಭಾರತ ವಿಭಜನೆ ಅನಿವಾರ್ಯವೆಂದೂ ಶೀಘ್ರ ಪ್ರತ್ಯೇಕ ಘಟನಾ ಸಭೆ ಕರೆಯಬಹುದೆಂದೂ ಹೇಳುವ ವಾಯುಸರಾಯರ ಯೋಜನೆಗೆ ಬ್ರಿಟಿಶ ಮಂತ್ರಿಮಂಡಲ ಒಪ್ಪಿಗೆಯುತ್ತಿದೆಯೆಂದು ತಿಳಿದುಬಂದಿದೆ.

ಜಿನ್ನಾರವರ ಬೇಡಿಕೆಯ ಬಗ್ಗೆ ಭಾರತದ ಮುಖಂಡರ ಅಭಿಪ್ರಾಯ

ಬಂಗಾಲ ಪಂಜಾಬಗಳ ವಿಚ್ಛೇದನೆಯಾಗಕೂಡದೆಂದೂ ಅದರಿಂದ ಮುಸ್ಲಿಮೇತರರಿಗೆ ಶಾಂತಿ ದೊರೆತಂತೆಯೂ ಜಿನ್ನಾರವರು ವಾದಿಸುತ್ತ ಬಂಗಾಲ ವಿಭಜನೆಯ ಮಾತು ಬಂಗಾಲದ ಸರ್ವ ಹಿಂದುಗಳ ಹುಚ್ಚು ಕೂಗೆಂದು ಸಾರಿದ್ದಾರೆ. ಅಲ್ಲದೆ ಪೂರ್ವ ಪಶ್ಚಿಮ ಪಾಕಿಸ್ತಾನಗಳ ನಡುವೆ ಸಾವಿರ ಮೈಲುಗಳಷ್ಟಿರುವ ಮಾರ್ಗವನ್ನು ಅವರು ಬೇಡಿರುವುದೂ ಸುಸ್ಪಷ್ಟವಿದೆ. ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರು ಜಿನ್ನಾರ ಈ ಹೊಸ ಬೇಡಿಕೆಯನ್ನು ಅಸಮರ್ಥನೀಯವೆಂದು ಹೇಳಿ ಖಂಡಿಸಿದ್ದಾರೆ. ಈ ಬೇಡಿಕೆಯಿಂದುದ್ಭವಿಸಿದ ಪರಿಸ್ಥಿತಿಯನ್ನು ಚರ್ಚಿಸಲು ಎ. ಆಯ್. ಸಿ. ಸಿ ಯ ಅಧಿವೇಶನ ಸಭೆಯನ್ನು ಕರೆಯಬೇಕೆಂದು ಡಾ. ಚೋಯಿಥರಾಮ ಗಿಡವಾಣಿಯವರು ಶ್ರೀ ದೇವರಿಗೆ ತಂತಿ ಕಳುಹಿಸಿರುವರು. ಬ್ರಿಟನ್ನಿನಲ್ಲಿ ಹಿಂದುಸ್ತಾನದ ಹಾಯಿ ಕಮೀಶನರರಾದ ಸರ್ ಸಾಮ್ಯುಯಲ್ ರಂಗನಾಥನ್‌ರು ಸೈನ್ಯದ ವಿಭಜನೆ ಸರಿಯಾಗದೆಂದು ಅಭಿಪ್ರಾಯಪಡುತ್ತಾರೆ. ಅದರ ಇದಕ್ಕೆ ವಿರುದ್ಧವಾಗಿ ಪಾಕಿಸ್ತಾನದಲ್ಲಿರಲು ಸೀಖರು ಎಂದೂ ಸಿದ್ಧವಿಲ್ಲೆಂದೂ ಭಾರತದ ವಿಭಜನೆಯಾದರೆ ಸೈನ್ಯ ಪಡೆಯನ್ನು ವಿಚ್ಛೇದಿಸಬೇಕಾಗುವದೆಂದೂ ನಡುಗಾಲ ಸರಕಾರದ ಸಂರಕ್ಷಣ ಮಂತ್ರಿಗಳಾದ ಸರದಾರ ಬಲದೇವಸಿಂಗರು ಹೇಳಿಕೆ ಕೊಟ್ಟಿದ್ದಾರೆ. ಇನ್ನು 'ಭಾರತ ಭಾಗ್ಯ ವಿಧಾತ'ರೆನಿಸಿದ ಮಹಾತ್ಮರು ಹಿಂದುಸ್ತಾನದ ವಿಚ್ಛೇದನೆಯಿಂದ ರಾಷ್ಟ್ರಕ್ಕೆ ಹಿತವಾಗಲಾರದೆಂದೂ ಅದರಿಂದ ಸ್ವಾತಂತ್ರ್ಯದಿನವು ಮುಂದೆ ಬೀಳುವುದೆಂದೂ ಅದ್ದರಿಂದ ಸಾಮ್ಯವಾದಿಗಳು ಕಾಂಗ್ರೆಸಿನ ಬೆಂಬಲಕ್ಕೆ ನಿಂತು ಪಾಕಿಸ್ತಾನ ವಿರೋಧವನ್ನು ಸಂಘಟಿಸಬೇಕೆಂದೂ ಸಾಮ್ಯವಾದಿಗಳೊಡನೆ ಮಾತುಕತೆ ನಡೆಸುವಾಗ ಹೇಳಿದರೆಂದೂ ತಿಳಿದುಬಂದಿದೆ. ಇದಲ್ಲದೆ ಹೊಸದಿಲ್ಲಿಯಲ್ಲಿಯ ಪ್ರಾರ್ಥನೋತ್ತರ ಭಾಷಣವೊಂದರಲ್ಲಿ ಅವರು— 'ಪ್ರತಿಯೊಬ್ಬ ದೇಶಪ್ರೇಮಿ ಭಾರತೀಯನೂ ಬ್ರಿಟಿಶರೂ ಭಾರತದಲ್ಲಿಯ ಹಿಂಸೆಯನ್ನು ನಿರ್ಮೂಲಗೊಳಿಸಲಿ, ಮೇ ೧೬ ರ ಘೋಷಣೆಯ ಪ್ರಕಾರ ಭಾರತವನ್ನು ಬಿಟ್ಟುಕೊಟ್ಟು ಬ್ರಿಟಿಶರು ತೊಲಗಲಿ. ಈಗಾಗಲೇ ನಿರ್ಬಲವಾಗಿರುವ ಭಾರತವು ಸ್ವತಂತ್ರವಾದರೆ ಅದು ಜಗತ್ತಿಗೇನೂ ಹಿಂಸೆ ಕೊಡುವ ಮಾರ್ಗವನ್ನನುಸರಿಸಲಾರದು' ಎಂದು ಹೇಳಿದರು. ಇದರ ಮೇಲೆ ಅವರು ತಾತ್ಕಾಲಿಕ ವಾಯುಸರಾಯರನ್ನು ಸಂದರ್ಶಿಸಿ ತಮ್ಮ ಅಭಿಪ್ರಾಯವನ್ನು ಅವರಿಗೆ ತಿಳಿಸಿದರೆಂದೂ ಗೊತ್ತಾಗಿದೆ. ಬಂಗಾಲದ ವಿಭಜನೆ ನಡೆದರೆ ಹಿಂದೂ ಸಮಾಜಕ್ಕೆ ವಿನಾಶ ಸನ್ನಿಹಿತವಾದೀತೆಂದು ಶ್ರೀ ಜೋಗೇಂದ್ರನಾಥ ಮಂಡಲರು ಬೆದರಿಕೆ ಹಾಕುತ್ತಿದ್ದ ಹಾಗೇ ಬಂಗಾಲೀ ದಲಿತ ವರ್ಗದ ಇನ್ನಿಬ್ಬರು ಮುಖಂಡರಾದ ಶ್ರೀ ಪ್ರೇಮಹರಿ ಬರ್ಮನ ಮತ್ತು ಮನೋರಂಜನದಾಸರು ಬಂಗಾಲದಲ್ಲಿಯ ಇಡಿಯ ದಲಿತ ವರ್ಗ ಸಮಾಜವೆ ಬಂಗಾಲ ವಿಭಜನೆಯನ್ನು ಪುರಸ್ಕರಿಸುತ್ತದೆಂದು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ. ಹಿಂದುಸ್ತಾನದ ಇತರ ಭಾಗಗಳೊಡನೆ ಬಂಗಾಲದ ಸಂಬಂಧವೇನಿರಬೇಕೆಂಬುದನ್ನು ಬಂಗಾಲಿಗಳೇ ನಿರ್ಣಯಿಸಬೇಕಾಗಬಹುದೆಂದು ಕೇಂದ್ರ ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ ಜಗಜೀವನರಾಮರು ಹೇಳಿದ್ದಾರೆ. ವೈಸರಾಯರ ಕಾರ್ಯ ಸಮಿತಿಯ ಸದಸ್ಯರಾಗಿದ್ದ ಶ್ರೀ ನಲಿನೀರಂಜನ ಸರಕಾರರು 'ಬಂಗಾಲ ಹಿಂದುಗಳಿಗೆ ಈ ತಮ್ಮ ಪ್ರಾಂತದಲ್ಲಿಯ ಜೀವನ ಅಸಹ್ಯವಾಗಿರುವುದರಿಂದ ಇಂದಿಗೆ ೪೦ ವರ್ಷಗಳ ಹಿಂದೆ ಅತ್ಯುಗ್ರವಾಗಿ ಪ್ರತಿಭಟಿಸಿದ ಬಂಗಾಲ ವಿಭಜನೆಯನ್ನೇ ಈಗ ಅವರು ಅತ್ಯಾಗ್ರಹದಿಂದ ಸಾಧಿಸಬೇಕಾಗಿದೆ'ಯೆಂದಿದ್ದಾರೆ. ಇವರ ಮಧ್ಯ ಅಖಂಡ ಬಂಗಾಲವಾದಿಗಳಾದ ಶ್ರೀ ಶರಚ್ಚಂದ್ರ ಬೋಸ ಹಾಗೂ ಕೆಲವು ಪ್ರಮುಖ ಕಾಂಗ್ರೆಸ ಮತ್ತು ಮುಸ್ಲಿಂ ಲೀಗ ಧುರೀಣರಲ್ಲಿ ಚರ್ಚೆ ನಡೆದು ಕೆಲವು ಆಧಾರುಗಳು ಸಿದ್ಧವಾಗಿ ಅವು ಕಾಂಗ್ರೆಸ ಹಾಗೂ ಮುಸ್ಲಿಂಲೀಗ ಸಂಸ್ಥೆಗಳ ಮುಂದೆ ಚರ್ಚೆಗಿಡಲಾಗುವದೆಂಬ ಸುದ್ದಿ ಸಿಕ್ಕಿದೆ. ಮತ್ತು ಅಖಂಡ ಭಾರತದಲ್ಲಿಯೇ ರಾಷ್ಟ್ರದ ಹಿತವಿದೆಯೆಂದೂ ಬಂಗಾಲ ವಿಭಜನೆಯಾಗಲೇಬೇಕಾಗಿ ಬಂದರೆ ಅದರ ಬಗ್ಗೆ ಹೊಸ ಚುನಾವಣೆ ನಡೆಯಬೇಕೆಂದು ಪ್ರಗತಿಪರ ಮುಸಲ್ಮಾನರಿರುವ ಬಂಗಾಲದ ಕೃಷಿಕ ಪ್ರಜಾಪಕ್ಷದ ಪ್ರಮುಖರು ಪ್ರಕಟನೆ ಹೊರಡಿಸಿದ್ದಾರೆ. ಕೊನೆಯದಾಗಿ ರಾಜಾಜಿಯವರು ಪಾಕಿಸ್ತಾನ ಬೇಡಿಕೆಯು ಕೇವಲ ವಿಸಂಗತವೆಂದು ಖಂಡತುಂಡಾಗಿ ಹೇಳಿದ್ದಾರೆ.

ಲೀಗಿನ ಕಲ್ಪನಾ ಸಾಮ್ರಾಜ್ಯ

ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರಿಗೆ ಎಲ್ಲ ವಿಧದ ರಕ್ಷಣಾ ವ್ಯವಸ್ಥೆಯನ್ನು ಮಾಡುವದಾಗಿ ಹೇಳುತ್ತ ಅದೇ ಬಾಯಲ್ಲಿ ಪಾಕಿಸ್ತಾನದಲ್ಲಿ ಕುರಾಣದ ತತ್ವಗಳಿಗನುಗುಣವಾಗಿ ರಾಜ್ಯಭಾರ ಕ್ರಮವನ್ನು ಕೈಕೊಳ್ಳಲಾಗುವದೆಂದು ಮುಸ್ಲಿಂ ಲೀಗಿನ ಮುಖಂಡರು ಅನೇಕ ಸಲ ಹೇಳಿದ್ದುಂಟು. ಈಗ ಮತ್ತೊಂದು ಆಶ್ಚರ್ಯಕಾರಕವಾದ ಸುದ್ದಿ ಹೊರಬಿದ್ದಿದೆ: 'ಮುಸ್ಲಿಂ ಲೀಗು ಸಿಂಧೂ ನದಿಯ ವರೆಗಿನ ಎಲ್ಲ ಪ್ರದೇಶವನ್ನು ಅಫಗಾನಿಸ್ತಾನಕ್ಕೆ ಕೊಡುವುದು; ಅನಂತರ ಪಾಕಿಸ್ತಾನವು ಅಫಗಾನಿಸ್ತಾನದೊಡನೆ ಒಪ್ಪಂದ ಮಾಡಿಕೊಳ್ಳುವುದು. ಇಲ್ಲದಿದ್ದರೆ ಗಡಿರಕ್ಷಣೆಗೆ ಬ್ರಿಟಿಶ ಅಧಿಕಾರಿಗಳ ನೇತೃತ್ವದಲ್ಲಿ ೩೦ ಸಾವಿರ ಗುರ್ಖಾ ಸೈನಿಕರನ್ನು ಇಡಲಾಗುತ್ತದೆ'— ಎಂದು ರಾಜಕೀಯ ಶಾಖೆಯ ಮುಖ್ಯಾಧಿಕಾರಿಗಳಾದ ವಿಲಿಯಂ ಬಾರ್ಟನರು 'ಡೇಲಿ ಟೆಲಿಗ್ರಾಫ್'ಪತ್ರಿಕೆಯಲ್ಲಿ ಬರೆದಿರುವರು. ಆದರೆ ಮಿ॥ ಬಾರ್ಟನರೇನೋ ಈ ಎರಡೂ ಯೋಜನೆಗಳು ಯೋಗ್ಯವಿರುವದಿಲ್ಲವೆಂದೂ ಹಿಂದುಸ್ತಾನವು ಬ್ರಿಟಿಶ ಕಾಮನವೆಲ್ತದಲ್ಲಿರಬೇಕೆಂದೂ ಒಂದು ಇಂಪೀರಿಯಲ್ ಸೈನ್ಯವನ್ನು ಸಜ್ಜುಗೊಳಿಸಿ ಅಫಗಾನ ಗಡಿರಕ್ಷಣೆಗಾಗಿ ಇಡಬೇಕೆಂದೂ ಅಭಿಪ್ರಾಯಪಟ್ಟಿದ್ದಾರೆ.

ದೇಶದಲ್ಲಿಯ ಗಲಭೆ

ಪಂಜಾಬದಲ್ಲಿ ಇನ್ನೂ ಅನಿಶ್ಚಿತ ಪರಿಸ್ಥಿತಿ ಇರುವುದರಿಂದ ಹಿಂದೀ ಸೈನ್ಯದ ಪಾಲ್ಕನೆಯ ದಲದ ಕೆಲವು ತಂಡಗಳನ್ನು ದಕ್ಷಿಣ ಹಿಂದುಸ್ತಾನದಿಂದ ಉತ್ತರ ಹಿಂದುಸ್ತಾನಕ್ಕೆ ಸಾಗಿಸಲಾಗಿದೆಯೆಂದು ಪ್ರಕಟನೆ ಹೊರಟಿದೆ. ಕಲಕತ್ತೆಯ ಪರಿಸ್ಥಿತಿಯು ಕೂಡಾ ಹದಕ್ಕೆ ಬಂದಿತೆಯೆಂದು ಹೇಳಲು ಬರುವಂತಿಲ್ಲ. ಮೊನ್ನೆ ಮೊನ್ನೆ ಪೋಲೀಸ ಠಾಣೆಯ ಸಮೀಪ ಬಾಂಬ ಸಿಡಿದ ಸಂದರ್ಭದಲ್ಲಿ ೪೦ ಜನರ ಬಂಧನವಾಯಿತೆಂದು ತಿಳಿದುಬಂದಿದೆ. ಬನ್ನುದಲ್ಲಿ ಮುಸ್ಲಿಂ ಲೀಗಿನ ಮೆರವಣಿಗರು ಬೀದಿಯಲ್ಲಿ ಕಲ್ಲು ತೂರುವ ಮುಂತಾದ ವಿಧ್ವಂಸಕ ಚಟುವಟಿಕೆ ನಡೆಸುತ್ತಿರುವ ಸುದ್ದಿ ಬಂದಿದೆ. ಪೇಶಾವರ ಮರ್ದಾನದ ನಗರಗಳಲ್ಲಿ ರೇಲ್ವೆನಿಲ್ದಾಣ ಮುಂತಾದ ಕಟ್ಟಡಗಳ ಮೇಲೆ ದಾಳಿ ಮಾಡುತ್ತಿರುವರೆಂಬುದು ಗೊತ್ತಾಗಿದೆ.

ಆತ್ಮರಕ್ಷಣೆ

ಈ ಗಲಭೆಗಳಲ್ಲಿ ಅಪೂರ್ಣ ಅಧಿಕಾರವುಳ್ಳದ್ದಾದರಿಂದ ನಡುಗಾಲ ಸರಕಾರವೂ ಇತರ ಕಾರಣಗಳಿಂದ ಪ್ರಾಂತಿಕ ಸರಕಾರಗಳೂ ನಿರಪರಾಧಿಗಳು ಹಿಂಸೆಗೆ ಗುರಿಯಾಗುವ ಸಂದರ್ಭದಲ್ಲಿ ಸಾಕಾದಷ್ಟು ರಕ್ಷಣೆ ಕೊಡಲಾರವೆ ಹೋದುದರಿಂದ ಪ್ರತಿಯೊಬ್ಬನೂ ಪುಂಡರಿಗೆ ಹೆದರಿ ಓಡಿಹೋಗದೆ ಧೈರ್ಯದಿಂದ ಎದುರಿಸಿ ಆತ್ಮರಕ್ಷಣೆ ಮಾಡಿಕೊಳ್ಳಬೇಕೆಂದು ಸರದಾರ ಪಟೇಲರು ಸಾರಿದ್ದಾರೆ. ಅನ್ಯರಕ್ಷಣೆ ದೊರೆಯದ ಕಾಲದಲ್ಲಿ ಆತ್ಮರಕ್ಷಣೆಗಾಗಿ ತನಗೆ ಯುಕ್ತವೆನಿಸಿದ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸಿದ್ಧನಿರಬೇಕೆಂಬ ಮಾತನ್ನು ಗಲಭೆಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿಯ ಸಭ್ಯ ಪ್ರಜೆಗಳು ಗಮನಿಸತಕ್ಕದ್ದಾಗಿದೆ. ಪಾಶವೀ ಶಕ್ತಿಯ ದಬ್ಬಾಳಿಕೆಗೆ ಅಂಜಿ ಓಡಿಹೋದರೆ ಉಳಿದವರಲ್ಲಿಯ ಆತ್ಮ ವಿಶ್ವಾಸವು ಹಾರಿಹೋಗುವದು. ಆದುದರಿಂದ ಬಂದ ಗಂಡಾಂತರವನ್ನು ಮೀರದಂತೆ ಪ್ರತಿಭಟಿಸಿರಿ ಎಂಬುದೇ ಪಟೇಲರ ವೀರ ಸಂದೇಶ.

ಹುಬ್ಬಳ್ಳಿ, ಧಾರವಾಡಗಳಲ್ಲಿ ಮಾನ್ಯ ವರ್ತಕರು

ನೀರಸಾಗರ ಯೋಜನೆಯ ಸ್ಥಳಪರಿಶೀಲನೆ

ಧಾರವಾಡದಲ್ಲಿ ಕನ್ನಡ ಮರಾಠಿ ಗೊಂದಲ

"ನಾಗರಿಕರಲ್ಲಿ ಸಾಮಾನ್ಯವಾಗಿ ಉದಾಸೀನತೆ ವಿಶೇಷವಾಗಿರುತ್ತದೆ. ನಗರ ಸಭೆಯ ಸದಸ್ಯರನ್ನು ಆರಿಸಿ ಕೊಟ್ಟ ಬಳಿಕ ಯೋಜನೆಗಳನ್ನು ಸಿದ್ಧಗೊಳಿಸಿ ಕಾರ್ಯರಂಗಕ್ಕೆ ತರುವ ಹೊಣೆಯೆಲ್ಲ ಸದಸ್ಯರದೊಡೇ ನಾಗರಿಕರು ಭಾವಿಸುವರು. ಈ ಬಗೆಯ ಔದಾಸೀನ್ಯ ಉಚಿತವಲ್ಲ. ನಾಗರಿಕರ ಹಾರ್ದಿಕ, ವಿಚಾರಪೂರ್ಣ ಸಹಕಾರವಿಲ್ಲದೆ ನಗರಸಭೆಯು ಆಡಳಿತ ಯಶಸ್ವಿಯಾಗಲಾರದು" ಎಂದು ಮುಂಬಯಿ ಸರಕಾರದ ಸ್ಥಾನಿಕ ಸ್ವರಾಜ್ಯ ಮಂತ್ರಿಯಾದ ಮಾನ್ಯ ಗೋವಿಂದರಾವ ವರ್ತಕರು ಹುಬ್ಬಳ್ಳಿಯಲ್ಲಿ ತಾ. ೨೩ ಕ್ಕೆ ನಗರ ಸಭೆಯ ಮಾನಪತ್ರಕ್ಕೆ ಉತ್ತರ ಕೊಡುತ್ತ ಅಪ್ಪಣೆ ಕೊಡಿಸಿದರು. ಹುಬ್ಬಳ್ಳಿಯ ನಗರ ಸಭೆಯವರು ಕಟ್ಟಿಸಬೇಕೆಂದಿರುವ ಪುರಭವನದ ಅಡಿಗಲ್ಲು ಇರಿಸುವ ಸಲುವಾಗಿ ನಗರಸಭೆಯ ಆಮಂತ್ರಣದ ಮೇರೆಗೆ ಬಂದಿದ್ದ ಮಂತ್ರಿವರ್ಯರು ಹುಬ್ಬಳ್ಳಿ ಧಾರವಾಡಗಳಲ್ಲಿ ಕ್ರಮವಾಗಿ ತಾ. ೨೩-೨೪ ಕ್ಕೆ ಭೆಟ್ಟಿ ಕೊಟ್ಟರು.

ನೀರಸಾಗರ ಯೋಜನೆ

ಹುಬ್ಬಳ್ಳಿ ನಗರ ಸಭೆಯ ಮಾನಪತ್ರ ಸಮಾರಂಭಕ್ಕಿಂತ ಮೊದಲು ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕೆಲ ಪ್ರಶ್ನೆಗಳಿಗೆ ಶ್ರೀ ವರ್ತಕರು ಉತ್ತರ ಕೊಟ್ಟರು. ನೀರಸಾಗರ ಯೋಜನೆ ಎಂದು ಪ್ರಾರಂಭವಾಗುವದೆಂದು ಶ್ರೀ ಗುರುರಾವ ನಾಳವೇಕರರು ಕೇಳಿದಾಗ, ಈ ಯೋಜನೆಯನ್ನು ಬೇಗನೆ ಕೈಕೊಳ್ಳಲು ಆಜ್ಞಾಪಿಸಲಾಗಿದೆಯೆಂದರಲ್ಲದೆ ಅದು ಪ್ರಾರಂಭವಾಗುವ ನಿರ್ದಿಷ್ಟ ತಿಥಿ ವಾರ ನಕ್ಷತ್ರಗಳನ್ನು ಹೇಳಬರುವದಿಲ್ಲೆಂದರು. ನಗರ ಸಭೆಯ ಮಾನಪತ್ರದಲ್ಲಿ ಎತ್ತಲ್ಪಟ್ಟ ಇದೇ ಪ್ರಶ್ನೆಗೆ ಉತ್ತರ ಕೊಡುತ್ತ ಕೋಟ್ಯಂತರ ರೂಪಾಯಿಯ ಯೋಜನೆಗಳು ಕ್ಷಣಾರ್ಧದಲ್ಲಿ ಆರಂಭವಾಗಲಾರವೆಂದೂ ಲೋಕ, ಯಾಂತ್ರಿಕ ತಾಂತ್ರಿಕ ಕೊರತೆಗಳನ್ನು ಪರಿಹರಿಸಬೇಕಾಗಿದೆಯೆಂದರೂ ತಿಳಿಸಿದರು.



ಶ್ರೀಮಾನ್ ವರ್ತಕರು

ಆರಳಿ ಪೇಟೆಯಲ್ಲಿ ಕಟ್ಟಿಸಲಿರುವ ಪುರಭವನದ ಅಡಿಗಲ್ಲನ್ನು ಇರಿಸಿ ಬಂದ ನಂತರ ಅವರು ಅಂಥ ಭವನದ ಅವಶ್ಯಕತೆಯನ್ನು ತಿಳಿಸಿ ಆ ಭವನದಲ್ಲಿ ನಗರಸಭೆ ಪ್ರಾರಂಭಿಸಲಿರುವ ಗ್ರಂಥಾಲಯ ಮತ್ತು ಸಂಗ್ರಹಾಲಯಗಳಿಗೆ ಶ್ರೀಮಂತ ನಾಗರಿಕರು ಕೊಡುಗೈಯಿಂದ ಸಹಾಯ ಮಾಡಬೇಕೆಂದು ಬಿನ್ನವಿಸಿಕೊಂಡರು. ಪಕ್ಷಪಂಗಡಗಳ ಭೇದವಿಲ್ಲದೆ ನಗರ ಪಿತಾಮಹರೆಲ್ಲರೂ ಜನಸೇವೆಯಲ್ಲಿ ಸಾಮುದಾಯಿಕ ಹೊಣೆಯಿಂದ ಕೆಲಸ ಮಾಡಬೇಕೆಂದು ನಗರ ಪಿತಾಮಹರಿಗೂ ಉಪದೇಶ ಮಾಡಿದರು. ಸ್ಥಾನಿಕ ಸ್ವರಾಜ್ಯವೆಂದರೆ ಕಸಬರಿಗೆಯ ಸ್ವರಾಜ್ಯವೆಂದು ಹಿಂದೆ ಜನರು ತಿರಸ್ಕರಿಸುತ್ತಿದ್ದರು. ಆದರೆ ಕಸಬರಿಗೆಯ ಚಿಹ್ನ ಸ್ಥಾನಿಕ ಸಂಸ್ಥೆಗಳ ಚಿಹ್ನವೆಂದರೆ ಅದರಲ್ಲಿ ಅವಮಾನವೇನೂ ಇಲ್ಲವೆಂದು ಅವರು ಸಾರಿದರು.

ಮುಂದೆ ಮಂತ್ರಿವರ್ಯರು ನಾಗರಿಕರಿಗೆರಡು ಮಾತು ಹೇಳಿದರು. ಕರಭಾರಕ್ಕೆ ನಾಗರಿಕರು ಬೆದರಬಾರದು. ಸದಸ್ಯರು ಕರಭಾರ ಹೆಚ್ಚಾಯಿತೋ ಎಂಬ ಪ್ರಶ್ನೆಯನ್ನು ಕೇಳುವ ಬದಲು ಎತ್ತಿದ ಕರದ ಉಪಯೋಗ ಜನಹಿತಕ್ಕಾಗಿ ಆಯಿತೋ ಇಲ್ಲವೋ ಎಂದು ಕಣ್ಣಿಟ್ಟು ಎಚ್ಚರ ಹಾಕಿಕೊಂಡು ಪರೀಕ್ಷಿಸಬೇಕು. ಹುಬ್ಬಳ್ಳಿಯ ನಗರ ಸಭೆಯು ಕರಭಾರ ಪರಮಾವಧಿಗೆ ಮುಟ್ಟಿದೆಯೆಂದು ಮನವರಿಕೆ ಮಾಡಿಕೊಟ್ಟರೆ ಸರಕಾರ ಸಹಾಯ ಮಾಡಲು ಸಿದ್ಧವಾಗಿದೆ.

ನೀರಸಾಗರ ಯೋಜನೆಯ ಸ್ಥಳಕ್ಕೆ ಭೆಟ್ಟಿ

ತಾ. ೨೪ಕ್ಕೆ ಕಲೆಕ್ಟರ ಮತ್ತು ಇತರ ಅಧಿಕಾರಿಗಳು ಹಾಗು ಧಾರವಾಡ ನಗರ ಸಭಾಧ್ಯಕ್ಷ ಮತ್ತು ಜಿ ಕಾಂಗ್ರೆಸ್ ಅಧ್ಯಕ್ಷರೊಡನೆ ನೀರಸಾಗರ ಯೋಜನೆಯ ಸ್ಥಳಕ್ಕೆ ಹೋದರು. ಟಾಕಿ ಕಟ್ಟುವ ಸ್ಥಳವಾದ ಕಣವಿ ಹೊನ್ನಾಪುರಕ್ಕೆ ಅವರು ಹೋದಾಗ ಶ್ರೀ. ಎಸ್. ಎಸ್. ನಾಯಕರು ಹಲವು ಉಪಯುಕ್ತ ಸೂಚನೆಗಳನ್ನು ಮಾಡಿದರು.

ಧಾರವಾಡ ನಗರಸಭೆಯವರು ಒಪ್ಪಿಸಿದ ಮಾನಪತ್ರಕ್ಕೆ ಉತ್ತರ ಕೊಡುತ್ತ ನಗರ ರಚನೆ ಆರೋಗ್ಯ ರಕ್ಷಣೆ ಹಾಗು ಮಾರ್ಗ ರಚನೆಯ ಯೋಜನೆಗಳಿಗೆ ಸರಕಾರ ಸಾಧ್ಯವಾದ ಸಹಾಯ ಮಾಡುವದೆಂದು ಆಶ್ವಾಸನ ಕೊಟ್ಟರೂ ನಗರಸಭೆಯವರು ಮಾರಾಟಕರದ ಒಂದು ಅಂಶವನ್ನು ಬೇಡುವದು ನ್ಯಾಯವಲ್ಲೆಂದರು. ಹರಿಜನ ನೌಕರರಿಗೆ ವಸತಿ ನೀರುಗಳ ಸೌಕರ್ಯ ಒದಗಿಸಿಕೊಡಬೇಕೆಂದೂ ಒತ್ತಿ ಹೇಳಿದರು.

ಹುಬ್ಬಳ್ಳಿಯಲ್ಲಿ ಹೆಚ್ಚಿನ ಅಂಶ ತಮ್ಮ ಮಾತುಗಳನ್ನು ಮಂತ್ರಿಗಳು ತಮ್ಮ ಮಾತೃಭಾಷೆಯಾದ ಮರಾಠಿಯಲ್ಲಿಯೆ ಆಡಿದ್ದರು. ಧಾರವಾಡದಲ್ಲಿ ಮಾನಪತ್ರಕ್ಕೆ ಇಂಗ್ಲೀಷಿನಲ್ಲಿ ಉತ್ತರ ಕೊಟ್ಟ ಬಳಿಕ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಬಗ್ಗೆ ನಾಲ್ಕು ಕಳಕಳಿಯ ಮಾತುಗಳನ್ನು ಮರಾಠಿಯಲ್ಲಿ ಹೇಳಲಪೇಕ್ಷಿಸಿದರು. ಇದಕ್ಕೆ

—೧೩ನೇ ಪುಟಕ್ಕೆ

ಅಂತರರಾಷ್ಟ್ರೀಯ

ರಶಿಯಾ ಮತ್ತು ಅಣುಶಕ್ತಿ

ಅಣುಶಕ್ತಿಯ ನಿಯಂತ್ರಣ ಮತ್ತು ಸಾಮೂಹಿಕ ಶಸ್ತ್ರಸಂನ್ಯಾಸದ ಸಂಬಂಧದಲ್ಲಿ ನ್ಯೂಯಾರ್ಕ ನಲ್ಲಿ ಮಾಡಿದ ಒಂದು ಭಾಷಣದಲ್ಲಿ ಯುಕ್ತ ರಾಷ್ಟ್ರ ಸಂಘದ ರಶಿಯನ್ ಪ್ರತಿನಿಧಿ ಗ್ರೋಮಿಕೋ ಅವರು ತಮ್ಮ ದೇಶದ ಧೋರಣೆಯನ್ನು ಸಮರ್ಥಿಸಿಕೊಂಡರು. ಅವರ ವಾದ ಹೀಗಿತ್ತು;

✻ ಪ್ರತಿದೇಶದಲ್ಲಿಯೂ ಅಣು ಶಕ್ತಿಯ ವಿನಿಯೋಗವನ್ನು ಕಾಲಕಾಲಕ್ಕೆ ಪರಿಶೀಲಿಸುವ ಅಧಿಕಾರವುಳ್ಳ ಪರಿಶೀಲನ ಸಮಿತಿಯ ಸ್ಥಾಪನೆಯಾಗದೆ ಅಣು ಆಯುಧಗಳನ್ನು ಬಹಿಷ್ಕರಿಸ ಬರುವದಿಲ್ಲೆಂಬ(ಅಮೇರಿಕೆಯ)ವಾದ ಯೋಗ್ಯ ವಲ್ಲ. ಈ ಸಮಿತಿಗೆ ಅಪರಿಮಿತ ಅಧಿಕಾರಕೊಟ್ಟರೆ ರಾಷ್ಟ್ರಗಳ ಅಂತರಿಕ ವಿಷಯದಲ್ಲಿ ಕೈಹಾಕಿದಂ ತಾಗುವದು. ಅಣು ಆಯುಧಗಳ ಬಹಿಷ್ಕಾರವೇ ಅಂತರ್ ರಾಷ್ಟ್ರೀಯ ನಿಯಂತ್ರಣದ ಮೊದಲನೆ ಹೆಜ್ಜೆಯಾಗಬೇಕಲ್ಲದೆ ಹಿಂದುಮುಂದಲ್ಲ.

✻ ಅಣುಶಕ್ತಿಯ ರಹಸ್ಯ ಕೇವಲ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಗುತ್ತಿಗೆಯೆಂಬುದು ಬರಿ "ಭ್ರಾಂತಿ"ಯೆಂದು ಅವರು ಎಚ್ಚರಿಕೆ ಕೊಟ್ಟರು. ಈ "ಗುತ್ತಿಗೆ"ಯ ಮನೋಭಾವದ ಫಲವಾಗಿ ರಾಷ್ಟ್ರಗಳು ಅಣು ಆಯುಧಗಳ ನಿರ್ಮಾಣದಲ್ಲಿ ತಾಮೇಲು ನಾಮೇಲೆಂದು ನುಗ್ಗಿ ಪರಸ್ಪರ ಸಂದೇಹದಲ್ಲಿ ಮುಳುಗುವವು. ಬೇಗನೆ ಅಣುಆಯುಧಗಳಿಗೆ ಬಹಿಷ್ಕಾರ ಹಾಕದಿದ್ದರೆ ಕೊನೆಗೆ ಅಮೇರಿಕೆಯೆ ಈ ವಿಷಯದಲ್ಲಿ ಹಿಂದುಳಿಯಬಹುದು.

ಗ್ರೋಮಿಕೋರ ಈ ಎಚ್ಚರಿಕೆಜೊಳ್ಳುಬೆದರಿಕೆಯನ್ನಿಸಿ ಬರುವದಿಲ್ಲ. ರಶಿಯಾಕ್ಕೆ ಅಣುಶಕ್ತಿಯ ಉತ್ಪಾದನೆಯ ಗುಟ್ಟು ಈಗಾಗಲೆ ಗೊತ್ತಾಗಿದೆಯೆಂದು ಹೆನ್ರಿ ವಾಲೇಸರು ಹಿಂದೆ ಹೇಳಿದ್ದರು. ಈಚೆಗೆ ರಶಿಯಾದಲ್ಲಿದ್ದು ಬಂದ ಜರ್ಮನ್ ವೈಜ್ಞಾನಿಕನೊಬ್ಬನ ಅಭಿಪ್ರಾಯವೂ ಹೀಗೆಯೆ ಇದೆಯೆಂದು ಅಮೇರಿಕನ್ ಸಿನೇಟ ಸಭೆಯ ಸದಸ್ಯನೊಬ್ಬನು ಹೇಳಿದ್ದಾನೆ. ಯುರೇನಿಯಮ್ ಮೊದಲಾದ ಅಣುಶಕ್ತಿಯ ಉತ್ಪಾದನೆಗವಶ್ಯವಾದ ಧಾತುಗಳನ್ನು ರಶಿಯಾ ರಭಸದಿಂದ ಸಂಗ್ರಹಿಸುತ್ತಿದೆಯಂತೆ.

ಅಮೇರಿಕೆ ಮತ್ತು ಮಧ್ಯಪೂರ್ವ ಸಂರಕ್ಷಣೆ

ಮಧ್ಯಪೂರ್ವದ ಆಯಕಟ್ಟಿನ ಸ್ಥಾನಗಳ ಸಂರಕ್ಷಣೆಯ ಹೊಣೆಯನ್ನು ಬ್ರಿಟನ್ನು ಅಮೇರಿಕೆಗೆ ಬಿಟ್ಟುಕೊಡಲಿದೆಯೆಂದು ಕಳೆದ ವಾರ ವಿಶ್ವಾಸಾರ್ಹ ಸುದ್ದಿಗಳು ಹೊರಟವು. ಬ್ರಿಟಿಶ ಸಾಮ್ರಾಜ್ಯದ "ಜೀವನಾಡಿ"ಗಳು ಹೋಗಿ ಬರುವ ಸ್ಥಾನಗಳಾದ ಭೂಮಧ್ಯ ಸಮುದ್ರ, ಸುಯೇಜ ಕಾಲಿವೆ ಮತ್ತು ಪೂರ್ವ ಆಫ್ರಿಕೆಯಲ್ಲಿ ಬ್ರಿಟಿಶರ ವಶದಲ್ಲಿರುವ ಮಿಲಿಟರಿ ಠಾಣೆಗಳು ಅಮೇರಿಕೆಯ ರಕ್ಷಣೆಗೊಳಗಾಗಬಹುದು.

ಈ ಸುದ್ದಿಯಲ್ಲಿ ವಿಚಿತ್ರವೇನೂ ಇಲ್ಲ.

✻ ಬ್ರಿಟಿಶ ಸಾಮ್ರಾಜ್ಯ ಕರಗುತ್ತಿದ್ದು ಈ ಭಾಗಗಳ ಸಂರಕ್ಷಣೆಯ ಅಪಾರ ಹೊಣೆಯನ್ನು ಇಂಗ್ಲಂಡು ಹೊರಲಾರದು. ಈಗಾಗಲೆ ಬ್ರಿಟಿಶ ರಕ್ಷಕತ್ವದಲ್ಲಿದ್ದ ಗ್ರೀಸ್ ದೇಶ ಅಮೇರಿಕೆಯ ದತ್ತಪುತ್ರನಾಗಿದೆ.

✻ ರಶಿಯಾದ ಭಯದಲ್ಲಿ ಅಂಗ್ಲೋ-ಅಮೇರಿಕನ್ನರು ಸಮಾನಧರ್ಮರಾಗಿರುವದಲ್ಲದೆ ಮಧ್ಯಪೂರ್ವದ ಎಣ್ಣೆಯ ಹಿತಸಂಬಂಧಗಳೂ ಅವರಿಗೆ ಸಮಾನವಾಗಿವೆ. ಇರಾಣ ಇರಾಕಗಳಲ್ಲಿ ಬ್ರಿಟಿಶ ಎಣ್ಣೆ ಕಂಪನಿಗಳಿರುವಂತೆ ಸೌದಿ ಅರೇಬಿಯಾದಲ್ಲಿ ಅಮೇರಿಕನ್ನರು ಎಣ್ಣೆ ಸವಲತ್ತುಗಳನ್ನು ಪಡೆದಿದ್ದಾರೆ. ಈ ಬಗ್ಗೆ ಅವರಲ್ಲಿ ಪರಸ್ಪರ ವೈಷಮ್ಯವಿದ್ದರೂ ರಶಿಯಾದ ನೆರೆಮನೆಯಲ್ಲಿರುವ ಎಣ್ಣೆಯನ್ನು ದೂರದವರಾದ ತಾವಿಬ್ಬರು ಅನುಭವಿಸುತ್ತಿರುವದರಿಂದ ರಶಿಯಾದ ವಿರುದ್ಧ ಅದನ್ನು ರಕ್ಷಿಸುವಲ್ಲಿ ಒಗ್ಗಟ್ಟಾಗಿದ್ದಾರೆ.

✻ ಅಮೇರಿಕೆಯ ನೌಕಾಪತಿ (ಅಡ್ಮಿರಲ್) ಕೊನಲ್ಲಿಯವರು ತುರ್ಕಿ, ಇರಾಣಗಳಲ್ಲಿ ಸಂಚರಿಸುತಿರುವದು ಈ ಸಂಬಂಧದಲ್ಲಿಯೆ ಇರಬಹುದು.

ಈ ಚಾಲನೆಗಳಿಂದ ರಶಿಯಾದ ಕುಶಂಕೆಗಳು ಇನ್ನಷ್ಟು ಹೆಚ್ಚುವವು. ಉತ್ತರ ಇರಾಣದಲ್ಲಿ ಅದು ದೊರಕಿಸಿಕೊಂಡ ಎಣ್ಣೆ ಸವಲತ್ತುಗಳಿಗೆ ಇರಾಣಿ ಮಜಲಿಸ ಸಭೆಯ ಸಮ್ಮತಿ ದೊರೆಕದಂತೆ ಅಂಗ್ಲೋ—ಅಮೇರಿಕನ್ನರು ಚಾಲನೆ ಮಾಡುತ್ತಿದ್ದಾರೆ. ಅದರಿಂದ ಉತ್ತರ ಇರಾಣದಲ್ಲಿ ರಶಿಯನ್ ಪಂಚಮದಳದವರ ಚಟುವಟಿಕೆ ತಿರುಗಿ ಪ್ರಾರಂಭವಾಗಿದೆಯೆಂಬ ವದಿಗಳು ಬಂದಿವೆ.

ಇದೀಗ ಸ್ವಾತಂತ್ರ್ಯದ ಹೊಸಲನ್ನು ಮುಟ್ಟಿರುವ ಹಿಂದುಸ್ಥಾನದಂಥ ಹಿಂದುಳಿದ ರಾಜ್ಯಗಳು ಪೂರ್ವ ಪಶ್ಚಿಮಗಳಲ್ಲಿ ಜಗತ್ತಿನ ಅತಿ ವಿನೂತನ ಸಾಮ್ರಾಜ್ಯವಾದ ಅಮೇರಿಕನ್ ಸಾಮ್ರಾಜ್ಯವಾದದಿಂದಲೂ ಉತ್ತರದಿಂದ ಜಗತ್ತಿನ ಅತಿ ಚೈತನ್ಯಪೂರ್ಣ ರಶಿಯನ್ ವಿಸ್ತರಣಶೀಲತೆಯಿಂದಲೂ ಒತ್ತಲ್ಪಟ್ಟು ಹಣ್ಣಾಗುವವು.

ಬಾಲ್ಕನ್ ವಿಚಾರಣೆಯ ಫಲಿತಾಂಶ

ಗ್ರೀಕ ದೇಶದಲ್ಲಿ "ಶಾಸನಬದ್ಧ" ಸರಕಾರದ ವಿರುದ್ಧ ಕೂಟಯುದ್ಧ ನಡೆಸುವವರಿಗೆ ಪ್ರೋತ್ಸಾಹಕೊಡುತ್ತಿವೆಯೆಂದು ಗ್ರೀಕ ಸರಕಾರ ಯುಗೊಸ್ಲೋವಾಕಿಯಾ, ಅಲ್ಬೇನಿಯಾ, ಬಲ್ಗೇರಿಯಾಗಳ ಮೇಲೆ ಕೊಟ್ಟ ದೂರಿನ ಸತ್ಯಾಸತ್ಯತೆಯನ್ನು ವಿಚಾರಿಸಲು ನೇಮಿಸಲ್ಪಟ್ಟ ಸಮಿತಿಯ ವರದಿಯೀಗ ಪ್ರಸಿದ್ಧವಾಗಿದೆ. ೧೧ ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಈ ಸಮಿತಿಯಲ್ಲಿ ೮ ರಾಷ್ಟ್ರಗಳು ಗ್ರೀಸಿನಲ್ಲಿ ಅಂತರ್ಯುದ್ಧಕ್ಕೆ ಪ್ರೋತ್ಸಾಹವಿತ್ತ ಅಪರಾಧದಲ್ಲಿ ಹಿರಿಯ ಪಾಲನ್ನು ಯುಗೊಸ್ಲೋವಾಕಿಯಾದ ತಲೆಯ ಮೇಲೆ ಹೊರಿಸಿವೆ. ಉಳಿದೆರಡು ಆರೋಪಿ ರಾಷ್ಟ್ರಗಳೂ ಅಲ್ಪ ಸ್ವಲ್ಪ ತಪ್ಪು ಮಾಡಿವೆಯೆಂದು ಸಮಿತಿಯ ಮತ.

ಈ ಮೂರು ಆರೋಪಿ ರಾಷ್ಟ್ರಗಳೂ ಗ್ರೀಸೂ ಪರಸ್ಪರ ಸೌಹಾರ್ದದಿಂದ ವರ್ತಿಸಬೇಕು ಮತ್ತು ಪರಸ್ಪರರಲ್ಲಿ ಉದ್ವೇಗವನ್ನು ಹೆಚ್ಚಿಸಬಹುದಾದ ಕೃತಿಗಳಿಂದ ದೂರವಿರಬೇಕು; ಇದಕ್ಕೆ ತಪ್ಪಿದರೆ ನೊಂದ ರಾಷ್ಟ್ರ ಯುಕ್ತರಾಷ್ಟ್ರ ಸಂಘಕ್ಕೆ ದೂರು ಕೊಡಬೇಕು; ಈ ರಾಷ್ಟ್ರಗಳಲ್ಲಿ ಗಡಿ ನಿಯಮಗಳ ಉಲ್ಲಂಘನೆ ನಡೆದರೆ ಅದನ್ನು ಪರಿಶೀಲಿಸಲು ಒಂದು ವಿಶೇಷ ಸಮಿತಿಯಿರಬೇಕು ಎಂಬದಾಗಿ ಸಮಿತಿಯ ಸೂಚನೆ.

ಗ್ರೀಸು ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದರೆ ಪರಿಸ್ಥಿತಿ ಸುಧಾರಿಸಬಹುದೆಂದೂ ವರದಿ ಸೂಚಿಸಿದೆ.

ಈ ವರದಿಗೆ ಎಂದಿನಂತೆ ಸಮಿತಿಯಲ್ಲಿ ಅಲ್ಪಸಂಖ್ಯಾಕರಾಗಿದ್ದ ರಶಿಯಾ ಮತ್ತು ಯುಗೋಸ್ಲಾವಿಯಾಗಳು ಅಸಮ್ಮತಿ ತೋರಿಸಿವೆ. ಅವು ಪ್ರತ್ಯೇಕ ಅಲ್ಪಸಂಖ್ಯಾಕ ವರದಿಯನ್ನು ಬರೆದು ಎಲ್ಲ ತಪ್ಪು ಗ್ರೀಕ್ ಸರಕಾರದ ಪ್ರತಿಗಾಮಿ ದಬ್ಬಾಳಿಕೆಯ ಧೋರಣೆಯದೆಂದು ಸಾರಿವೆ. ಫ್ರಾನ್ಸು ತಟಸ್ಥ ಉಳಿದಿತ್ತು.

ಮತ್ತೆ ಇಲ್ಲಿಯೂ ಹಿರಿ ರಾಷ್ಟ್ರಗಳ ಗುಂಪು. ಎದುರ್ಗುಂಪು!

ಬ್ರಿಟಿಶ ಕೂಲಿಕಾರ ಸಮ್ಮೇಲನ

ಮಾರ್ಗೇಟ ನಗರದಲ್ಲಿ ತಾ. ೨೬ ಕ್ಕೆ ಸೇರಿದ ಬ್ರಿಟಿಶ ಕೂಲಿಕಾರ ಪಕ್ಷದ ವಾರ್ಷಿಕ ಸಮ್ಮೇಲನ ಆ ಪಕ್ಷದ ಇತಿಹಾಸದಲ್ಲಿಯೆ ಅತಿ ದೊಡ್ಡದಾಗಿತ್ತು. ಕೂಲಿಕಾರರ ಅಭಿಪ್ರಾಯವೇನೆಂಬದನ್ನು ಅರಿಯಲು ಅದೊಂದು ಸಾಧನವಾಗಿ ತಿಳಿಯಬಹುದು. ಸಮ್ಮೇಲನ ಕಾಲದಲ್ಲಿ ರಾಷ್ಟ್ರವನ್ನೆದುರಿಸಿದ್ದ ಅತಿ ಪ್ರಮುಖ ಸಮಸ್ಯೆಗಳೆಂದರೆ:—

ಪ್ರಚಂಡ ಆರ್ಥಿಕ ಬಿಕ್ಕಟ್ಟು; ಸಾಮ್ರಾಜ್ಯ ಸಂಬಂಧ; ವಿದೇಶ ಧೋರಣೆ.

ಸಮ್ಮೇಲನದ ಮೊದಲ ದಿವದ ಕಾರ್ಯಕಲಾಪಗಳಿಂದ ಕೂಲಿಕಾರ ಸರಕಾರಕ್ಕೆ ಕೂಲಿಕಾರ ಬೆಂಬಲ ನೆನೆಸಿದ್ದಕ್ಕಿಂತ ಹೆಚ್ಚು ಇದೆಯೆಂದು ಸಿದ್ಧವಾಯಿತು.

ಪಾರ್ಲಮೆಂಟಿನಲ್ಲಿ ಸುಮಾರು ನೂರು ಕೂಲಿಕಾರ ಸದಸ್ಯರ ವಿರೋಧವನ್ನೆದುರಿಸಬೇಕಾಗಿ ಬಂದ ಶಾಂತಿ ಕಾಲದ ಸಾರ್ವತ್ರಿಕ ಒತ್ತಾಯದ ಸೈನ್ಯ ಸೇರ್ಪಡೆಯ ಸರಕಾರಿ ಯೋಜನೆಗೆ ಈ ಸಮ್ಮೇಲನದಲ್ಲಿ ವಿರೋಧಕ್ಕಿಂತ ನಾಲ್ಕುಮಡಿ ಬೆಂಬಲ ದೊರಕಿತು.

ಟ್ರೂಮನ್ನರ ಗ್ರೀಸ್ ಮತ್ತು ತುರ್ಕಿಗೆ ಸಹಾಯ ನೀಡುವ ಯೋಜನೆಗೆ ಬ್ರಿಟಿಶ ಸರಕಾರ ವಿರೋಧ ಮಾಡಬೇಕೆಂಬ ಮತ್ತು ಸಾಮ್ರಾಜ್ಯವಾದವನ್ನು ತ್ಯಜಿಸಿ ವಸಾಹತು ಪ್ರಜೆಗಳ ಉದ್ಧಾರಕ್ಕೆ ಸಹಾಯ ಮಾಡಬೇಕೆಂಬ ಗೊತ್ತುವಳಿಗಳೂ ಚರ್ಚೆಗೆ ಬಂದಿವೆ.

ಬ್ರಿಟಿಶ ಮಂತ್ರಿಮಂಡಲದ ಅಧ್ಯಕ್ಷರಾದ ಹರ್ಬರ್ಟ ಮಾರಿಸನ್ನರು ಕೂಲಿಕಾರ ಪಕ್ಷದಲ್ಲಿರುವ "ಬಂಡುಗಾರ"ರಿಗೆ ಎಚ್ಚರಿಕೆ ಕೊಡುತ್ತ, ಪಕ್ಷದಲ್ಲಿ ಶಿಸ್ತು ಅವಶ್ಯವೆಂದೂ ಶಿಸ್ತುಗೆಟ್ಟರೆ ಪಕ್ಷದ ಚಕ್ಕಡಿಯೇ ಉರುಳಿ ಕಾನ್ಸರ್ವೇಟಿವರು ಪುನಃ ಅಧಿಕಾರಕ್ಕೆ ಬರಬಹುದೆಂದೂ ಹೇಳಿದ್ದಾರೆ.

"ಮೆಲ್ಲನೆ ಸಾಗಿರಿ" ಸಂಪು

ಕಮ್ಯುನಿಸ್ಟರನ್ನು ಸರಕಾರದಿಂದ ಹೊರಹೂಡಿದ್ದಕ್ಕೆ ಮೊದಲನೆಯ ಪ್ರತೀಕಾರವೋ ಎಂಬಂತೆ ಫ್ರಾನ್ಸಿನ ೧೦೦೦೦೦ ಗ್ಯಾಸ್ ಮತ್ತು ವಿದ್ಯುತ್ ಕೂಲಿಕಾರರು ಕಳೆದ ವಾರ ಮೆಲ್ಲನೆ ಕೆಲಸ ಮಾಡುವ ಸಂಪು ಹೂಡಿದರು. ಅವರು ೧೦೦ಕ್ಕೆ ೧೫ ರಷ್ಟು ಕೂಲಿ ಹೆಚ್ಚಳ ಬೇಡಿದ್ದರು. ನಾಳೆ ಅಕ್ಟೋಬರದ ವರೆಗೆ ಕೂಲಿ ಏರಿಸುವಂತಿಲ್ಲ. ಎಂದಿತು ರಾಮೇದಿಯರ್ ಸರಕಾರ. ಆಗ ಕೂಲಿಕಾರರು ೧೦೦ಕ್ಕೆ ೩೦ ಹೆಚ್ಚಳ ಬೇಡಿ ಹೊಸ ನೋಟೀಸು ಕೊಟ್ಟರು. ಇಲ್ಲದಿದ್ದರೆ ಮೆಲ್ಲಗೆ ಕೆಲಸ ಮಾಡಿ ಉತ್ಪಾದನೆ ಕಡಿಮೆಯಾಗುವಂತೆ ಮಾಡಬೇಕೆಂದು ಅವರ ಸಂಘ ನಿರ್ಣಯಿಸಿತು. ಪೂರ್ಣ ಸಂಪು ಆಗುವ ಭಯವೂ ಇತ್ತು. ಸಂಪನ್ನು ಕಾಯದೆ ವಿರುದ್ಧ ಮಾಡಿ ಸಂಪುಗಾರರನ್ನು ಬಂಧಿಸಲು ಅಧಿಕಾರ ಕೊಡುವ ಅರ್ಜಿಯನ್ನು ಮುಖ್ಯ ಮಂತ್ರಿ ಹೊರಡಿಸಿದನು. ಇದನ್ನು ಲೆಕ್ಕಿಸದೆ ಕೂಲಿಕಾರರು ಮೆಲ್ಲಗೆ ಸಾಗುವದನ್ನು ಪ್ರಾರಂಭಿಸಿಯೆ ಬಿಟ್ಟಿದ್ದಾರೆ.

ಇದೀಗ ಕಮ್ಯುನಿಸ್ಟರಿಗೂ ಇತರರಿಗೂ ನಡೆದ ಅಧಿಕಾರಾಕ್ರಮಣದ ಜಗ್ಗಾಟದ ಮೊದಲನೆ ಮೆಟ್ಟಲೆಂದು ತೋರುತ್ತದೆ. ಫ್ರಾನ್ಸಿನ ಕೂಲಿಕಾರ ಸಂಘಗಳೆಲ್ಲ ಕಮ್ಯುನಿಸ್ಟರ ಕೈಯಲ್ಲಿವೆ. ಅವರು ಎಂದು ಕೊನೆಯ ಹೋರಾಟಕ್ಕೆ ಸಿದ್ಧರಾಗಿ ಸಾರ್ವತ್ರಿಕ ಸಂಪು ಹೂಡುವರೋ ಗೊತ್ತಿಲ್ಲ.

ಫ್ರಾಂಕೋನ ವಿರುದ್ಧ ಒಳಸಂಚು?

ಸ್ಪೇನದಲ್ಲಿ ಜನರಲ್ ಫ್ರಾಂಕೋನ ವಿರುದ್ಧ ಒಳಸಂಚುಗಳು ನಡೆಯುತ್ತಿರುವದು ಕಳೆದ ವಾರ ಪುನಃ ಬೆಳಕಿಗೆ ಬಂತು. ಬಾರ್ಸಿಲೋನಾ ನಗರದಲ್ಲಿ ಅವನು ಭಾಷಣಮಾಡಬೇಕಾಗಿದ್ದ ಒಂದು ಕಟ್ಟಡದಲ್ಲಿ ಒಂದು ಬಾಂಬು ಸ್ಫೋಟಗೊಂಡಿತು ಈಚೆಗಿನ ಘಟನೆಗಳಿಂದ ಫ್ರಾಂಕೋಗೆ ತನ್ನ ಸ್ಥಿತಿಯ ಮೂಲಭೂತ ದೌರ್ಬಲ್ಯದ ಅರಿವುಂಟಾಗಿರುವಂತೆ ತೋರುತ್ತದೆ. ಸ್ಪೇನಿನಲ್ಲಿ ತನ್ನ ಆ ನಂತರದಲ್ಲಿ ಅರಸೊತ್ತಿಗೆಯನ್ನು ಜಾರಿಗೆ ತರಬೇಕೆಂಬ ರಾಜ್ಯಘಟನೆಯನ್ನು ಸಾರಿದ ನಂತರ ಅವನು ಈಚೆಗೊಂದು ಭಾಷಣದಲ್ಲಿ ಸ್ಥಾನಿಕ ಜನರಿಗೆ ತಾನು ಬೇಡವಾಗಿದ್ದರೆ ನಿವೃತ್ತನಾಗಲು ಸಿದ್ಧನಿದ್ದೇನೆಂದು ಸಾರಿದ್ದನು. ಸ್ಪೇನಿನ ಅರಸೊತ್ತಿಗೆಗೆಳಸುವ ಡಾ. ಜಾನನೂ ಫ್ರಾಂಕೋನ ಬಗ್ಗೆ ಸ್ಪಷ್ಟ ಮೆದುವಾದ ಧೋರಣ ತಳೆದಿದ್ದಾನೆ. ಮೊದಲು ಫ್ರಾಂಕೋ ಹೊರಬಿದ್ದು ಹೋಗಬೇಕೆಂದು ವಾದಿಸುತ್ತಿದ್ದ ಅವನು ಈಗ "ಸ್ಪೇನಿನಲ್ಲಿ ಘಟನಾತ್ಮಕ ರಾಜ್ಯಸತ್ತೆಯನ್ನು ಸ್ಥಾಪಿಸುವದಕ್ಕೆ ಅದು ಅವಶ್ಯವಾದರೆ" ಸಹಕರಿಸಲೊಪ್ಪಿದ್ದಾನೆ ಅದರೆ ಫ್ರಾನ್ಸ—ಇಟಲಿಗಳಲ್ಲಿ ಕಮ್ಯುನಿಸ್ಟರ ಪ್ರಾಬಲ್ಯ ಹೆಚ್ಚಿದಂದಿನಿಂದ ಅಮೇರಿಕನರು ಫ್ರಾಂಕೋನ ಕಡೆಗೆ ಹೆಚ್ಚು ಆದರ ತೋರಿರುವಂತಿದೆ. ಅದರಿಂದಲೇ ಯುಕ್ತರಾಷ್ಟ್ರ ಸಂಘದಲ್ಲಿ ಸ್ಪೇನಿನೊಡನೆ ರಾಜಕೀಯ ಸಂಬಂಧ ಕಡಿದುಕೊಳ್ಳಬೇಕೆಂಬ ನಿರ್ದೇಶ ಸ್ವೀಕೃತವಾಗಿದ್ದರೂ ಫ್ರಾಂಕೋ ಇನ್ನು ಉರುಳಿಲ್ಲ.

ಗ್ರೀಸ—ಆಲ್ಬೇನಿಯಾ ತಂಟೆ

ಕಮ್ಯುನಿಸ್ಟ ಆಲ್ಬೇನಿಯಾ ಮತ್ತು ಪ್ರತಿಗಾಮಿ ಗ್ರೀಸ್ ನಡುವೆ ಹೊಸ ಹೊಸ ತಂಟೆಗಳೇಳುತ್ತಿರುವದನ್ನು ಕಂಡರೆ ಬಾಲ್ಕನ್ ಪ್ರದೇಶವೇ ಮುಂದಿನ ಯುದ್ಧದ ಕಣವಾದೀತೆಂಬ ಸಂಶಯಕ್ಕೆ ಪುಷ್ಟಿದೊರೆಯುತ್ತಿದೆ. ಕಳೆದವಾರ ಆಲ್ಬೇನಿಯಾದ ಮುಖ್ಯ ಮಂತ್ರಿ ಜ. ಹೋಜಾ ಯುಕ್ತರಾಷ್ಟ್ರ ಸಂಘಕ್ಕೆ ತಂತಿ ಕಳಿಸಿದ: ಎರಡು ಗ್ರೀಕ ವಿಮಾನಗಳು ಆಲ್ಬೇನಿಯಾದೊಳಗೆ ನುಗ್ಗಿ ಒಂದು ಹಳ್ಳಿಯ ಮೇಲೆ ಮಶೀನಗನ್ ಹಾರಿಸಿದ್ದರಿಂದ ಅನೇಕರು ಗಾಯಗೊಂಡರು, ಇಬ್ಬರು ಸತ್ತರು—ಎಂದು. ಮರುದಿನವೇ ಹೊರಟಿತು ಗ್ರೀಕ ಮಂತ್ರಿಯ ಹೇಳಿಕೆ: ಇದೆಲ್ಲ ಸುಳ್ಳು. ಬದಲಿಗ್ ಗ್ರೀಸಿಗೆ ಸೇರಿದ ಕೊರ್ಫು ದ್ವೀಪದ ಬಳಿ ಆಲ್ಬೇನಿಯಾದ ಹಡಗು ಸುಳಿಯಿತು. ಕೊರ್ಫು ಕರಾವಳಿ ತೋಫುಗಳು ಗುಂಡು ಹಾರಿಸಿದರೆ ಹಿಂದೆ ಗುಂಡು ಹಾರಿಸಿತು. ಆಲ್ಬೇನಿಯಾದಿಂದ ಗ್ರೀಕ ಗಡಿಯೊಳಗೆ ನುಗ್ಗಿ ಆಲ್ಬೇನಿಯನ್ನರು ಉಪದ್ರವ ಕೊಡುತ್ತಿದ್ದಾರೆ ಎಂದು. ಆಲ್ಬೇನಿಯಾದ ಒಂದಂಶದ ಮೇಲೆ ಗ್ರೀಕದ ಪ್ರಾದೇಶಿಕ ಬೇಡಿಕೆಯುಂಟು. ಈ ವೈಷಮ್ಯವೇ ಈ ತಿಕ್ಕಾಟಗಳಿಗೆ ಕಾರಣವಿದ್ದಿತು.

ಹಿಂದೀ: ದಕ್ಷಿಣ ಆಫ್ರಿಕಾ ಸಂಬಂಧ

ಮುಂದಿನ ಯುಕ್ತರಾಷ್ಟ್ರಾಧಿವೇಶನದ (ಸಪ್ಟೆಂಬರ ೧) ದಿನ ಸಮೀಪಿಸಿದಂತೆ, ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದೀಯರ ವಿಷಯದಲ್ಲಿ ಹಿಂದುಸ್ಥಾನದೊಡನೆ ಒಪ್ಪಂದಕ್ಕೆ ಬರಬೇಕೆಂದು ಜನರಲ್ ಸ್ಮಟ್ಸರಿಗೆ ಆತುರ ಹೆಚ್ಚುತ್ತಿದೆ. ಅದರೆ ಹಿಂದೀಯರಿಗೆ ನ್ಯಾಯ ನೀಯಬೇಕೆಂಬ ಆತುರ ಮಾತ್ರ ಅಷ್ಟಕ್ಕಷ್ಟೆ. ಅವರು ದ. ಆಫ್ರಿಕಾ ಹಿಂದೀಯರಲ್ಲಿ ಒಡಕು ಹುಟ್ಟಿಸಲು ಸಮರ್ಥರಾಗಿದ್ದಾರೆ. "ಮೆದು" ಧೋರಣ ವಹಿಸಬೇಕೆಂದು ಪ್ರತಿಪಾದಿಸುವ ನಾಟಾಳ ಹಿಂದೀ ಸಂಘವೆಂಬ ಹೊಸ ಹಿಂದೀ ಪಕ್ಷವೊಂದು ಶ್ರೀ ಎ. ಐ. ಕಾಜಿಯವರ ನೇತೃತ್ವದಲ್ಲಿ ಹುಟ್ಟಿಕೊಂಡಿದೆ. ಅದರ ಪರವಾಗಿ ಕಳೆದ ವಾರ ಜನರಲ್ ಸ್ಮಟ್ಸರ ಹತ್ತಿರ ಶಿಷ್ಟಮಂಡಲವೊಂದು ಹೋಗಿತ್ತು. ಈ ಭೆಟ್ಟಿಯ ನಂತರ ಜ. ಸ್ಮಟ್ಸರು ಹೊರಡಿಸಿದ ಹೇಳಿಕೆಯೊಂದರಲ್ಲಿ ಹಿಂದುಸ್ಥಾನ ದ. ಆಫ್ರಿಕೆಯೊಡನೆ ಪುನಃ ರಾಯಭಾರಿ ಸಂಬಂಧ ಬೆಳಸಿ ಹಾಯಕಮೀಶನರನ್ನು ಕಳಿಸಬೇಕೆಂದು ಪ್ರತಿಪಾದಿಸಿದರು. ಅದರೆ ಈ ಕವಿಮಾತುಗಳಿಗೆ ಮರುಳಾಗಬಾರದೆಂದು ದ. ಆಫ್ರಿಕೆಯ ಹಿಂದೀ ಸಂಸ್ಥೆಗಳು ಹಿಂದುಸ್ಥಾನ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿವೆ. ಆದುದರಿಂದ ಹೈಕಮೀಶನರರನ್ನು ಹಿಂತೆಗೆದುಕೊಂಡ ಹೊರತು ರಾಯಭಾರಿ ಸಂಬಂಧವನ್ನು ಬೆಳಸಲೊಪ್ಪುವದಿಲ್ಲೆಂದು ತಿಳಿಸಿದೆ. ಮೊದಲು ಉಭಯ ರಾಷ್ಟ್ರಗಳ ದುಂಡುಮೇಜಿನ ಪರಿಷತ್ತು ಕರೆದು ಸೌಹಾರ್ದ ಸ್ಥಾಪನೆಯ ಹಾದಿ ಹುಡುಕುವದು ಸರಿದಾರಿಯೆಂದು ಹಿಂದೀಯರು ವಾದಿಸುತ್ತಾರೆ. ಅದರೆ ಸ್ಮಟ್ಸರು ಇದಕ್ಕೆ ಹಿಂದೆಗೆಯುತ್ತಾರೆ. ಅದರಿಂದ ಅವರಿಗೆ ಒಪ್ಪಂದ ಬೇಕಾಗಿರದೆ ನಾಳೆ ಯುಕ್ತರಾಷ್ಟ್ರ ಸಂಘದಲ್ಲಿ ಹಿಂದೀ ಸರಕಾರದ ತಕರಾರನ್ನು ದೂರಿ ತಳಿತಪ್ಪಿಸಿಕೊಳ್ಳುವದಷ್ಟೆ ಬೇಕಾಗಿದೆಯೆಂದು ಆರೋಪಿಸಲಾಗಿದೆ. ಈ ನಡುವೆ ದ. ಆಫ್ರಿಕಾ ಯುರೋಪಿಯನ್ನರ ಹೃದಯ ಪರಿವರ್ತನೆಯಾಗಿಲ್ಲವೆನ್ನುವದಕ್ಕೆ ಸ್ವಯಂ ಜನರಲ್ ಸ್ಮಟ್ಸರ "ಆಫ್ರಿಕೆಯಲ್ಲಿ ಬಿಳಿ ನಾಗರಿಕತೆಯ ಸಾಮ್ರಾಜ್ಯ"ದ ರಕ್ಷಣೆಯನ್ನು ಕುರಿತು ಭಾಷಣಗಳೂ ಹಿಂದೆ ಸಂರಕ್ಷಣ ಮಂತ್ರಿಯಾಗಿದ್ದ ಆಸ್ವಾಲ್ಡ ಪೈರರು ಬರೆದ ಪುಸ್ತಕದಲ್ಲಿ "ಹಿಂದೀಯರನ್ನೆಲ್ಲ ದ. ಆಫ್ರಿಕೆಯಿಂದ ಹೊರಗಟ್ಟಿದ ಹೊರತು ಸುಖವಿಲ್ಲ" ಎಂಬ ವಾದವೂ ಸಾಕ್ಷಿಯಾಗಿವೆ.

ಆಗ್ನೇಯ ಏಶಿಯಾ

ಇಂಡೋನೇಶಿಯಾದಲ್ಲಿ ಡಚ್ಚರೂ ಇಂಡೋಚೀನದಲ್ಲಿ ಫ್ರೆಂಚರೂ ಕುಸಿಯುತ್ತಿರುವ ಸಾಮ್ರಾಜ್ಯವನ್ನುಳಿಸಿಕೊಳ್ಳಲು ಒಂದೇ ಬಗೆಯ ನೀತಿಯನ್ನನುಸರಿಸುತ್ತಿರುವಂತೆ ತೋರುತ್ತದೆ.

✻ ಇಂಡೋನೇಶಿಯಾದಲ್ಲಿ ಇಂಡೋನೇಶಿಯಾದ ಪ್ರಜಾರಾಜ್ಯದೊಡನೆ ಒಪ್ಪಂದ ಮಾಡಿಕೊಂಡಿದ್ದರೂ ಡಚ್ಚರು ಹಲವಿಧದಿಂದ ಕಾಲು ಕೆದರಿ ಜಗಳ ತೆಗೆಯಲೆಳಸುತ್ತಿದ್ದಾರೆ:

ಪ್ರಜಾರಾಜ್ಯ ಸರಕಾರದ ಪ್ರದೇಶದ ಮೇಲೆ ಡಚ್ ನೌಕಾಪಡೆ ಹೊರಗಿಂದ ದಿಗ್ಬಂಧಿಸಿ ಸಾಮುಗ್ರಿಗಳು ಒಳಹೊರಗೆ ಹೋಗದಂತೆ ನೋಡುತ್ತಿವೆ.

ಇಂಡೋನೇಶಿಯಾದ ವಿದೇಶ ವ್ಯಾಪಾರ, ವಿದೇಶನೀತಿಗಳು ತಮ್ಮ ನೇತೃತ್ವದಲ್ಲೇ ಇರಬೇಕೆಂದು ಹಟಕೊಟ್ಟಿದ್ದಾರೆ.

ಈಚೆಗೆ ಪಶ್ಚಿಮ ಜಾವಾದಲ್ಲಿ ಪ್ರಜಾರಾಜ್ಯದಿಂದ ಭಿನ್ನವಾದ "ಸ್ವತಂತ್ರ" ರಾಜ್ಯವನ್ನು ಸ್ಥಾಪಿಸಬೇಕೆಂದು ಸುಂದಾ ಜನರ ಕೆಲ ಪ್ರತ್ಯೇಕತಾವಾದಿಗಳೆಬ್ಬಿಸಿದ ಹುಯಿಲಿಗೆ ಡಚ್ಚರೇ ಮೂಲ ಕಾರಣವೆಂದು ಭಾವಿಸಲಾಗಿದೆ. ಈ ಪ್ರತ್ಯೇಕತಾವಾದಿ "ಪಾಸೊಂಡನ" ಪಕ್ಷದವರು ಬಾಯಿಟೆನ್ಝೋರ್ಗ್ ನಗರವನ್ನು ಈಗ ಇನ್ನೂ ಅನೇಕ ರೇಲ್ವೆ ಕೇಂದ್ರಗಳನ್ನು ಆಕ್ರಮಿಸಿದ್ದಾರೆ. ಪ್ರಜಾರಾಜ್ಯ ತಮಗೆ "ಸ್ವಾತಂತ್ರ್ಯ" ಕೊಡದಿದ್ದರೆ ಡಚ್ಚರೊಡನೆ ಸಹಕರಿಸುವವಾಗಿ ಈ ಪಕ್ಷ ಮೊದಲೇ ಸಾರಿತ್ತು. ಈ ಪ್ರತ್ಯೇಕತಾ ಚಳವಳಿಯೂ ಪಾಕಿಸ್ತಾನ ಚಳವಳಿಯಂತೆಯೆ ಇದೆ. ಸುಂದಾ ಜನರೂ ಮುಸ್ಲಿಮರೇ ಆಗಿದ್ದರೂ ಅವರು ಪೂರ್ವ ಜಾವಾದ ಮುಸ್ಲಿಮರಷ್ಟು ಹಿಂದೂಪ್ರಭಾವಕ್ಕೊಳಪಡದ "ಅಸ್ಸಲ್" ಮುಸ್ಲಿಮರಾಗಿದ್ದಾರೆ.

✻ ಇಂಡೋಚೀನದಲ್ಲಿ ವಿಯೆಟನಾಮದ ಅಧ್ಯಕ್ಷ ಡಾ. ಹೋ. ಚಿ. ಮಿನ್ಹರೊಡನೆ ಗುಪ್ತವಾಗಿ ನಡೆದ ಸಂಧಾನವನ್ನು ಫ್ರೆಂಚರು ಮುರಿದಿದ್ದಾರೆಂದು ತಿಳಿದು ಬಂದಿದೆ. ವಿಯೆಟನಾಮ ರಾಜ್ಯದ ಅಖಂಡತೆಯನ್ನೊಪ್ಪಿಕೊಳ್ಳಬೇಕೆಂದು ಮಿನ್ಹರ ಹಟ. ಫ್ರೆಂಚರ ಆಶ್ರಯದಲ್ಲಿ ಪದಚ್ಯುತ ಅನ್ನಂ ರಾಜನ ನೇತೃತ್ವದಲ್ಲಿ ಸ್ಥಾಪಿತವಾದ "ರಾಷ್ಟ್ರೀಯ" ಪಕ್ಷದ ಸಹಾಯದಿಂದ ಮಿನ್ಹರ ಪ್ರಾಬಲ್ಯವನ್ನು ಅಳಿಸಲು ಫ್ರೆಂಚರು ಯತ್ನಿಸುತ್ತಿದ್ದಾರೆ. ಕೊಚಿನ್ ಚೀನದಲ್ಲಿ ಪ್ರತ್ಯೇಕ ರಾಜ್ಯ ಸ್ಥಾಪಿಸುವದೇ ಇದರ ಉದ್ದೇಶ. ಇಲ್ಲಿದ್ದ ಫ್ರೆಂಚ ಹಿತಸಂಬಂಧಗಳನ್ನು ಬಿಟ್ಟುಕೊಡಲು ಅವರು ಸಿದ್ಧರಿಲ್ಲ.

ನಾಲ್ಕು ಮಾತು — ರಂಗನಾಥ ದಿವಾಕರ

ಶ್ರೀ ಸಾಬದೆ !

ಕರ್ನಾಟಕದ ರಾಜಕೀಯ ರಂಗದಲ್ಲಿ ಸಾಬದೆ ಯವರ ಕೊಲೆ ಇದು ಮೊದಲನೆ ಅತ್ಯಂತ ಹೀನ ಕಳ್ಳ ಕೊಲೆ. ಇಂಥ ಕೊಲೆಯಲ್ಲಿ ಸಾಯುವವ ನಿಗೆ ಸಮಾಧಾನವಿಲ್ಲ. ಕೊಲ್ಲುವವನ ಪಾಲಿಗೆ ಪೌರುಷವಿಲ್ಲ, ಪುರುಷಾರ್ಥವಿಲ್ಲ, ಶ್ರೇಯವಿಲ್ಲ, ಯಶಸ್ಸಿಲ್ಲ, ಮಾನವಿಲ್ಲ, ಮರ್ಯಾದೆಯಿಲ್ಲ. ಇದ ರಲ್ಲಿ ಕೊಲೆಗಡುಕನು ಅತಿ ಪಾಪಿ, ಅಪರಾಧಿ ಎಂಬುದಂತೂ ಸ್ಪಷ್ಟ. ಅದೇ ಮೇರೆಗೆ ಇರು ಸಮಾಜದಲ್ಲಿಯ ಅತ್ಯಂತ ಕೊಳಕು ದ್ಯೋತ ಕವೂ ಸ್ಪಷ್ಟ. ಹಲವರ ದವೂ ಇಂಥ ಕೊಲೆಗಡುಕ ರಿಗೆ ಸಹಾಯ ಮಾಡುವವನು, ಶಾಬಾಶ ಎನ್ನು ವವರು ಸಮಾಜದಲ್ಲಿ ಇದ್ದುದರಿಂದಲೆ ಅವರ ಅಸ್ತಿತ್ವವು ಶಕ್ಯವಾಗಿದೆ. ಇದು ಯೋಗ್ಯಮಾರ್ಗ ವಲ್ಲ, ಹಿತಕಾರಿ ಮಾರ್ಗವಲ್ಲ, ಯಶಸ್ಸು ತಂದು ಕೊಡುವ ಮಾರ್ಗವಲ್ಲ, ಧೈರ್ಯದ ಇಲ್ಲವೆ ಗಂಡು ಸುತನದ ಮಾರ್ಗವಲ್ಲ. ಇದು ಹೇಡಿಗಳ ಮಾರ್ಗ, ಸ್ವೈರಾಗದವರ ಮಾರ್ಗ, ನೀಚರ ಮಾರ್ಗ. ಇದ ರಲ್ಲಿ ಗುಂಡಿಗೆಯ ಗುಣಾಂಶವು ಸಹ ಇಲ್ಲ. ಕೇವಲ ಹೀನ ದುರ್ಗುಣಗಳ ಮುಟ್ಟಿಯದು. ಎದುರು ಬದುರು ನಿಂತು ಜಗಳಾಡುವದು, ಹೋರಾಡುವದು, ವಾದಿಸುವದು, ಅವ್ಹಾನಿಸಿ ಯುದ್ಧ ಹೂಡುವದು ಇವು ಕ್ಷತ್ರಿಯ ಲಕ್ಷಣ ಗಳೆಂದೆನಿಸಬಹುದು. ಆದರೆ ಕಳ್ಳಕೊಲೆಗೆ ಯಾವ ಧರ್ಮದಲ್ಲಿಯೂ ಯಾವ ನೀತಿ ಶಾಸ್ತ್ರ ದಲ್ಲಿಯೂ ಎಡೆಯಿಲ್ಲ. ಇಂಥ ಅಪರಾಧವನ್ನು ಪೋಲೀಸರು ಪತ್ತೆ ಹಚ್ಚಿ ನ್ಯಾಯಶುದ್ಧ ಶಿಕ್ಷೆಯು ಅಪರಾಧಿಗೆ ಆಗುವಂತೆ ಮಾಡಲಿಕ್ಕೇ ಬೇಕು. ಇದು ಅತ್ಯಂತ ಹೀನಕೃತ್ಯವೆಂದು ಸಮಾಜವು ಜಾಹೀರ ರೀತಿಯಿಂದ ಇದನ್ನು ಆಗಸೀ ಬಾಗಿಲಿಗೆ ಕಟ್ಟಲಿಕ್ಕೆ ಬೇಕು. ಇಂಥ ಕೃತಿ ಮಾಡುವವನಿಗೆ ಒಬ್ಬನೂ ಸ್ನೇಹಿತನು ಸಿಗಲಾರನು ಎಂಬುದನ್ನು ಸಮಾಜವು ಸಿದ್ಧ ಮಾಡಿ ಕೊಡಬೇಕು. ರಾಜಕೀಯ ರಂಗದಲ್ಲಿ ಕಾರ್ಯ ಮಾಡುವವರು ಬೆದರದೆ ಬೆದರದೆ ಇಂಥ ಕೃತಿಗಳಿಗೆ ಸೊಪ್ಪುಹಾಕದೆ ತಮ್ಮ ಕರ್ತವ್ಯ ಗಳನ್ನು ಮಾಡುತ್ತ ಹೋಗಬೇಕು. ಇಂಥ ಕೃತ್ಯಕ್ಕೆ ಇವೇ ಉಪಾಯಗಳು.

ಜೂನ ೩

ಈ ಸೋಮವಾರ ಬಹಳ ದೊಡ್ಡ ಸಂಗತಿ ಆಗುವದಿದೆ ಎಂದು ನಿರೀಕ್ಷಿಸುತ್ತಿದ್ದೇವೆ ನಾವೆ ಲ್ಲರು. ಸರಿ. ಅದು ಸಂಗತಿಯೇನೋ ದೊಡ್ಡ ದು. ಸತ್ತಾಂತರ, ಅಧಿಕಾರದ ಹಸ್ತಾಂತರ, ಬ್ರಿಟಿಶರ ದೇಶಾಂತರ, ಇವುಗಳ ಕ್ರಮದ ನಿರ್ಣಯ ಇದು ಸಣ್ಣ ಸಂಗತಿಯಲ್ಲ. ಆದರೆ ಅದು ನಮ್ಮ ಮೇಲೆ ಬಹಳ ದೊಡ್ಡ ಭಾರವನ್ನು ಹಾಕಲಿದೆ ಎಂಬುದನ್ನು ನಾವು ಲಕ್ಷ್ಯದಲ್ಲಿಡ ಬೇಕು. ಮೇಲಾಗಿ ಈ ಸತ್ತಾಂತರವು ಎಷ್ಟರ ಮಟ್ಟಿಗೆ ಆಗುವದು, ಯಾವ ಬಗೆಯಿಂದ ಆಗು ವದು ಇದು ಮಹತ್ವದ ಮಾತಾಗಿದೆ. ಅದು ಜೂನ ೩ನೆ ದಿನಾಂಕದಲ್ಲಿಯೆ ಗೊತ್ತಾಗಬಲ್ಲದು. ಈ ವಿಷಯದಲ್ಲಿ, ಈಗಿನ ಸಂದರ್ಭದಲ್ಲಿ ಜನಾಬ ಜಿನ್ನಾಸಾಹೇಬರು ಜಾತೀಯ ಭಾವನೆಯಿಂದ ಪ್ರೇರಿತರಾಗಿ ಹಿಂದುಸ್ತಾನದ ರಾಷ್ಟ್ರೀಯ ಹಿತಕ್ಕೆ ಪೆಟ್ಟು ಕೊಡುವಂಥ ಆಚರಣೆ ಮಾಡುತಿ ರುವದು ನಮ್ಮ ದುರ್ದೈವದ ಪರಮಾವಧಿಯೆಂ ದೇ ಹೇಳಬೇಕಾಗುವದು. ಅವರ ಬೇಡಿಕೆ ಗಳಿಗೆ ಇಂದು ಮೊದಲುಗಳಿಲ್ಲದಂತಾಗಿದೆ. ನಡು ಮಾರ್ಗದ ಅವರ ಹೊಸ ಬೇಡಿಕೆ ಎಲ್ಲರನ್ನೂ ಬೆರಗುಗೊಳಿಸಿದೆ. ಹೀಗಿಲ್ಲ ಇರುವುದರಿಂದ ಜೂನ ೩ಕ್ಕೆ ಆಗತಕ್ಕ ವಿಚಾರವಿನಿಮಯವು ಕೊನೆಯವಾಗುವುದೋ ಎಂಬ ಸಂಶಯವು ನನಗೆ ಉಂಟಾಗಿದೆ. ಆ ಮಾತಿನಲ್ಲಿ ಮತ್ತೆ ಹೊಸ ಮಾತುಗಳು ಬಂದು ಹೊಸ ತೊಡಕುಗ ಳಿಗೆ ಅಸ್ಪದವಾಗುವದೋ ಎಂಬ ಸಂದೇಹ ತಲೆ ದೋರುತಿದೆ. ಇಂಥ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಇದು ದೊಡ್ಡ ಪ್ರಶ್ನೆ. ಯಾದವೀ ಕಲಹವನ್ನು ತಪ್ಪಿಸಬೇಕೆಂದು ಎಲ್ಲರೂ ಪ್ರಯತ್ನ ಪಟ್ಟರು. ಆದರೆ ಅತ್ಯಂತ ವಿಕೃತ ಸ್ವರೂಪದಲ್ಲಿ ಅದು ತನ್ನ ಅನಿತಾರವನ್ನು ತೋರಿಸಿಯೇ ಬಿಟ್ಟಿತು. ಅದು ಪಟ್ಟಲಿಕ್ಕೇ ಇಲ್ಲ ಎಂದು ಹೇಳುವ ಧೈರ್ಯವು ಈ ಹೊತ್ತು ಯಾರಲ್ಲಿಯೂ ಉಳಿದಿಲ್ಲ. ರಾಜಕೀಯ ರಂಗ ದಲ್ಲಿ ಈ ಬಗೆಯ ಹಿಂಸೆಗೆ ಅಸ್ಪದವಿರಕೂಡದು. ಎಂದು ಗಾಂಧೀ ಜಿನ್ನಾರವರು ತಮ್ಮ ಸಹಿಯುಕ್ತ ಪ್ರಕಟನೆ ತೆಗೆದರೂ ಇನ್ನೂ ಕೊಲೆ ಸುಲಿಗೆಗಳು ಯಥಾಪ್ರಕಾರ ನಡೆದಿವೆ ! ಅಂದ ಬಳಿಕ ಜೂನ ೨ ನೆ ತಾರೀಖಿನ ದಿವಸ ಮೌಂಟಬೇಟನ್ನರೊಡನೆ ಆಗುವ ನಮ್ಮ ಮುಖಂಡರ ಮನೋಮಂಥನ ದಿಂದ ಅಮೃತ ಕಲಶವು ಮೇಲಕ್ಕೆ ಬರುವದೋ ಹಾಲಾಹಲ ವಿಷವು ಹೊರಹೊಮ್ಮುವದೊ ಹೇಳಲಿಕ್ಕಾಗದು. ಆದರೆ ನಾವು ಹಾಲಾಹಲ ವಿಷ ಬಂದರೆ ಏನು ಮಾಡಬೇಕೆಂಬುದನ್ನೇ ಯೋಚಿಸುವದು ಯೋಗ್ಯವು. ಯಾರ ಮೇಲೂ ಸರಕಾರದ ಮೇಲೆ ಸಹ—ಅವಲಂಬಿಸಿರದೆ ಆತ್ಮಸಂರಕ್ಷಣೆಯ ದಾರಿಯನ್ನು ಅಲ್ಪ ಸಂಖ್ಯಾ ಕರೆಲ್ಲರೂ ಕಂಡುಕೊಳ್ಳಬೇಕೆಂಬ ದೀಜಮಂತ್ರ ವನ್ನು ಸರದಾರ ಪಟೇಲರು ಉದ್ಘೋಷಿಸಿರು ವರು. ಇದರ ಸರಲ ಅರ್ಥವೇನಂದರೆ ತನ್ನ ಆತ್ಮಸಂರಕ್ಷಣೆಯ ಹೊಣೆಯನ್ನು ಯಾರೂ ಅನ್ಯರ ಮೇಲೆ ಅಥವಾ ಸರಕಾರದ ಮೇಲೆ ಹಾಕಬಾರದು. ಒಂದು ಬಗೆಯ ಅರಾಜಕತೆ ಉಂಟಾದಲ್ಲಿ ಅದೊಂದೇ ಉಪಾಯವೆಂಬುದನ್ನು ಎಲ್ಲರೂ ಬಲ್ಲರು. ಆದರೆ ಅರಾಜಕತೆಯಾಗ ಬಹುದು ಎಂಬುದನ್ನು ಕಂಡುಕೊಳ್ಳುವಷ್ಟು ನಾವು ದಕ್ಷಿಣದವರು ಇನ್ನೂ ಕಲ್ಪನಾಶಕ್ತಿಯು ಳ್ಳವರಾಗಿಲ್ಲ. ಉತ್ತರದಲ್ಲಿ ಹಲವು ಭಾಗಗಳಲ್ಲಿ ಆ ಪರಿಸ್ಥಿತಿ ಈ ಹೊತ್ತು ಇದೆ. ಆದುದರಿಂದ ಎಲ್ಲರೂ ಎಚ್ಚರ ಇಟ್ಟು ಯೋಗ್ಯ ಮಾನಸಿಕ ಸಿದ್ಧತೆ ಮಾಡುವದು ಒಳಿತು. ಅಮೃತ ಬಂದರೆ ಸ್ವಾಗತಿಸುವ ಹಾಲಾಹಲ ಹೊರಟರೆ ಎದುರಿ ಸುವ ಸಿದ್ಧತೆ ನಮ್ಮಲ್ಲಿ ಬೇಕು ಎಂಬುದು ಸಿದ್ಧಾಂತ.

ಕಾಂಗ್ರೆಸ ಸೇವಾದಲ

ಈ ಹೊಸ ಹೆಸರಿನಲ್ಲಿ ಹಿಂದುಸ್ತಾನದಲ್ಲಿ ಸೇವಾ ದಲದ ಪುನರ್ಘಟನೆ ನಡೆದಿದೆ. ಹಲವು ಪ್ರಾಂತ ಗಳಲ್ಲಿ ಸೇವಾದಲದ ಚಟುವಟಿಕೆ ಒಂದಿ ಲ್ಲೊಂದು ಸ್ವರೂಪದಲ್ಲಿ ನಡೆದೇ ಇತ್ತು. ಅಂಥ ಪ್ರಾಂತಗಳಲ್ಲಿ ಕರ್ನಾಟಕವೂ ಒಂದು. ಕರ್ನಾ ಟಕದ ತರುಣರಿಗೆ ಇಂಥ ಚಟುವಟಿಕೆ ಇಷ್ಟವಾ ದುದು ಎಂಬುದು ಇದರಿಂದ ಸಿದ್ಧವಾಗುವದು. ಈಗ ಕಾಂಗ್ರೆಸ್ ವರ್ಕಿಂಗ್ ಕಮೀಟಿಯವರು ಒಬ್ಬ ಅಧಿಕಾರಿಯ ಮೂಲಕ ಈ ಚಟುವಟಿಕೆ ಯನ್ನು ಎಲ್ಲ ಪ್ರಾಂತಗಳಲ್ಲಿಯೂ ಸಂಘಟಿಸ ಬೇಕೆಂದಿದ್ದಾರೆ. ಅದಕ್ಕಾಗಿ ಒಂದು ಸೇವಾದಲ ಘಟನೆಯನ್ನಾದರೂ ನಿರ್ಮಿಸಿ ಅದರಂತೆ ಈಗ ಕೆಲಸವು ನಡೆದಿರುವದು. ಬ್ರಿಟಿಶರೊಡನೆ ರಾಜ ಕೀಯ ಹೋರಾಟವೆಂಬುದು ಮುಗಿಯಿತು. ಇನ್ನು ಕಾಂಗ್ರೆಸ್ಸೂ ಬೇಡ ಸೇವಾದಲವೂ ಬೇಡ. ಎಂದು ಹಲವು ದೊಡ್ಡ ದೊಡ್ಡವರು ಹೇಳ ತೊಡಗಿರುವರು. ಹಾಗನ್ನುವದು ತಪ್ಪು ಎಂದ್ಮ ನನ್ನ ನಮ್ರವಾದ ಅಭಿಪ್ರಾಯವು. ಕಾಂಗ್ರೆಸ್ಸೂ ಬೇಕು, ಸೇವಾದಲವೂ ಬೇಕು. ಕಾಂಗ್ರೆಸ್ಸಿನ ಬಗ್ಗೆ ಮತ್ತೆ ಬರೆಯುವ. ಇಲ್ಲಿ ಸೇವಾದಲವಷ್ಟೆ ಪ್ರಸ್ತುತವಿರುವದು. ರಾಜಕೀಯ ಸ್ವಾತಂತ್ರ್ಯವು ಸ್ವರಾಜ್ಯಸಂರಕ್ಷಣಕ್ಕೆ ಸಂಘಟಿತವಾದ, ಶಿಸ್ತಿ ನಿಂದ ನಡೆಯುವ, ವಿಶಿಷ್ಟಬಗೆಯ ಶಿಕ್ಷಣ ಪಡೆದ ತರುಣ ತರುಣಿಯರ ಹಾಗೂ ಸೇವಾ ಭಾವದ ಪ್ರೇರಣೆಯಿಂದ ಪ್ರೇರಿತರಾದ ಸೇವಕರ ಅವಶ್ಯಕತೆ ಉಳಿಯಲಿಲ್ಲ ಎಂದು ಹೇಳುವದು ಬಹಳ ತಪ್ಪು. ಸ್ವಇಚ್ಛೆಯಿಂದ, ಹಣದ ಆಶೆ ಇಲ್ಲದೆ, ಸಮಾಜದ ಸೇವೆ ಮಾಡುವ ಸದ್ಬುದ್ಧಿ ಯಾವ ಸಮಾಜದಲ್ಲಿ ಇಲ್ಲವೋ ಆ ಸಮಾಜವು ಸತ್ತಂತೆಯೆ ಸ್ಪಷ್ಟ. ವಿಶೇಷತಃ ಈ ವಿಶಾಲವಾದ ಹಿಂದುಸ್ತಾನದಲ್ಲಿಯ ಅನೇಕಾನೇಕ ಪ್ರಶ್ನೆಗ ಳನ್ನು ಬಿಡಿಸಿ ನವಸಮಾಜವನ್ನು ನಿರ್ಮಾಣ ಮಾಡಬೇಕಾದರೆ ಲಕ್ಷಾಂತರ ಸ್ವಯಂಸೇವಕರು ಬೇಕು. ಅವರು ಸೇವಾದಲದಂಥ ಸಂಸ್ಥೆಯ ಮುಖಾಂತರವೆ ಸಿದ್ಧರಾಗಬಲ್ಲರು. ಆದುದರಿಂದ ರಾಜಕೀಯ ಸಾತಂತ್ರ್ಯದ ಧ್ಯೇಯವು ಕೈಗೂ ಡಿದ ಬಳಿಕ ಹಿಂದುಸ್ತಾನದಲ್ಲಿಯ ಬಡತನ ಹಾಗೂ ಆರ್ಥಿಕ ವಿಷಮತೆ, ಅಜ್ಞಾನ ಹಾಗೂ ನಿರಕ್ಷರತೆ, ಅನಾರೋಗ್ಯ ಹಾಗೂ ದುರ್ಬಲತೆ, ಇತ್ಯಾದಿಗಳನ್ನು ಹೋಗಲಾಡಿಸುವ ಉದಾತ್ತ ಧ್ಯೇಯವನ್ನಿಟ್ಟುಕೊಂಡು ಪ್ರೀತಿಯಿಂದ ದುಡಿ ಯಲು ಸಿದ್ಧವಿದ್ದ ಲಕ್ಷಾಂತರ ಜನರು ಹಿಂದು ಸ್ತಾನಕ್ಕೆ ಬೇಕು. ಅಂಥವರ ತರಬೇತಿಗಾಗಿ ಈ ಸೇವಾದಲವು ಬದ್ಧಕಂಕಣವಾಗುವದು ಅವ ಶ್ಯವು. ಕೇವಲ ಡ್ರಿಲ್ಲು, ಪರೇಡು, ಸಮವಸ್ತ್ರ, ನಮಸ್ತೇ, ಧುಂಡಾವಂದನ ಇಷ್ಟಕ್ಕೆಯೇ ಸೇವಾದಲದ ಕಾರ್ಯಕ್ರಮವು ಮುಕ್ತವಾಗು ತ್ತಿದ್ದರೆ, ಅದು ಬಾಳಿಗೆ ಬಾರದು. ಆದರೆ ನಿಃಸ್ವಾರ್ಥ ಸಮಾಜಸೇವೆಯ ಭಾವನೆಯಿಂದ ಪ್ರೇರಿತರಾಗಿ ಈ ಎಲ್ಲವುಗಳನ್ನು ಕೇವಲ ಸೇವಾ ಶಿಕ್ಷಣದ ಒಂದು ಭಾಗವೆಂದು ಶಿಸ್ತಿನ ಕ್ರಮಕ್ಕೆ ಪೋಷಕವೆಂದು ತರುಣರು ಕಲಿಯುತಿ ದ್ದರೆ, ಅದು ಅವಶ್ಯ ಬೇಕಾದ ವಿಷಯ ವೆ ಎಲ್ಲ ಮಾತುಗಳನ್ನು ನಾವು ಸ್ಪಷ್ಟವಾಗಿ ಲಕ್ಷದಲ್ಲಿಟ್ಟುಕೊಂಡು ನವಯುಗಕ್ಕೆ ತಕ್ಕ ತರು ಣರ ತರಬೇತಿಯೆ ಮುಖ್ಯ ಧ್ಯೇಯವೆಂದು ತಿಳಿದು ನಾವು ಮುಂದೆ ಸಾಗುವದು ಹಿತವು.

ರಾಷ್ಟ್ರೀಯ ಮಜೂರ ಕಾಂಗ್ರೆಸ

ಈ ಹೊಸ ಕೂಲಿಕಾರ ಸಂಸ್ಥೆಯ ಕರ್ನಾಟಕ ಶಾಖೆ ಮೊನ್ನೆ ೨೦—೫—೪೭ ನೆ ದಿನ ಹುಬ್ಬಳ್ಳಿ ಯಲ್ಲಿ ಕವಾಗಿ ಸ್ಥಾಪಿತವಾಯಿತಷ್ಟೆ. ಈ ಶಾಖೆಗೆ ಅಧ್ಯಕ್ಷರಾಗಿ ಸುಸಿತ ರಾಷ್ಟ್ರಸೇವಕರಾದ ಶ್ರೀ ಎಸ್. ನಿಜಲಿಂಗಪ್ಪನವರು ದೊರೆತುದು ಬಹಳ ಶುಭ ಸೂಚಕವು. ಅವರ ನೇತೃತ್ವದಲ್ಲಿ ಈ ಶಾಖೆಯು ದಿನೇ ದಿನೇ ಬಲಗೊಳ್ಳುತ್ತ ನಡೆ ಯುವದೆಂದು ಭರವಸೆ ಇಡಲು ಯಾವ ಅಡ್ಡಿ ಯೂ ಇಲ್ಲ. ಕರ್ನಾಟಕದಲ್ಲಿ ಉದ್ಯೋಗೀಕರ ಣವು ಹೆಚ್ಚು ಆಗದೆ ಹೋಗಿದ್ದರಿಂದ ಗಿರಣೀ ಕೂಲಿಕಾರರೆಂಬುವವರು ಹೆಚ್ಚು ಇಲ್ಲ ಎಂಬ ಮಾತು ನಿಜ. ಆದರೆ ಮೈಸೂರ ಸಂಸ್ಥಾನದಲ್ಲಿ ಚಿನ್ನದ ಗಣಿಯಲ್ಲಿ ಅದೇ ರೀತಿ ಬೆಂಗ ಳೂರು,ಭದ್ರಾವತಿಗಳಲ್ಲಿರುವ ಕಾರಖಾನೆಗಳಲ್ಲಿ, ಹುಬ್ಬಳ್ಳಿ, ಗೋಕಾಕಗಳಲ್ಲಿ ಸಾವಿರಾರು ಕೂಲಿ ಕಾರರಿರುವರು. ಇವರೆಲ್ಲರನ್ನು ಯೋಗ್ಯವಾದ, ಸಮಾಜ ಹಿತವನ್ನು ಸಾಧಿಸುವ ರೀತಿಯಿಂದ ಸಂಘಟಿಸುವ ಕೆಲಸವು ಬಹಳ ದೊಡ್ಡದು ಇದ ಲ್ಲದೆ ಹಳ್ಳಿಗಳಲ್ಲಿರುವ ಲಕ್ಷಾಂತರ ಕೂಲಿಕಾರ ರನ್ನು (ಒಕ್ಕಲತನದಲ್ಲಿ ತೊಡಗಿದ ಕೂಲಿಕಾ ರರು) ಸಂಘಟಿಸುವ ಕೆಲಸವು ಕೂಡ ಬಹಳ ದೊಡ್ಡದಿದೆ. ಇದೇ ಜೂನ ೧ ನೆ ತಾರೀಖಿನ ದಿವಸ ಬೆಂಗಳೂರಲ್ಲಿ ಮೈಸೂರ ಸಂಸ್ಥಾನದ ಕೂಲಿಕಾರ ಕಾರ್ಯಕರ್ತರು ಸೇರತಕ್ಕವರಿರು ವರು. ಅದೇ ರೀತಿ ಕರ್ನಾಟಕ ಶಾಖಾ ಮಂಡ ಲದ ಸಭೆಯು ಜೂನ ೩ಕ್ಕೆ ಹುಬ್ಬಳ್ಳಿಯಲ್ಲಿ ಸೇರತಕ್ಕದ್ದಿರುವದು. ಈ ರೀತಿ ಮಜೂರ ಮಂಡಲದ ಪರವಾಗಿ ಹೊಸ ಚಟುವಟಿಕೆಗಳು ಪ್ರಾರಂಭವಾದುದು ಅದರ ಜೀವಂತತನದ ಲಕ್ಷ ಣವಿರುವದು. ಕೂಲಿಕಾರರ ನಿಜವಾದ ಹಿತ ವನ್ನು ಬಯಸುವವರೆಲ್ಲರೂ ಈ ಚಟುವಟಿಕೆಗ ಳಲ್ಲಿ ಭಾಗ ವಹಿಸಿ ಶೋಷಣೆಯಿಲ್ಲದ ಹೊಸ ಸಮಾಜ ರಚನೆಯ ಮಹಾಕಾರ್ಯದಲ್ಲಿ ಭಾಗ ವಹಿಸುವರೆಂದು ನಂಬಿದ್ದೇನೆ.

ಭಾರತ ಸಯಾಮ ಸಾಂಸ್ಕೃತಿಕ ಸಂಬಂಧ

ಹಿಂದುಸ್ತಾನದಿಂದ ದೊರೆತ ದಿವ್ಯಪ್ರಕಾಶ

— ಪಿ. ಎ. ರಾಜಧಾನಿಂದ

'ಸಯಾಮ' ಅಥವಾ 'ಥೈ'ಗಳಾದ ನಾವು ಪರಸ್ಪರರನ್ನು ಸ್ವಾಗತಿಸುವಾಗ 'ಸ್ವದಿ' ಎಂದು ಹೇಳುವೆವು. ಸಂಸ್ಕೃತದ 'ಸ್ವಸ್ತಿ'ಯ ಸಯಾಮಿ ರೂಪವಾದ ಈ ಶಬ್ದವನ್ನು ನಾವು ಸಾಮಾನ್ಯವಾಗಿ ಮಾತನ್ನು ಪ್ರಾರಂಭಿಸುವಾ ಗಲೂ ಮುಗಿಸುವಾಗಲೂ ಬಳಸುತ್ತೇವೆ. ಹೀಗೆ ಅನೇಕ ಹಿಂದೀ ಮತ್ತು ಸಯಾಮಿ ಶಬ್ದಗಳು ಒಂದಕ್ಕೊಂದು ಸಂಬಂಧಿಸಿವೆ.

ಸಯಾಮದಲ್ಲಿ ಭಾರತೀಯ ಸಾಹಿತ್ಯ

ಭಾಷೆಯಲ್ಲಲ್ಲದೆ ಸಂಸ್ಕೃತಿಯಲ್ಲೂ ನಮ್ಮಲ್ಲಿ ಪರಸ್ಪರ ಸಂಬಂಧವಿರುವುದು ತಿಳಿದು ಬರುತ್ತದೆ. ಸಾಹಿತ್ಯದಲ್ಲಿ ರಾಮಾಯಣವೊಂದು ಮನೆಮಾತಾ ಗಿದೆ! ಸಯಾಮಿನ ಅಬಾಲವೃದ್ಧರೆಲ್ಲ ಅದರ ಕತೆಯನ್ನು ಬಲ್ಲರು. ನಾವು ಅದನ್ನು ರಾಮ ಕೀರ್ತಿ ಎಂದು ಕರೆಯುತ್ತೇವೆ. ಅದು ಸಾಮಾ ನ್ಯವಾಗಿ ವಾಲ್ಮೀಕಿ ರಾಮಾಯಣದ ಕತೆಗೆ ಹೊಂದಿಕೆಯಾಗಿದೆ. ಇದನ್ನು ಕೈವಲ್ಯವನ್ನು ಸೇರಿದ ಸ್ವಾಮಿ ಸತ್ಯಾನಂದರ ಭಾಷಾಂತರವ ನ್ನೋದುವುದರಿಂದ ನೀವು ತಿಳಿಯಬಹುದು. ಇದ ಲ್ಲದೆ ಮಹಾಭಾರತ, ಶಾಕುಂತಲ, ಮತ್ತು ಅನೇಕ ಸಂಸ್ಕೃತ ಪಾಲೀಗ್ರಂಥಗಳು ನಮಗೆ ಪರಿಚಯವಾಗಿವೆ. ಕಡೆಯದಾಗಿ ಶ್ರೀ ರವೀಂ ದ್ರನಾಥ ಠಾಕೂರರ ಸಾಹಿತ್ಯವು ನಮ್ಮಲ್ಲಿಯ ವಿದ್ಯಾವಂತ ತರುಣ ಜನರಲ್ಲಿ ಬಹಳವಾಗಿ ಮೆಚ್ಚಿಗೆಗೆ ಪಾತ್ರವಾಗಿದೆಯೆಂದುಹೇಳಬಹುದು. ಮೊನ್ನೆ ದಿಲ್ಲಿಯಲ್ಲಿ ಪ್ರದರ್ಶಿಸಲ್ಪಟ್ಟ 'ಚಿತ್ರಾಂ ಗದೆ'ಯೆಂಬ ನಾಟಕವನ್ನು ಸಯಾಮಿ ಭಾಷೆಗೆ ಭಾಷಾಂತರಿಸಲಾಗಿದೆ. ಮಹಾತ್ಮಾ ಗಾಂಧಿ ಮತ್ತು ಗುರುನಾನಕರ ಜೀವನ ಚರಿತ್ರೆಗಳನ್ನು ಸ್ವಾಮಿ ಸತ್ಯಾನಂದ ಪುರಿಯವರು ಸಯಾಮಿ ಭಾಷೆಯಲ್ಲಿ ಬರೆದಿದ್ದಾರೆ. ಬಾಂಕಾಕಿನ ಥೈ–ಭಾ ರತ ಸಾಂಸ್ಕೃತಿಕ ಕೇಂದ್ರದ ಪ್ರೋತ್ಸಾಹದಿಂದ ಪ್ರಸಿದ್ಧ ಸಯಾಮಿಯೊಬ್ಬನು ಇತ್ತೀಚೆಗೆ ಪಂ. ಜವಾಹರಲಾಲರ ಆತ್ಮ ಚರಿತ್ರೆಯನ್ನು ಸಯಾಮಿ ನುಡಿಗೆ ಅನುವಾದಿಸಿದ್ದಾನೆ. ವಿಚಾ ರಿಸಿ ನೋಡಿದರೆ ಪರಂಪರಾಗತವಾದ ಸಯಾಮಿ ಸಾಹಿತ್ಯವು ಮೂಲತಃ ಭಾರತೀಯವೇ ಆಗಿದೆ; ಮತ್ತು ಭಾರತದ ಬೌದ್ಧಪಾಲಿ ಮತ್ತು ಸಂಸ್ಕೃತ ಸಾಹಿತ್ಯಗಳಿಂದಲೆ ಹುಟ್ಟಿದ್ದು ಎಂದು ಹೇಳಬ ಹುದು.

ಭಾರತೀಯ ಶಿಲ್ಪಕಲೆಯ ಕುರುಹುಗಳು

ಇನ್ನು ನಾವು ಸಯಾಮಿನ ಕಲಾಮಯ ಸೌಧ ಗಳತ್ತ ಹೊರಳಿದರೆ ಅವು ಭಾರತದ ಕಟ್ಟಡಗ ಳಿಗಿಂತ ತೀರಾ ಭಿನ್ನವಾಗಿವೆಯೆಂಬುದು ಕಂಡು ಬರದಿರದು. ಕಟ್ಟಲು ಬಳಸಿದ ಸಾಮಗ್ರಿಗಳಲ್ಲಿ ಯೇ ಮೂಲಭೂತವಾದ ವ್ಯತ್ಯಾಸವಿದೆ; ಅದ ಲ್ಲದೆ ಥೈ ಕುಲದ ವಿಶಿಷ್ಟ ಸಂಸ್ಕೃತಿಯ ಲಕ್ಷಣ ಗಳೂ ಆ ಭೇದಕ್ಕೆ ಕಾರಣವಾಗಿವೆ. ಆದರೆ ಸೂಕ್ಷ್ಮವಾಗಿ ಪರಾಮರ್ಶಿಸಿ ನೋಡಿದರೆ ಬಹುಪಕ್ಷ ಎಲ್ಲಾ ಸಯಾಮಿ ಕಟ್ಟಡಗಳಲ್ಲೂ ಭಾರತೀಯ ಶಿಲ್ಪಕಲೆಯ ಲಕ್ಷಣಗಳು ಕಾಣಸಿಗುತ್ತವ ಎಂಬುದು ಸ್ಪಷ್ಟವಾಗುತ್ತದೆ. ನಿಮ್ಮ ಶಿಖರ, ಅಮಲಕ ಮಂಡಪ, ವಿಮಾನ, ಮಂದಿರ ಮುಂತಾದ ಹಲವು ಶಬ್ದಗಳು ಸಯಾಮಿಯಲ್ಲಿ ಬಳಕೆಯಲ್ಲಿವೆ. ನಾನು ಬರಿದೆ ಕಲೆಗೆ ಸಂಬಂಧಿಸಿದ ಶಾಸ್ತ್ರವಿಚಾರವನ್ನು ಹೇಳುತ್ತ ನಿಮ್ಮನ್ನು ಬೇಸರ ಗೊಳಿಸುವದಿಲ್ಲ.

ಸಯಾಮಕ್ಕೆ ಭಾರತವಿತ್ತ ಬೆಳಕು

ಸತ್ಯ ಸೌಂದರ್ಯದ ಜೀವಂತ ಹಿಂದುಸ್ತಾನ ವನ್ನು ನೋಡಲು ಬಂದ ನಮಗೆ ಹಿಂದುಸ್ತಾನವು ಒಂದರಲ್ಲಿ "ನೂರೊಂದು" ಎಂದು ತೋರಿತು. ಹೊಸದಕ್ಕಿಂತ ಭಾರತದ ಶುದ್ಧರೂಪದ ಹಳೆಯ ಪರಂಪರಾಗತ ಸಂಸ್ಕೃತಿಗಳೇ ನಮಗೆ ಹೆಚ್ಚು ಸಂತೋಷವನು ಂಟುಮಾಡಿದವು. ಏಕೆಂದರೆ, ಅವು ಅತಿ ಪ್ರಾಚೀನವೆನಿಸುವ ಸುಮಾರು ೨ಸಾವಿ ರ ವರುಷಗಳ ಹಿಂದಿನ ನಾಗರಿಕತೆಯ ದರ್ಶನ ವನ್ನು ಮಾಡಿಕೊಡುತ್ತೇವೆ. ಈಗ ಇಂಡೋ ಚೀನ ಪರ್ಯಾಯದ್ವೀಪವೆಂದು ಕರೆಯಲ್ಪ ಡುವ "ಸುವರ್ಣ ಭೂಮಿ"ಗೆ ಇಲ್ಲಿಂದಲೇ ಹೊಟ್ಟ ಮೊದಲಿನ ಬೌದ್ಧ ಭಿಕ್ಷುವು ಬಹುಜನರಿಗೆ ಆಪ್ಯಾಯಮಾನವಾದ ಶಾಂತಿ ಸಂದೇಶವನ್ನೂ ಬೌದ್ಧ ಧರ್ಮದ ಬೆಳಕನ್ನೂ ತೆಗೆದುಕೊಂಡು ಬಂದುದು. ಈ ಅಗ್ನೇಯ ಏಶಿಯದ ಮೂಲೆ ಯಲ್ಲೇ ಪ್ರಾಚೀನ ನಾಗರಿಕತೆಯು ಸ್ಥಿರವಾಗಿ ಬೇರೂರಿದ್ದು. ಅಲ್ಲಿಯ ಮಠ, ಕಲೆ ಮತ್ತು ಸಾಹಿ ತ್ಯಗಳು ಜನಜೀವನದ ಮೇಲೆ ನೂರಾರು ವಿಧ ದಿಂದ ಪರಿಣಾಮ ಮಾಡಿವೆ.

ದಕ್ಷಿಣ ಚೀನವು ನಮ್ಮ ಥೈ ಕುಲದ ಮೂಲ ಸ್ಥಳ. ಕುಲದಲ್ಲಿಯೂ ನುಡಿಯಲ್ಲಿಯೂ ಮೂಲ ತಃ ನಾವು ಚೀನೀಯರಿಗೆ ಸಂಬಂಧಿಸಿದವರು. ಇನ್ನು ಆಕಾರದಲ್ಲಿ ಕೂಡ ನೀವು ಚೀನೀಯ ನಾರು ಸಯಾಮಿಯಾರು ಎಂದು ಬಿಂಗಡಿಸಿ ಹೇಳಲಾರಿರಿ. ಸುಮಾರು ೨೦೦೦ ವರುಷಗಳ ಹಿಂದೆ ನಮ್ಮ ಪೂರ್ವಜರು ಆ ಸ್ಥಳವನ್ನು ಬಿಟ್ಟು ಹೊರಟು ಇಂಡೋಚೀನದ ಮಧ್ಯ ಪ್ರದೇ ಶದಲ್ಲಿ ಸಂಯುಕ್ತ ಸಯಾಮಿ ರಾಷ್ಟ್ರವೊಂದನ್ನು ಕಟ್ಟಿದರು; ಅದನ್ನು ಈಗ 'ಸಯಾಮ' ಅಥವಾ 'ಥೈಲಾಂಡು' ಎಂದು ಕರೆಯುತ್ತಾರೆ.

—೧೧ ನೇ ಪುಟಕ್ಕೆ

ಸ್ವತಂತ್ರ ಭಾರತ ಮತ್ತು ಬ್ರಿಟನ್ನುಗಳ ಭಾವೀ ಸಂಬಂಧ

(೧ ನೇ ಪುಟದಿಂದ ಮುಂದುವರಿದುದು)

ಶೀಘ್ರವಾಗಿ ಪುನರುಜ್ಜೀವನಗೊಳಿಸುತ್ತದೆ. ನನ್ನ ಪ್ರಿಯ ಮತ್ತು ಮಾನ್ಯ ಮಿತ್ರರಾದ ಜವಾಹರ ಲಾಲರಂತಹ ದೇಶಕ್ಕೋಸ್ಕರ ಬಹಳ ತ್ಯಾಗ ಮಾಡಿದ ಧುರೀಣರು ಭಾರತದ ಆಡಳಿತವನ್ನು ನಡೆಸುವ ಹೊಣೆಯನ್ನೂ ಅಧಿಕಾರವನ್ನೂ ವಹಿ ಸಲು ಒಪ್ಪಿರುವುದನ್ನು ಕಂಡು ಜಗತ್ತಿನ ಮಹಾ ರಾಷ್ಟ್ರಗಳಲ್ಲಿ ಭಾರತವು ಸಮಾನಸ್ಥಾನ ಪಡೆದು ನಿಲ್ಲಲು ಸಮರ್ಥವಿದೆಯೆಂದು ತೋರುವ ರಾಜತಂತ್ರಜ್ಞತೆಯು ಅಲ್ಲಿಯ ಅನೇಕ ಮುಂ ದಾಳುಗಳಲ್ಲಿ ಇದೆಯೆಂದು ನಾನು ದೃಢವಾಗಿ ನಂಬಬಹುದಾಗಿದೆ. ಬಡತನವನ್ನೊಡಿಸಿ ಶಾಂತಿ ಯನ್ನು ರಕ್ಷಿಸಿಕೊಳ್ಳುವ ಉತ್ತಮವಾದ ಮಾನವಪ್ರಯತ್ನದಲ್ಲಿ ಗೆಳೆತನದಿಂದ ನಮ್ಮೆ ರಡು ದೇಶಗಳು ಒಟ್ಟಾಗಿ ಸಾಗುವುದು ಭಾರ ತವು ಹೀಗೆ ಅತಿ ತ್ವರೆಯಿಂದ ಸ್ವಾತಂತ್ರ್ಯವನ್ನು ಪಡೆಯುವುದರಲ್ಲೇ ಇದೆ.

ಕರ್ಮವೀರ ಹರಿಜನ ಪುರವಣಿ

ನಮ್ಮ ಜೀವನದಲ್ಲಿ ಖಾದಿ

ಸುಮಾರು ಮೂರು ದಶಕಗಳಿಂದ ಗಾಂಧೀಜಿ ಖಾದೀ ಪ್ರಚಾರವನ್ನು ನಡೆಸಿರುವರು. ತತ್ಪರಿಣಾಮವಾಗಿ ಸಾವಿರಾರು ರಾಷ್ಟ್ರೀಯ ಕಾರ್ಯಕರ್ತರು ಕೈನೂಲು ಕೈಮಗ್ಗದ ಬಟ್ಟೆಯನ್ನೇ ಧರಿಸಹತ್ತಿರುವರು. ಆದರೆ ಅವರಲ್ಲಿ ಹಲವರಿಗೆ ಮಾತ್ರ ಈ ಲಾಕ್ಷಣಿಕ ಬಟ್ಟೆಯುಳ್ಳಡಕವಾದ ರಹಸ್ಯದ ಅರಿವು ಇದೆ. ಪಂಡಿತ ಜವಾಹರಲಾಲ ನೆಹರು ಇವರು ತಮ್ಮ ವಾಕ್ಪಾಟವದ ಝರಿಯಲ್ಲಿ ಖಾದಿಯು 'ಸ್ವಾತಂತ್ರ್ಯದ ಬಟ್ಟೆ'ಯೆಂದು ಕರೆದಿರುವರು. ಉಳಿದವರು ಖಾದೀ ಧಾರಣ ಶಿಸ್ತಿನ ದ್ಯೋತಕವೆಂದು ತಿಳಿದುಕೊಂಡಿರುವರು. ಈ ಕಾರ್ಯಕ್ರಮದ ತಳಹದಿಯಾಗಿರುವ ಸತ್ಯ ಮತ್ತು ಅಹಿಂಸೆಯ ಧ್ಯೇಯಕ್ಕೆ ಬದ್ಧರಾಗುವಂತೆ ನಮ್ಮ ಬಾಂಧವರ ಕೂಡ ನಮ್ಮ ದೈನಿಕ ವ್ಯಾವಹಾರಿಕ ಸಂಬಂಧವನ್ನು ಬೆಳಸುವ ಜೀವನದ ಮಾರ್ಗ ಖಾದಿಯೆಂಬುದಾಗಿ ಎಷ್ಟು ಜನ ತಿಳಿದುಕೊಂಡಿರುವರು ?

ಕೇವಲ ಕೈನೂಲು ಕೈಮಗ್ಗದ ಬಟ್ಟೆಯನ್ನು ಧರಿಸುವದೇ ಖಾದಿಯಲ್ಲ. ಸ್ವಾವಲಂಬನ ಮತ್ತು ಸಹಕಾರದ ಮೇಲೆ ಸಂಸ್ಥಾಪಿತವಾದ ಆರ್ಥಿಕ ರಚನೆಯಲ್ಲಿ ಖಾದಿಯ ಸ್ಥಾನ. ಅದರಲ್ಲಿ ವಿನಿಮಯಕ್ಕೆಂದು ಉತ್ಪಾದನೆ ನಡೆಯದೆ ಬಳಕೆಗಾಗಿ, ಉಪಯೋಗಕ್ಕಾಗಿ ನಡೆಯುವದು. ವಿನಿಮಯಕ್ಕಾಗಿಯೆಂದು ಸ್ಪರ್ಧಾತ್ಮಕ ಉತ್ಪಾದನೆಯ ತಳಹದಿಯ ಮೇಲೆ ಸ್ಥಾಪಿತವಾಗಿರುವ ಸದ್ಯದ ಆರ್ಥಿಕ ರಚನೆಗೆಗಿಂತ ಇದು ಭಿನ್ನವಾಗಿದೆ. ಸ್ಪರ್ಧಾತ್ಮಕ ಜೀವನ ಮತ್ತು ಸಹಕಾರ ಜೀವನದ ನಿಯಮ ನಿಬಂಧನೆಗಳು ಮತ್ತು ತತ್ವಗಳು ಬಹಳ ಭಿನ್ನವಾಗಿವೆ. ಸ್ಪರ್ಧಾತ್ಮಕ ರಚನೆಯನ್ನು ಬಹಳ ದೂರದವರೆಗೆ ಒಯ್ದಿದ್ದಾದರೆ 'ಬಲ್ಲಿದನೆ ಬಾಳುವನೆ'ಂಬ ಕಾಡು ಕಾಯದೆಗೆ ಹೋಗಿ ಮುಟ್ಟುವದಲ್ಲದೆ ಅಶಕ್ತರೆಲ್ಲ ನಾಶಹೊಂದುವರು. ಆದರೆ ಸಹಕಾರ ರಚನೆಯಲ್ಲಿ ಅಶಕ್ತರಿಗೇ ಹೆಚ್ಚು ಗಮನ ಮತ್ತು ಲಕ್ಷ್ಯ ಕೊಡಲಾಗುವದು. ಅಲ್ಲದೆ ವಿನಿಮಯಕ್ಕಾಗಿ ತಯಾರ ಮಾಡುವ ಉತ್ಪಾದನೆಗೆ ಹೆಚ್ಚು ಪ್ರಾಶಸ್ತ್ಯ ಕೊಡದೆ ನಮ್ಮ ಮುಖ್ಯ ಬೇಡಿಕೆಗಳನ್ನು ಒದಗಿಸುವ ಉತ್ಪಾದನೆಗೇ ಪ್ರಥಮ ಪ್ರಾಶಸ್ತ್ಯ ಕೊಡಲಾಗುವದು. ಉಳಿಕೆಯ ಪದಾರ್ಥಗಳ ವ್ಯಾಪಾರ ಮಾತ್ರ ನಡೆಯುವದು. ನಮ್ಮ ಅಸ್ತಿತ್ವಕ್ಕೆ ಅವಶ್ಯವಾಗಿರುವ ಪದಾರ್ಥಗಳಲ್ಲಿ ವ್ಯಾಪಾರ ನಡೆಯುವದಿಲ್ಲ. ಸಹಕಾರ ತತ್ವ ಸಮಾಜದಲ್ಲಿ ಪ್ರೇಮ ಮತ್ತು ಶಾಂತಿ ಸ್ಥಾಪನೆಗೆ ಸಹಾಯಕವಾಗುತ್ತಿದ್ದರೆ ಸ್ಪರ್ಧೆಯು ದ್ವೇಷ, ಹೊಟ್ಟೆಕಿಚ್ಚು, ಹಗೆತನ ಮೊದಲಾದವುಗಳತ್ತ ನಮ್ಮನ್ನು ಒಯ್ಯುತ್ತಿದೆ.

ಆದುದರಿಂದ ನಮ್ಮ ಜೀವನದಲ್ಲಿ ಖಾದಿಗೆ ಸ್ಥಾನ ಕೊಡಬೇಕೆಂದು ಬಯಸಿದ್ದಾದರೆ, ನಮ್ಮ ಬಳಕೆಗಾಗಿ ನಮ್ಮ ಸ್ವಂತ ಪ್ರಯತ್ನಗಳಿಂದಲೆ ಸಿದ್ಧವಾಗುವ ಎಲ್ಲ ಪದಾರ್ಥಗಳೂ ಅದರಲ್ಲಿ ಅಡಕವಾಗುವಷ್ಟು ತತ್ವ ಉದಾತ್ತವಾಗಿರಬೇಕು. ಇಂಥ ರಚನೆಯಲ್ಲಿ ಸ್ಪರ್ಧಾತ್ಮಕ ಉತ್ಪಾದನೆಯ ಪದ್ಧತಿಯಿಂದ ತಯಾರಾದ ಪದಾರ್ಥಗಳ ಆಯಾತವನ್ನು ಇಲ್ಲವೆ ಕೊಳ್ಳುವದನ್ನು ಆದಷ್ಟು ಕಡಮೆ ಮಾಡಬೇಕು; ಪರಸ್ಪರ ಸಹಕಾರ, ತಿಳುವಳಿಕೆ ಮುಂತಾದ್ದರಿಂದ ತಯಾರಾಗುವ ವಸ್ತುಗಳಿಗೆ ಪ್ರೋತ್ಸಾಹನೆ ಕೊಡುವ ಧೋರಣವನ್ನಿಟ್ಟುಕೊಳ್ಳಬೇಕು.

ಆದುದರಿಂದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಾರ್ವಜನಿಕ ನಾಗರಿಕರು ಖಾದಿಗೆ ಪ್ರೋತ್ಸಾಹನೆ ಕೊಡುವದೆಂದರೆ ಗ್ರಾಮ ಕೈಗಾರಿಕೆಗೆ ಬೆಂಬಲ ಕೊಡುವದಿರಬೇಕಲ್ಲದೆ ಕೇವಲ ದುಡ್ಡಿನ ಮತ್ತು ವ್ಯವಹಾರದೃಷ್ಟಿಯೇ ಅದರಲ್ಲಿರತಕ್ಕದ್ದಲ್ಲ. ಸ್ಪರ್ಧಾತ್ಮಕ ರಚನೆಯು ಸ್ಪಷ್ಟವಾದ ಯೋಜನೆ ಹಣದ ತಂತ್ರ. ಈ ವಸ್ತುವಿನಿಂದ ಹಣಸಿಕ್ಕುವದೇ? ಎಂಬ ಕಟ್ಟು ನಿಯಮಕ್ಕೆ ಖಾದಿ ಕಾರ್ಯಕ್ರಮದಲ್ಲಿಸ್ಥಾನಸಿಕ್ಕಲಾರದು. ಯಾವುದೊಂದು ಕುಟುಂಬದಲ್ಲಿ ತಾಯಿಯು ತನ್ನ ಮಗುವಿಗಾಗಿ ಅಡಿಗೆ ಮಾಡುವಾಗ ಹಣದ ವಿಚಾರ ಅವಳ ತಲೆಯಲ್ಲಿರುವದದಿಲ್ಲ. ಕುಟುಂಬದ ಒಬ್ಬ ಸದಸ್ಯಳೆಂದು ಅವಳೊಬ್ಬಳೆ ಸಂತೋಷದಿಂದ ಎಲ್ಲ ಕೆಲಸವನ್ನು ಶ್ರಮದಿಂದ ಮಾಡುವಳಲ್ಲದೆ ತನ್ನಮೇಲೆ ಅದನ್ನು ಒತ್ತಾಯದಿಂದ ಹೇರಲಾಗಿದೆಂದು ಅವಳು ಭಾವಿಸುವದಿಲ್ಲ. ಅದುತನ್ನ ಜೀವನದ ಕಾರ್ಯವೆಂದು ಅವಳು ತಿಳಿದುಕೊಳ್ಳುವಳು. ತನ್ನ ಮಗುವಿನ ಸುಖಸೌಕರ್ಯವೇ ಅವಳ ಸರ್ವಸ್ವ. ಅಸಹಾಯಕರ ಅವಶ್ಯಕತೆಗಳನ್ನು ಪೂರೈಸುವಲ್ಲಿಯೇ ಅವಳಿಗೆ ಸಮಾಧಾನ. ನಮ್ಮ ಸಹಕಾರಿ ಬಂಧುಗಳೊಡನೆ ನಿಕಟ ಸಂಬಂಧವನ್ನುಂಟು ಮಾಡಲು ಸಹಾಯಕವಾದ ಸಾಂಸ್ಕೃತಿಕ ಪರಂಪರೆ, ವಸ್ತುಗಳ ಸಮಾನ ಹಂಚಿಕೆ ಮತ್ತು ಉಳಿದ ವಿಚಾರಗಳು ಖಾದಿ ತಳಹದಿಯಲ್ಲಿ ರಚಿತವಾಗಿರುವ ಸಾಮಾಜಿಕ ರಚನೆಯ ಮುಖ್ಯ ಘಟಕಗಳಾಗಿವೆ. ಸದ್ಯದ ಅವಶ್ಯಕತೆಗಳಿಂದಲೆ ಇವು ನಿರ್ಧರಿಸಲ್ಪಡುವವಲ್ಲದೆ ಸಂಪತ್ತಿನ ಉತ್ಪಾದನೆ ಮತ್ತು ಸಂಗ್ರಹದ ತತ್ವಾನುಸಾರ ನಿರ್ಧರಿಸಲ್ಪಡುವದಿಲ್ಲ. ಎಲ್ಲಿಯಾದರೂ ಭೂಮಿ ಸಿಕ್ಕುವಂತಿದ್ದರೆ ಜನತೆಗೆ ಅವಶ್ಯವಾಗಿ ಬೇಕಾದ ಆಹಾರ ಪದಾರ್ಥಗಳ ಉತ್ಪಾದನೆಗಾಗಿಯೆ ಅದನ್ನು ಮೊದಲು ಉಪಯೋಗಿಸಲಾಗುವದು. ತದ್ವಿರುದ್ಧವಾಗಿ ಹೆಚ್ಚು ಹಣ ದೊರೆವಂಥ ತಂಬಾಕು, ಉದ್ದ ಎಳೆಯ ಹತ್ತಿ ಅಥವಾ ಗಿರಣಿಗಳಿಗಾಗಿ ಬೇಕಾಗುವ ಇತರ ಸಾಮಗ್ರಿಗಳನ್ನು ಉತ್ಪಾದಿಸುವದಕ್ಕಾಗಿ ಆ ಭೂಮಿಯು ಉಪಯೋಗಮಾಡುವದಿಲ್ಲ. ಒಡೆಯನಿಗೆ ದೊರೆವ ಹಣದ ವಿಚಾರ ಮಾಡಿ ಆಹಾರ ಬೆಳೆವ ಭೂಮಿಯನ್ನು ಕಚ್ಚಾಮಾಲನ್ನು ಬೆಳೆವ ಭೂಮಿಯನ್ನಾಗಿ ಪರಿವರ್ತಿಸಿದರೆ ಸಮಾಜ ಆರ್ಥಿಕ ಅನವಸ್ಥೆಯಿಂದ ಬಳಲಬೇಕಾಗುತ್ತದೆ.

ಆದುದರಿಂದ ನಮ್ಮ ಸ್ವಂತ ಪರಿಶ್ರಮದಿಂದ ನಮ್ಮ ಎಲ್ಲ ಅವಶ್ಯಕತೆಗಳನ್ನು ಪೂರಯಿಸುವದಕ್ಕಾಗಿ ಸಾಕಷ್ಟು ಆಹಾರವನ್ನು ಉತ್ಪಾದಿಸುವದೂ ಖಾದೀ ಸಂದೇಶದಲ್ಲಿ ಅಡಕವಾಗುತ್ತಿದೆ. ಸಹಾಯದ ಅವಶ್ಯಕತೆಯಿದ್ದವರಿಗೆ ಸಹಾಯವನ್ನು ಸಲ್ಲಿಸಿ ಸತ್ಯ ಅಹಿಂಸೆಯ ತಳಹದಿಯಲ್ಲಿ ಮಾನವೀಯ ಸಂಬಂಧವನ್ನುಂಟು ಮಾಡುವದೂ ಇದರ ರಹಸ್ಯವಾಗಿದೆ. ಇದೆಲ್ಲ ಕೇವಲ ನಮ್ಮ ತೀರ ಸಮೀಪದಲ್ಲಿರುಜನವರ ಕೂಡ ಮಾತ್ರವೆ ಅಲ್ಲ, ಆದರೆ ನಮ್ಮ ಸಮೀಪದ ನೆರೆಯ ರಾಷ್ಟ್ರಗಳೊಡನೆ ಸಂಬಂಧವಿಟ್ಟುಕೊಳ್ಳುವಾಗಲೂ ಇದೇ ಬೀಜ ಮಂತ್ರವಾಗಿ ಪರಿಣಮಿಸುವದು.

—ಜೆ. ಸಿ. ಕುಮಾರಪ್ಪ

ಸಾರ್ವಜನಿಕ ಖಂಡನೆಗಳು

ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಡಾ. ರಾಜೇಂದ್ರಪ್ರಸಾದರ ಸಲುವಾಗಿ ಮದ್ರಾಸ ಸಮುದ್ರ ದಂಡೆಯಲ್ಲಿ ಟಿಳಕ ಘಾಟಿನ ಮೇಲೆ ಕೂಡಿದ ಸಭೆಯಲ್ಲಿ ಸಾವಿರಗಟ್ಟಲೆ ಜನ ಸಮಿಲಿತರಾಗಿದ್ದರೆಂಬ ಸುದ್ದಿ ಪ್ರಸಿದ್ಧವಾಗಿದೆ. ರಾಜಾಜಿಯವರು ಅಲ್ಲಿಗೆ ಬಂದುದು ವೇದಿಕೆಯ ಮೇಲೆ ಅಯೋಗ್ಯ ಪ್ರದರ್ಶನ, ಮೆಟ್ಟುಗಳನ್ನು ಒಗೆಯುವದು, ಕಲ್ಲುಗಳನ್ನು ಮತ್ತು ಉಸಕನ್ನು ಎಸೆಯುವದು ಮೊದಲಾದ್ದಕ್ಕೆ ಕಾರಣವಾಯಿತೆಂದು ತೋರುತ್ತದೆ. ಈ ಬಗೆಯ ಪ್ರದರ್ಶನವೆಂದರೆ ಕೇವಲ ಪುಂಡಾಟಿಕೆ ಮತ್ತು ಕಟ್ಟಳೆ ವಿರುದ್ಧ ವರ್ತನ. ದೇಶದಲ್ಲೆಲ್ಲ ಕಡೆಗೆ ಈ ಬಗೆಯ ವೃತ್ತಿ ಕಂಡು ಬರುತ್ತದೆ. ಯಾವದೊಂದು ದೇಶದ ಸಾರ್ವಜನಿಕ ಜೀವನಕ್ಕೆ ಇದು ಕಲಂಕಪ್ರದವಾಗಿದೆ. ಅಹಿಂಸಾ ಮಾರ್ಗದಿಂದ ಮಹತ್ವದ ರಾಜಕೀಯ ಧ್ಯೇಯಗಳನ್ನು ಸಾಧಿಸಿಕೊಳ್ಳಬೇಕೆಂದು ಬದ್ಧಪ್ರತಿಜ್ಞನಾದ ನಮ್ಮ ದೇಶಕ್ಕಂತೂ ಇದು ಹೆಚ್ಚು ಕಲಂಕಪ್ರದವಾಗಿದೆ.

ನಮ್ಮ ದೇಶದಂಥ ವಿಶಾಲ ದೇಶದಲ್ಲಿ ಅಧಿಕಾರದಲ್ಲಿದ್ದವರು ಅನುಸರಿಸುವ ಮಾರ್ಗದ ಬಗ್ಗೆ ಅಸಮಾಧಾನಗೊಳ್ಳುವ ಸಂದರ್ಭಗಳು ಅನೇಕ ಬರುವುದುಂಟು. ಸರಕಾರವೇನು ಸರ್ವಜ್ಞವಲ್ಲ. ಮಂತ್ರಿಗಳ ಸಮೀಪವರ್ತಿಗಳಾದ ಜನರಿಂದ ಅನೇಕ ಸಲ ಸರಕಾರ ಅಡ್ಡ ಮಾರ್ಗ ಹಿಡಿಯುವುದುಂಟು. ನಡುಗಾಲ ಸರಕಾರದ ಮಂತ್ರಿಗಳ ಗಮನಕ್ಕೆ ತರುವಂಥ ಅನೇಕ ವಿಷಯಗಳು ಮದ್ರಾಸದ ಜನತೆಗೆ ಇರಬಹುದು. ಇದು ಯೋಗ್ಯ ಮತ್ತು ಸ್ವಾಭಾವಿಕವೂ ಆಗಿದೆ. ತಮ್ಮ ಬೇಕು ಬೇಡಿಕೆಗಳ ಪರಿಚಯ ಮಂತ್ರಿಗಳಿಗೆ ಮಾಡಿಕೊಡುವದೂ ಸಾರ್ವಜನಿಕರ ಕರ್ತವ್ಯವಾಗಿದೆ. ರಾಷ್ಟ್ರ ಹಾಕಿಕೊಟ್ಟ ಮಾರ್ಗದಿಂದ ಮಂತ್ರಿಗಳು ನಡೆಯದಿದ್ದರೆ ಅವರಿಗೆ ಎಚ್ಚರಿಕೆ ಕೊಡುವದೂ ಜನತೆಯ ಹಕ್ಕಾಗಿರುವದು. ಆದರೆ ಅದೇ ಕಾಲಕ್ಕೆ ಹೀಗೆಲ್ಲ ಮಾಡುವ ಮಾರ್ಗ ಮತ್ತು ಸಾಧನಗಳು ನ್ಯಾಯ್ಯ ಮತ್ತು ಭೂಷಣಪ್ರದವಾಗಿರಬೇಕು. ಮದ್ರಾಸ ಸಭೆಯಲ್ಲಿ ಸ್ವೀಕರಿಸಿದಂಥ ಗುಂಡಗಿರಿಯ ಮಾರ್ಗಗಳಿಂದ ಕದಾಚಿತ ಅದನ್ನೆಸಗಿದವರಿಗೆ ತಿಳಿಯದಷ್ಟು ಕೂಡ ಉದ್ದೇಶಕ್ಕೆ ಹಾನಿ ತಟ್ಟುವದು. ಅತಿಥಿಗಳಿಗೆ ಅದು ಅಪಮಾನಕಾರಕ. ನಮ್ಮ ಸಾರ್ವಜನಿಕ ಜೀವನದ ಕೀಳ್ಮಟ್ಟಿನ ದ್ಯೋತಕವದು. ನಾವು ಸ್ವರಾಜ್ಯ ಮತ್ತು ಪ್ರಜಾಪ್ರಭುತ್ವದತ್ತ ಮುಂದೆ ಸಾಗಿದಂತೆ ಜನತೆಯ ಕಷ್ಟನಷ್ಟಗಳನ್ನು ಮಂತ್ರಿಗಳ ಮತ್ತು ಸರಕಾರದ ಗಮನಕ್ಕೆ ತಂದು ಕೊಡುವ ಸಂದರ್ಭಗಳು ಹೆಚ್ಚೆಚ್ಚಾಗಿ ಬರುವವು. ಆದುದರಿಂದ ಇಂಥ ಸಂದರ್ಭಗಳಲ್ಲಿ ಈಗಿನಿಂದಲೇ ಆತ್ಮಸಂಯಮನ ಮತ್ತು ಶಿಸ್ತು ಸಂವರ್ಧಿಸಿಕೊಳ್ಳುವದು ಅತ್ಯವಶ್ಯವಾಗಿದೆ

ಇದನ್ನು ಸಾಧಿಸುವದಕ್ಕಾಗಿ ಆಯಾ ಪಕ್ಷ ಪಂಗಡಗಳ ಧುರೀಣರು ತಮ್ಮ ಅನುಯಾಯಿಗಳಿಗೆ ಶಿಕ್ಷಣ ಕೊಡಬೇಕೆಂದು ನಾವು ಸೂಚಿಸಬಯಸುತ್ತೇವೆ. ನಿಯಮಿತ ವರ್ಗಗಳನ್ನಿಟ್ಟು ಇಲ್ಲವೆ ಪ್ರಚಾರ ಮಾರ್ಗದಿಂದ ತಮ್ಮ ತಮ್ಮ ಪಕ್ಷಗಳ ಕಷ್ಟನಷ್ಟಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಯೋಗ್ಯ ಮಾರ್ಗಗಳ ಬಗ್ಗೆ ಶಿಕ್ಷಣ ಕೊಡಬೇಕು. ತಾವು ಮಾಡತಕ್ಕ ಕಾರ್ಯದಲ್ಲಿ ಇದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕಾದುದು ಅವಶ್ಯವಾಗಿದೆ. ಇಲ್ಲದಿದ್ದರೆ ಕಟ್ಟಳೆಗೆಟ್ಟತನ ಮತ್ತು ಬೇಶಿಸ್ತು ಎಲ್ಲೆಡೆ ಹಬ್ಬಿ ದೇಶದ ಸಾರ್ವಜನಿಕ ಜೀವನವನ್ನೆ ಹದಗೆಡಿಸುವದು.

—ಜೆ. ಸಿ. ಕುಮಾರಪ್ಪ

ಅಂತರರಾಷ್ಟ್ರೀಯ ಕಳ್ಳಪೇಟೆ

ಹಿಂದುಸ್ಥಾನ ಯಾವದೇ ನಷ್ಟ ಪರಿಹಾರ ಕಾರ್ಯದಲ್ಲಿ ಭಾಗ ವಹಿಸುವದರ ಅನೈತಿಕ ಪದ್ಧತಿ ಸಂಬಂಧದಲ್ಲಿ ಕೆಲ ವಾರಗಳ ಹಿಂದೆ ನಾವು ಟೀಕಿಸಿದ್ದುಂಟು. ಕಳೆದ ಯುದ್ಧದಲ್ಲಿ ನಾವು ಭಾಗ ವಹಿಸಿರಲಿಲ್ಲ, ಆ ಯುದ್ಧದ ಪರಿಣಾಮವಾಗಿ ಏನಾದರೂ ಲಾಭ ಪಡೆಯಬೇಕೆಂದೂ ನಾವು ಹವಣಿಸುವದಿಲ್ಲ. ಆಯಾ ಪಕ್ಷ ಪಂಗಡಗಳು ಸಾಮ್ರಾಜ್ಯತ್ವದ ಉದ್ದೇಶದಿಂದಲೆ ಕಳೆದ ಯುದ್ಧವನ್ನು ಹೂಡಿದ್ದವು. ಆದರೂ ಅತ್ಯಂತ ಹಿಂಸಾಚಾರಿಗಳಲ್ಲಿ ಮೊದಲಿಗರಾಗಲು ಅಸಮರ್ಥರಾದುದಕ್ಕಾಗಿ ಸದ್ಯಕ್ಕೆ ತುಳಿಯಲ್ಪಟ್ಟ ಜನತೆಯ ದುರ್ಲಾಭ ಪಡೆಯುವದೆಂದರೆ ಅತ್ಯಂತ ನೀಚ ಮತ್ತು ಹೇಡಿತನದ ಮಾತಾಗಿದೆ. ತನ್ನ ಬೇಕು ಬೇಡಿಕೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಶಕ್ತಿಯನ್ನುಪಯೋಗಿಸಿ ಹಗಲು ದರೋಡೆ ಮಾಡುವದಕ್ಕೆ ಇಲ್ಲವೆ ಅಶಕ್ತರ ಬದುಕನ್ನು ಕಸಿದುಕೊಳ್ಳುವುದಕ್ಕೆ ಇದು ಸಮಾನವಾಗಿದೆ. ಜರ್ಮನ್ 'ಪೇಟೆಂಟ'ಗಳನ್ನೆಲ್ಲ ಮಿತ್ರ ರಾಷ್ಟ್ರಗಳಲ್ಲಿ ಹಂಚಲಾಗುವದೆಂಬ ಸುದ್ದಿ ಮೊದಲು ಬಂದಿತು. 'ವಿಜಯಿ'ಗಳೆಯರೆಂದುಹೇಳಿಕೊಳ್ಳುವವರಲ್ಲಿ ಹಂಚುವುದಕ್ಕಾಗಿ ಜರ್ಮನ್‌ರ ಕೆಲವು ಔದ್ಯೋಗಿಕ ಕಾರಖಾನೆಗಳನ್ನೆಲ್ಲ ಬಿಡಿಸಹತ್ತಿರುವರೆಂಬ ಸುದ್ದಿಯೂ ಬಂದಿತು. ಅನಂತರ ಜಪಾನದ ಸೊತ್ತಿನ ಸಂಬಂಧದಲ್ಲಿಯೂ ಇದೇ ಬಗೆಯ ಸುದ್ದಿ ಪ್ರಸಿದ್ಧವಾಯಿತು. ಜರ್ಮನಿಯ ಈ ಲೂಟಿಯಲ್ಲಿ ಹಿಂದುಸ್ಥಾನ ತನಗೆ ಬೇಕಾದ ಸಾಮಾನುಗಳ ಬಗ್ಗೆ ಬರೆಯಬೇಕೆಂದು ಕೇಳಲಾಯಿತು. ಇಂಥ ಹೊಲಸ ವ್ಯವಹಾರದಲ್ಲಿ ಯಾವದೇ ಬಗೆಯಿಂದ ಭಾಗ

—೧೦ನೇ ಪುಟಕ್ಕೆ

ಪ್ರಶ್ನೆ ಪೆಟ್ಟಿಗೆ

ಪ್ರಶ್ನೆ ೧— ಲೀಗಿನ ಧುರೀಣರು ಮತ್ತು ಅನುಯಾಯಿಗಳು ತಮ್ಮ ಧ್ಯೇಯ ಸಾಧನೆಯನ್ನು ಅಹಿಂಸಾ ಮಾರ್ಗದಿಂದ ಮಾಡಿಕೊಳ್ಳಬೇಕೆಂಬ ನಂಬಿಗೆಯನ್ನು ತಳೆದಿಲ್ಲ. ಹೀಗಿರುವಾಗ ಅವರ ಹೃದಯಪರಿವರ್ತನ ಮಾಡುವ ಬಗೆ ಹೇಗೆ? ಇಲ್ಲವೆ ಹಿಂಸಾತ್ಮಕ ಕೃತ್ಯಗಳಿಂದಾಗುವ ಹಾನಿಯ ಬಗ್ಗೆ ಅವರ ಮನವರಿಕೆ ಮಾಡಿಕೊಡುವದೆಂತು ?

ಉತ್ತರ ೧— ಹಿಂಸೆಯನ್ನು ಅಹಿಂಸೆಯಿಂದಲೆ ಯಶಸ್ವಿಯಾಗಿ ಎದುರಿಸಬಲ್ಲೆವು. ಇದೊಂದು ಹಳೆಯ ಸಿದ್ಧವಾದ ಸತ್ಯ. ಅಹಿಂಸೆಯ ಕಾರ್ಯಕ್ಷಮತೆಯ ನಿಜವಾದ ಅರಿವು ಈ ಪ್ರಶ್ನೆಕಾರನಿಗೆ ಇರುವದಿಲ್ಲ. ಅವನಿಗೆ ಅದೆಲ್ಲ ಗೊತ್ತಿದ್ದರೆ ಹಿಂಸೆಯ ಅಸ್ತ್ರದ ಆಟ ಅಣು ಅಣು ಬಾಂಬು ಇದ್ದರೂ—ನಿಜ ಅಹಿಂಸೆಯ ಮುಂದೆ ಸ್ವಲ್ಪೂ ನಡೆಯುವುದಿಲ್ಲ. ಈ ಬಲಿಷ್ಠ ಶಸ್ತ್ರದ ಉಪಯೋಗವೆಂತು ಮಾಡಿಕೊಳ್ಳಬೇಕೆಂಬುದು ಬಹಳ ಕಡಮೆ ಜನರಿಗೆ ಗೊತ್ತಿದೆಂಬ ಮಾತು ಮಾತ್ರ ನಿಜ. ಆದಕ್ಕಾಗಿ ಪ್ರಚಂಡ ಮನಃಶಕ್ತಿ ಮತ್ತು ತಿಳುವಳಿಕೆ ಬೇಕಾಗುವದು. ಶೈಕ್ಷಣಿಕ ಶಾಲೆ ಕಾಲೇಜಗಳಲ್ಲಿ ಬೇಕಾದುದಕ್ಕಿಂತ ಭಿನ್ನವಾಗಿದೆ ಇದು. ಮಾನಸಿಕ ಅಶಕ್ತತೆಯ ಪರಿಣಾಮವಾಗಿಯೆ ಅಹಿಂಸೆಯಿಂದ ಹಿಂಸೆಯನ್ನೆದುರಿಸುವದು ಯಾವನೊಬ್ಬನಿಗೆ ಕಠಿಣವೆನಿಸುವದು.

ಪ್ರಶ್ನೆ ೨:— ಲೀಗಿನ ಬೆಂಬಲಿಗರೊಡನೆ ತಿಕ್ಕಾಟ ಬಹುಶಃ ಹಿಂಸಾತ್ಮಕ ಸ್ವರೂಪದ ಹೋರಾಟ ಅಪರಿಹಾರ್ಯವಾಗಿದೆಂದು ಅನೇಕ ಜನರಿಗೆ ಈಗ ಎನಿಸಹತ್ತಿದೆ. ಲೀಗು ಬಂಗಾಲ ಮತ್ತು ಪಂಜಾಬ ವಿಭಜನೆಗೆ ಒಪ್ಪುವವರೆಗೆ ಅದರ ಪಾಕಿಸ್ತಾನದ ಬೇಡಿಕೆ ಅನ್ಯಾಯದ್ದೆಂದು ರಾಷ್ಟ್ರೀಯರು ಭಾವಿಸುತ್ತಾರೆ. ಈ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಯಾವ ಮಾರ್ಗಗಳನ್ನು ನಾವು ಅನುಸರಿಸಬೇಕು ?

ಉತ್ತರ ೨— ಮೊದಲನೆಪ್ರಶ್ನೆಗೆ ಕೊಟ್ಟ ಉತ್ತರ ಸರಿಯಾಗಿದೆಂದು ಗ್ರಹಿಸಿದರೆ ಎರಡನೇ ಪ್ರಶ್ನೆ ಉದ್ಭವಿಸುವದೇ ಇಲ್ಲ. ಆದರೆ ಪರಿಸ್ಥಿತಿಯನ್ನು ತಿಳಿಪಡಿಸುವದಕ್ಕೋಸುಗ ಈ ಪ್ರಶ್ನೆಯನ್ನು ಚರ್ಚಿಸಬಹುದಾಗಿದೆ. ಬಹುಸಂಖ್ಯಾಕ ಮುಸ್ಲಿಮರು ಕಾಯದೇ ಆಜಂ ಜಿನ್ನಾರ ಆಜ್ಞೆಯಂತೆ ನಡೆದದ್ದಾದರೆ ಹಿಂಸಾತ್ಮಕ ಹೋರಾಟ ಅಸಂಭವನೀಯವೆ; ಇಲ್ಲವೆ, ಬಹುಸಂಖ್ಯಾಕ ಹಿಂದುಗಳು ಅಹಿಂಸಾ ಮಾರ್ಗವನ್ನು ಅನುಸರಿಸಿದ್ದಾದರೆ ಮುಸಲ್ಮಾನರು ಎಷ್ಟೇ ಹಿಂಸೆಯನ್ನು ನಡೆಸಿದರೂ ಅದು ಅಯಶಸ್ವಿಯಾಗಿಯೆ ಪರಿಣಮಿಸುವುದು. ಆದರೂ ಈ ಸಂಬಂಧದಲ್ಲಿ ಒಂದು ಮಾತನ್ನು ಪೂರ್ಣವಾಗಿ ತಿಳಿದುಕೊಳ್ಳಬೇಕು. ಅಹಿಂಸಾವಾದಿಗಳು ವಿಚಾರದಲ್ಲಿ ಕೂಡ ಹಿಂಸೆಗೆ ಅವಕಾಶ ಕೊಡಬಾರದು. ಕೃತಿಯಲ್ಲಿ ಹಿಂಸೆಯ ಪ್ರಶ್ನೆಯಂತೂ ದೂರೇ ಉಳಿಯಿತು. ಪಾಕಿಸ್ತಾನ ತಪ್ಪಾಗಿದ್ದರೆ ಬಂಗಾಲ ಮತ್ತು ಪಂಜಾಬದ ವಿಭಜನೆ ಅದನ್ನು ಸರಿಪಡಿಸಲಾರದು. ಎರಡು ಅನ್ಯಾಯಗಳು ಒಂದು ನ್ಯಾಯವನ್ನುಂಟು ಮಾಡಲಾರವು.

ಪ್ರಶ್ನೆ ೩:— ಸಾಮ್ಯವಾದದ ತತ್ವದನ್ವಯ ಕ್ರಾಂತಿಯಾದರೆ ಜಾತೀಯತೆ ಹಿಮ್ಮೆಟ್ಟಲ್ಪಟ್ಟು ಆರ್ಥಿಕ ಪ್ರಶ್ನೆ ಮುಂದೆ ಬರುತಿದೆಂದು ಸಾಮ್ಯವಾದಿಗಳಲ್ಲಿ ಬಹುಸಂಖ್ಯಾಕರು ಹೇಳಿಕೊಳ್ಳುವದುಂಟು. ಇದನ್ನು ನೀವು ಒಪ್ಪುವಿರೋ ? ಇಂಥ ಕ್ರಾಂತಿಸಂಭವಿಸಿದ್ದಾದರೆ 'ರಾಮರಾಜ್ಯ'ವೆಂದು ನೀವು ಕರೆಯುವ 'ದೇವರಾಜ್ಯ'ದ ಸ್ಥಾಪನೆಯಾಗಬಲ್ಲದೆ ?

ಉತ್ತರ ೩:— ನೀವು ಊಹಿಸುವ ಆರ್ಥಿಕ ಹೋರಾಟದಿಂದ ಹಿಂದೂ ಮುಸಲ್ಮಾನರ ತಿಕ್ಕಾಟವೇನೋ ಸ್ವಲ್ಪ ಕಡಮೆಯಾಗಬಹುದು. ಹಿಂದೂ ಮುಸಲ್ಮಾನರ ತಿಕ್ಕಾಟ ಒಂದು ವೇಳೆ ಕೊನೆಗೊಂಡರೂ ನಮ್ಮ ಎಲ್ಲ ಸಂಕಷ್ಟಗಳ ನಿವಾರಣೆಯಾಗದು. ಆಗುವದೇನು? ದಾಸ್ಯ ಕೊನೆಗೊಂಡು ಸ್ವಾತಂತ್ರ್ಯದ ಉದಯವಾಯಿತೆಂದರೆ ಸಮಾಜದಲ್ಲಿಯ ಎಲ್ಲ ಅಶಕ್ತತೆಗಳೆಲ್ಲ ಮೇಲೆ ಬರಲಿಕ್ಕೆ ಬೇಕು. ಅದರ ಬಗ್ಗೆ ಅನವಶ್ಯಕವಾಗಿ ತಲೆಕೆಡಿಸಿಕೊಳ್ಳುವಲ್ಲಿ ಹುರುಳಿಲ್ಲ. ಇಂಥ ಸಮಯದಲ್ಲಿ ನಾವು ತಲೆಯನ್ನು ಶಾಂತವಾಗಿಟ್ಟುಕೊಂಡರೆ ಸಮಸ್ಯೆಗಳೆಲ್ಲ ಬಗೆಹರಿಯುವವು. ಆರ್ಥಿಕ ಪ್ರಶ್ನೆಯ ಮಟ್ಟಿಗೆ ಹೇಳಬೇಕಾದರೆ ಏನೇ ಆದರೂ ಅದನ್ನು ಬಗೆಹರಿಸಲಿಕ್ಕೆ ಬೇಕಾಗುವದು. ಇಂದು ಆರ್ಥಿಕ ಅಸಮಾನತೆ ವಿಪರೀತಕ್ಕೇರಿದೆ. ಸಾಮ್ಯವಾದದ ತಳಹದಿಯೆ ಆರ್ಥಿಕ ಸಮಾನತೆ. ಇಂಥ ಅತ್ಯಂತ ಅನ್ಯಾಯದ ಅಸಮಾನತೆಯ ಪರಿಸ್ಥಿತಿಯಲ್ಲಿ ರಾಮರಾಜ್ಯವೆಂದಿಗೂ ಸಂಸ್ಥಾಪಿತವಾಗದು. ಸತ್ಯದ

—೧೦ ನೇ ಪುಟಕ್ಕೆ

ಗಾಂಧೀಜಿಯ ಬಿಹಾರ ಯಾತ್ರೆ

೧೮—೩—೪೭

ಗಾಂಧೀಜಿಯ ಸಾಪ್ತಾಹಿಕ ಮೌನ ಇಂದು ಸ್ವಲ್ಪ ಮೊದಲೇ ಪ್ರಾರಂಭವಾದುದರಿಂದ ಅವರ ಲಿಖಿತ ಸಂದೇಶವನ್ನು ಸಭೆಯ ಮುಂದೆ ಓದಿ ಹೇಳಲಾಯಿತು. ಹಿಂದಿನ ದಿನ ಪ್ರಾರ್ಥನಾಸಭೆಗೆ ಬಂದಿದ್ದ ಅನೇಕಾನೇಕ ಜನರಿಗೆ ತಮ್ಮ ಸಂದೇಶವನ್ನು ಎಂದಿನಂತೆ ಕೊಡಲಾರದೆ ಹೋದುದಕ್ಕಾಗಿ ಇಂದಿನ ಸಂದೇಶದಲ್ಲಿ ಗಾಂಧೀಜಿ ಪರಿತಾಪ ವ್ಯಕ್ತಗೊಳಿಸಿದ್ದರು. ಸ್ವಯಂಸೇವಕರ ಅಜಾಗರೂಕತೆಯಿಂದಲೋ ಅಥವಾ ಅಸಾಮರ್ಥ್ಯದಿಂದಲೋ ಇಲ್ಲವೇ ಧ್ವನಿವಾಹಕ ಯಂತ್ರಗಳು ಸಾಲದ್ದರಿಂದಲೋ ಅಂತೂ ಕುತೂಹಲದಿಂದ ಬಂದಿದ್ದ ಬಹಳ ದೊಡ್ಡ ಜನಸಂದಣಿ ನಿರಾಶವಾಗಿ ಹಿಂದಿರುಗಬೇಕಾಯಿತು. "ಇಂಥ ಅಚಾತುರ್ಯ ನಮಗೆ ನಾಚಿಕೆಗೇಡಿತನ ಸಂಗತಿ ಅವರೆ ಲಕ್ಷಗಟ್ಟಳೆ ಜನ ಸೇರಿದಾಗಲೂ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ನಾವು ಕಲಿಯಬೇಕಾಗಿದೆ" ಎಂದು ಅವರು ಸೂಚಿಸಿದರು.

ಮುಂದುವರಿಯುತ್ತ ಗಾಂಧೀಜಿ ಹೇಳಿದರು. ಶಿಸ್ತು ಪಾಲನದ ಮೂಲ ನಿಯಮಗಳನ್ನು ಕೂಡ ಪಾಲಿಸುವದು ನಮ್ಮಿಂದಾಗದಿದ್ದರೆ ಇಷ್ಟು ಕಷ್ಟಪಟ್ಟು ದೊರಕಿಸಿದ ಸ್ವಾತಂತ್ರ್ಯವನ್ನು ನಾವು ಉಳಿಸಿಕೊಳ್ಳಲಾರೆವೆಂದು ಭಯವಾಗುತ್ತದೆ. ಪ್ರಜಾತಂತ್ರದಲ್ಲಿ ಒಬ್ಬೊಬ್ಬ ಸ್ತ್ರೀಪುರುಷನೂ ತಂತನ್ನ ಹೊಣೆಯನ್ನು ಅರಿತುಕೊಳ್ಳುವದೇ ಮುಖ್ಯವಾದ ಮಾತು. "ಪಂಚಾಯತ ರಾಜ್ಯ" ಎಂಬುದರ ತಾತ್ಪರ್ಯವಾದರೂ ಇದೇ ಎಂದು ಗಾಂಧೀಜಿ ಅಭಿಪ್ರಾಯಪಟ್ಟರು. ದೇಹದ ಯಾವುದೇ ಅಂಗ ಸರಿಯಾಗಿ ನಡೆಯಲು ತಪ್ಪಿದರೆ ಇಡಿ ದೇಹವೇ ಜಡವಾಗುವದು. ಅದೇ ರೀತಿ ಇಡಿ ಹಿಂದುಸ್ತಾನವೇ ಒಂದು ದೇಹ, ಒಬ್ಬೊಬ್ಬ ಪ್ರಜೆಯೂ ಅದರ ಒಂದೊಂದು ಅಂಗ. ಒಂದಾದರೂ ಅಂಗ ಜಡವಾದರೆ ಇಲ್ಲವೆ ನಿಷ್ಕ್ರಿಯೋಜಕವಾದರೆ ಅಷ್ಟು ಮಟ್ಟಿಗೆ ಇಡಿ ದೇಹಕ್ಕೇ ಕೇಡುಬಂದಂತೆ. ಇದೇ ಕಾರಣಕ್ಕಾಗಿ ಸಭೆಗಳಲ್ಲಿ, ರೇಲ್ವೆ ಡಬ್ಬಿಗಳಲ್ಲಿ ಇಲ್ಲವೆ ರೇಲ್ವೆ ನಿಲ್ದಾಣಗಳಲ್ಲಿ ಶಿಸ್ತುಗೆಡುವದನ್ನು ಇಷ್ಟು ಒತ್ತೊತ್ತಿ ತಾವು ಟೀಕಿಸುತ್ತಿದ್ದೇವೆಂದು ಅವರು ಹೇಳಿದರು.

ಎಲ್ಲ ಸಭೆ ಕೂಟಗಳಲ್ಲಿಯೂ ಸುವ್ಯವಸ್ಥಿತವಾಗಿ ನಡೆದುಕೊಳ್ಳುವ ತರಬೇತಿಯನ್ನು ಕೊಟ್ಟದ್ದರೆ ಬಿಹಾರ ದಂಗೆಗಳು ಅಸಂಭವವಾಗುತ್ತಿದ್ದವೆಂದು ಹೇಳುವ ಧೈರ್ಯ ತಮಗುಂಟೆಂದೂ ಗಾಂಧೀಜಿ ಹೇಳಿದರು.

ಇಂದು ಯಾವ ಗಲಭೆಗೂ ಜಾತೀಯ ಬಣ್ಣ ಬಳಿಯುವದು ರೂಢಿಯಾಗಿದೆ. ಪರಿಣಾಮವಾಗಿ ಜಾತೀಯ ಹೋರಾಟವಾಗಲೆಳಸದ್ದು ಜಾತೀಯವಾಗಿ ನೈರೂಪಗೊಂಡಿತು. ಅದು ಕಾರಣ ಜನರು ನೆರೆದಲ್ಲೆಲ್ಲ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಅವರಿಗೆ ಕಲಿಸುವದೆಷ್ಟು ಮಹತ್ವದ ಮಾತೆಂಬದನ್ನು ಸ್ವಯಂಸೇವಕರು ಮನಗಾಣಬೇಕು. ಸಭೆಗಳು ನಿಜವಾಗಿ ಸೇರಿದಾಗಲೆ ಹೀಗೆ ಮಾಡಲು ಪ್ರಯತ್ನಿಸಿದರೆ ಇದು ಕೈಗೂಡಲಾರದು. ಸ್ವಯಂಸೇವಕರು ಮನೆಮನೆಗೆ ಹೋಗಿ ಅವಶ್ಯಕವಿರುವ ಶಿಕ್ಷಣವನ್ನು ಕೊಡಬೇಕಾಗಿದೆ.

ದಿನಾಪುರಕ್ಕೆ ತಮ್ಮನ್ನು ಇನ್ನೊಮ್ಮೆ ಒಯ್ಯುವ ಉದ್ದೇಶದಿಂದ ಅಲ್ಲಿ ಸ್ವಯಂಸೇವಕರು ಕೆಲಸ ಮಾಡಬೇಕೆಂದು ಗಾಂಧೀಜಿ ಅಪೇಕ್ಷಿಸಿದರು. ಇದಕ್ಕಾಗಿ ಸಭಾಸ್ಥಾನದಲ್ಲಿ ಪರಿಪೂರ್ಣ ಮೌನವನ್ನು ಸಭಾ ನಿಯಮಗಳನ್ನೂ ಸರಿಯಾಗಿ ಪಾಲಿಸುವಂತೆ ಸ್ವಯಂಸೇವಕರು ಜನರನ್ನು ತರಬೇತುಗೊಳಿಸಲಿ. ದಿಲ್ಲಿಯಿಂದ ತಾವು ಮರಳಿದಾಗ ಮತ್ತೆ ತಮ್ಮನ್ನು ದಿನಾಪುರಕ್ಕೆ ಒಯ್ಯಲು ಅವರು ಸಿದ್ಧರಾಗಲೆಂದು ಗಾಂಧೀಜಿ ಹಾರೈಸಿದರು. ಅದೊಂದು ಒಳ್ಳೆ ದೃಷ್ಟಾಂತ ಪಾಠವಾದೀತು.

೧೯—೩—೪೭

ಇಂದು ಸಂಜೆ ಬಾಢದಲ್ಲಿ ಸೇರಿದ್ದ ದೊಡ್ಡ ಸಭೆಯಲ್ಲಿ ಗಾಂಧೀಜಿ ಮಾತಾಡಿದರು. ಸಭೆಯಲ್ಲಿ ಪೂರ್ಣ ಶಾಂತತೆ ಪಡೆದಿತ್ತು. ಸುವ್ಯವಸ್ಥೆಯನ್ನು ಪರಿಪೂರ್ಣವಾಗಿ ಕಾಯ್ದುಕೊಂಡ ಬಗ್ಗೆ ಜನರನ್ನೂ ಸ್ವಯಂಸೇವಕರನ್ನೂ ಅವರು ಅಭಿನಂದಿಸಿದರು. ನಮ್ಮ ಸ್ವಂತದ ಸರಕಾರ ಬಂದೊಡನೆ ರಾಷ್ಟ್ರ ನಿರ್ಮಾಪಕರಾಗಿ ಕೆಲಸಮಾಡುವ ಹೊಸಭೂಮಿಕೆ ಸ್ವಯಂಸೇವಕರ ಪಾಲಿಗೆ ಬಂದಿದೆ. ವಿದೇಶಿ ಸರಕಾರದ ವಿರುದ್ಧ ಹೋರಾಡುವಾಗ, ಆ ಹೋರಾಟದ ಅಹಿಂಸಾತ್ಮಕತೆಯಿಂದಾಗಿ ಅವರಿಗೆ ತಾನಾಗಿ ದೊರೆತ ವಿಧಾಯಕ ತರಬೇತಿಯನ್ನೆ ಇದಕ್ಕಾಗಿ ಅವರು ಅಲ್ಪಸ್ವಲ್ಪ ಬೆಳೆಸಿಕೊಳ್ಳುವದು ಅವಶ್ಯ.

ಮುಂದುವರಿಯುತ್ತ ಅವರು ಹೇಳಿದ್ದು: "ಆದರೆ ನನ್ನ ಇಂದಿನ ವಿಷಯ ಬಿಹಾರ ಮಾಡಿದ ಪಾತಕ ಮತ್ತು ಅದರ ಪ್ರಾಯಶ್ಚಿತ್ತ ಇವುಗಳನ್ನು ಕುರಿತದ್ದು. ಮುಸ್ಲಿಮರೇ ತಂಟೆಯನ್ನು ಪ್ರಾರಂಭಿಸಿದ್ದರಿಂದ ಪ್ರತೀಕಾರ ಅನಿವಾರ್ಯವಾಗಿತ್ತು, ತಂಟೆಯನ್ನು ಕೊನೆಗೊಳಿಸಲು ಅದೊಂದೇ ಹಾದಿಯಿತ್ತು, ಎಂಬದಾಗಿ ವಾದಿಸುವವರುಂಟು. ಈ ವಾದ ಉಚಿತವಾದುದೆಂದು ತೋರಿಕೆಗೆ ಕಂಡರೂ ಅದಕ್ಕೆ ನೀವು ಮರುಳಾಗಬಾರದು. ಪಶುತ್ವಕ್ಕೆ ಪಶುತ್ವದಿಂದಲೇ ಉತ್ತರ ಕೊಡುವದು ನಮ್ಮ ಬುದ್ಧಿಯ ಹಾಗು ನೀತಿಯ ದಿವಾಳಿಯನ್ನೆ ತೋರಿಸುತ್ತದೆ. ಈ ಸುಳಿಯಲ್ಲಿ ಸಿಕ್ಕರೆ ಅದರಿಂದ ಪಾರವೇ ಇಲ್ಲವೆಂದು ಈಗಾಗಲೆ ನಡೆದಿರುವ ಘಟನೆಗಳಿಂದ ಸಿದ್ಧವಾಗಿದೆ. ಈ ಹುಚ್ಚಾಟವನ್ನು ಇನ್ನೂ ನಡೆಸಿದರೆ ಬರಲಿರುವ ಸ್ವಾತಂತ್ರ್ಯವನ್ನು ನಾವು ಉಳಿಸಿಕೊಳ್ಳಲಾರೆವು."

ಬಾಢ ಹಳ್ಳಿ ಪೂರ್ತಿ ಹುಚ್ಚುಗೆಟ್ಟು ಹೋಗದ—ಕೆಲವೇ ಸುದೈವಿ ಸ್ಥಳಗಳಲ್ಲೊಂದಾಗಿದೆಯೆಂದು ಗಾಂಧೀಜಿ ಹೇಳಿದರು. ಆದರೆ ತನ್ನ ಸುತ್ತಮುತ್ತ ನಡೆದ ಕೃತ್ಯಗಳ ಹೊಣೆಯಿಂದ ಅದು ತಪ್ಪಿಸಿಕೊಳ್ಳಲಾರದು. ಬಿಹಾರದಲ್ಲಿ ಎದ್ದಂಥ ಹುಚ್ಚಾಟದ ಫಲವಾಗಿ ಹಿಂದುಸ್ತಾನ ಈಗಾಗಲೆ ಎಷ್ಟು ಕಳೆದುಕೊಂಡಿದೆಯೋ ಇನ್ನೆಷ್ಟು ಕಳೆದುಕೊಳ್ಳಲಿದೆಯೋ ಹೇಳುವದು ಕಠಿನ. ಈ ಪರಿಣಾಮದಿಂದ ತಪ್ಪಿಸಿಕೊಳ್ಳಲು ಒಂದೇ ಹಾದಿಯುಂಟು: ಜನರು ತಮ್ಮ ಕೃತ್ಯಗಳಿಗಾಗಿ ಮನಸಾ ಪಶ್ಚಾತ್ತಾಪ ಪಟ್ಟು, ಅನ್ಸಾರಿ ಸಾಹೇಬರಿಗೆ ಮಂತ್ರಿಮಂಡಲ ಒಪ್ಪಿಸಿದ ಹೊರಲಾರದ ಹೊಣೆಯನ್ನು ನಿರ್ವಹಿಸಲು ಅವರಿಗೆ ಸಹಾಯ ಮಾಡಬೇಕು. ಅನಾಗರಿಕರಂತೆ ನಡೆದುಕೊಂಡ ಪಾತಕಿಗಳನ್ನಾಗಲಿ ಮರಳುತ್ತಿರುವ ಮುಸ್ಲಿಮರನ್ನು ತಾವೇನೋ ದೊಡ್ಡ ಪರಾಕ್ರಮದ ಕೆಲಸ ಮಾಡಿದ್ದವರೆಂಬ ಭ್ರಾಂತಿಯಿಂದ ಇನ್ನೂ ಬೆದರಿಸುತ್ತಿರುವ ಕಿಡಿಗೇಡಿಗಳಿಗಾಗಲಿ ಜನರು ಆಶ್ರಯ ಕೊಡಲು ನಿರಾಕರಿಸಬೇಕು. "ಅವರು ಮಾಡಿದ್ದು ಪರಾಕ್ರಮವೋ ನಾನಿನ್ನೂ ಅರಿಯಲಾರದವನಾಗಿದ್ದೇನೆ." ಎಂದರವರು.

ಈ ಪಾತಕಿಗಳಾದರೂ ನಿಜವಾದ ಪಶ್ಚಾತ್ತಾಪದ ಕುರುಹಾಗಿ ಪೋಲೀಸರಿಗೆ ಶರಣಾಗತರಾಗಿ ತಮ್ಮ ಕರ್ಮದ ಫಲವನ್ನು ಭೋಗಿಸಲು ಸಿದ್ಧರಾಗಬೇಕೆಂದು ಗಾಂಧೀಜಿ ಉಪದೇಶಿಸಿದರು. ಹೇಗೇ ಆದರೂ ಶರಣಾಗತರಾಗುವದು ಅವರ ಹಿತದೃಷ್ಟಿಯಿಂದಲೂ ಒಳಿತಾದುದೆ. ಏಕೆಂದರೆ, ಸರಕಾರವೂ ಪೋಲೀಸರೂ ತಮ್ಮ ಕರ್ತವ್ಯ ಮಾಡಿದರೆ—ಹಾಗೆ ಮಾಡದಿದ್ದರೆ ಅವರಿದ್ದೂ ವ್ಯರ್ಥ—ಇಂದಲ್ಲ ನಾಳೆ ಪಾತಕಿಗಳು ಸಿಕ್ಕಿಬಿದ್ದೇ ಬೀಳುವರು. ತಾವಾಗಿ ಶರಣಾಗತರಾದರೆ ನ್ಯಾಯಸ್ಥಾನ ಅವರನ್ನು ಅಷ್ಟು ಮಟ್ಟಿಗೆ ಮೆತ್ತಗೆ ನಡೆಸಿಕೊಳ್ಳದಿರದು. ತಾವು ಹೀಗೆ ಹೇಳಿದಾಕ್ಷಣ ಹೇಡಿತನವನ್ನು ಪ್ರತಿಪಾದಿಸಿದೆವೆಂದು ತಿಳಿದುಕೊಳ್ಳಕೂಡದೆಂದು ಗಾಂಧೀಜಿ ಎಚ್ಚರಿಸಿದರು.

ಹೇಡಿತನಕ್ಕೆ ಬೆಂಬಲವೀಯುವದು ತಮ್ಮ ಸ್ವಭಾವಕ್ಕೇ ಒಗ್ಗುವದಿಲ್ಲೆಂದು ಅವರು ಮುಂದುವರಿಸಿದರು. ದಕ್ಷಿಣ ಅಫ್ರಿಕೆಯಲ್ಲಿ ತಾವಿದ್ದಾಗ ಕೆಲ ಸಾವಿರ ಜನರು ಅಸಂಖ್ಯ ವಿರೋಧಿಗಳನ್ನೆದುರಿಸಿ ನಿಂತಿದ್ದರು. ಅವರ ದಿಟ್ಟತನ ಅಯಶಸ್ವಿಯಾಗಿದ್ದಿಲ್ಲ. ಅಲ್ಲಿಂದ ಹಿಂದುಸ್ತಾನಕ್ಕೆ ಬಂದಂದಿನಿಂದಲೂ ಅಹಿಂಸೆಯೆಂಬ ನಿಜ ಪರಾಕ್ರಮವನ್ನು ಕಲಿಸುವದನ್ನೇ ಮೀಸಲುಗೆಲಸವಾಗಿ ಮಾಡಿಕೊಂಡಿದ್ದೇನೆ. "ನಿಮ್ಮ ಪ್ರಾಂತದಲ್ಲೇ ಒಂದಾನೊಂದು ಕಾಲದಲ್ಲಿ ನೀಲಿ ತೋಟ ದೊಡೆಯರ ದಬ್ಬಾಳಿಕೆಯನ್ನು ಅಹಿಂಸಾತ್ಮಕ ಪ್ರತಿಭಟನೆಯಿಂದ ಅರೇ ತಿಂಗಳ ಕಾಲದಲ್ಲಿ ಹಾರಿಸಿ ಒಗೆದ ಸಂಗತಿಯನ್ನು ನೀವು ಮರೆಯಬೇಡಿರಿ. ಇಂದು ನಮ್ಮ ದೇಶವನ್ನು ಮುಳುಗಿಸಿರುವ ಮಡುವಿನಿಂದ ಪಾರಾಗಿ ಹೋಗಬೇಕಾದರೆ ಅಂಥ ಪರಾಕ್ರಮವನ್ನೇ ಅದಕ್ಕೂ ಎಷ್ಟೋ ಹೆಚ್ಚು ಪ್ರಮಾಣದಲ್ಲಿ ನಾವು ತೋರಿಸಬೇಕಾಗುವದು," ಎಂದು ಗಾಂಧೀಜಿ ಕೊನೆಗೊಳಿಸಿದರು.

೨೦—೩—೪೭

ಇಂದು ಸಂಜೆ ಗಾಂಧೀಜಿಯ ಪ್ರಾರ್ಥನೆ ಹಿಲಸಾದಲ್ಲಿ ಜರುಗಿತು. ಇದು ಗಲಭೆಗಳಲ್ಲಿ ಅತ್ಯಂತ ಪೀಡಿತವಾದ ಪ್ರದೇಶಗಳಲ್ಲೊಂದು. ಇದು ನಾಚಿಕೆಗೇಡಿನ ಹಾಗೆಯೆ ವಿಷಾದದ ಸಂಗತಿಯೆಂದು ಗಾಂಧೀಜಿ ಹೇಳಿದರು. ಆದರೆ ಈ ಪಾತಕದ ಲಜ್ಜೆಯನ್ನು ಯೋಗ್ಯ ಪಶ್ಚಾತ್ತಾಪದಿಂದ ಪುಣ್ಯವಾಗಿ ಪರಿವರ್ತಿಸಬಹುದು. ತಾವು ಅಭ್ಯಸಿಸಿದ ಧರ್ಮಗಳೆಲ್ಲ ಒಂದು ವಿಷಯದಲ್ಲಿ ಒಮ್ಮತವಾಗಿವೆ: "ಪಾಪಿಗಳಲ್ಲಿ ನಿಸ್ಸೀಮನಾಗಿದ್ದವನೇ ಸಾಧುಗಳಲ್ಲಿ ನಿಸ್ಸೀಮನಾದನು" ಪೂರ್ವಪಾಪದ ನೆನಹಿನ ನೋವಿನಿಂದ ಸದ್ಗುಣ ನಿಷ್ಕಲಂಕ ಜೀವನದ ಸೊಗಸು ಹೆಚ್ಚುತ್ತದೆ. ಹಿಲಸಾದ ಜನರ ಜೀವನದಲ್ಲಿಯೂ ಇದೇ ನ್ಯಾಯ ಸತ್ಯವಾಗಲೆಂದು ಗಾಂಧೀಜಿ ಹಾರೈಸಿದರು. ದೈಹಿಕ ಕಲ್ಮಷಕ್ಕೇ ನಾವು ಹೇಸಿಕೊಳ್ಳುತ್ತೇವೆ. ಹಿಲಸಾದ ಹಿಂದುಗಳ ಉನ್ಮಾದದಿಂದ ಬೆಳಕಿಗೆ ಬಂದ ಆ ಮಾನಸಿಕ ಕಲ್ಮಷವಂತೂ ಎಂಥೆಂಥ ದೈಹಿಕ ಕಲ್ಮಷಕ್ಕಿಂತಲೂ ಬೀಭತ್ಸವೇ ಸರಿ. ಹಿಲಸಾದ ಹಿಂದುಗಳ ಹೃದಯದಲ್ಲಿ ಶುದ್ಧ ಪಶ್ಚಾತ್ತಾಪವನ್ನು ಹೇಗೆ ಎಬ್ಬಿಸಬಹುದೆಂಬ ಚಿಂತೆ ತಮಗೆ ಹತ್ತಿದೆಯೆಂದರವರು. "ಹಿಲಸಾದಲ್ಲಿಯೆ ನೆಲೆಯೂರಿ ಮನೆಯಿಂದ ಮನೆಗೆ ಹೋದರೆ ಸಂಕಲ್ಪಿತ ಪರಿವರ್ತನೆ ಸಿದ್ಧಿಸಬಹುದೆಂದು ನನಗೆ ಕೆಲವರು ಹೇಳಿದರು. ಇದರಲ್ಲಿ ಸತ್ಯಾಂಶವಿದ್ದರೂ ನನ್ನ ಸ್ವಂತ ದೇಹ ದೌರ್ಬಲ್ಯದ ಕಾರಣದಿಂದ ಈ ಸೂಚನೆಯನ್ನು ಪಾಲಿಸುವದು ನನಗೆ ಅಸಾಧ್ಯವಾಗಿದೆ. ಆದುದರಿಂದೆ ಇಲ್ಲಿ ಕೂಡಿದ ಜನಸಂದಣಿಗೆ ನಾನೆಂದ ಮಾತುಗಳು ಮನವೊಪ್ಪಿ ಅವರು ಮುಸ್ಲಿಂ ನಿರಾಶ್ರಿತರನ್ನು ತಿರುಗಿ ಕರೆಸಿಕೊಳ್ಳಲೆಂದು ಹಾರೈಸುವೆ."

"ಅನೇಕ ಮುಸ್ಲಿಮರು ಈ ಸ್ಥಳದ ಪರಿಸ್ಥಿತಿಯನ್ನು ನೋಡಿಕೊಂಡು ಹೋಗಲು ಬಂದವರು ಅದಿನ್ನೂ ಸುಧಾರಿಸದಿದ್ದುದನ್ನು ಕಂಡು ಮರಳುತ್ತಿದ್ದಾರೆಂದು ಕೇಳುತ್ತೇನೆ. ನೀವು ಹಾಳಾದ ಮನೆಗಳನ್ನು ಹೊಸದಾಗಿ ಕಟ್ಟಲು ಸಹಾಯಮಾಡಬೇಕೆಂದು ಬಯಸುವೆ. ಮಳೆಗಾಲ ಸಮಿಪಿಸುತ್ತಿದೆ. ಆದುದರಿಂದ ನೀವು ಚಟಪಟನೆ ಕೆಲಸ ಮಾಡಬೇಕು. ಅಲ್ಲಿವರೆಗೆ ಮುಸ್ಲಿಂರನ್ನು ನಿಮ್ಮ ನಿಮ್ಮ ಮನೆಗಳಲ್ಲೆ, ನಿಮ್ಮ ಬಂಧುಬಾಂಧವರಿಗೆ ಎಡೆ ಕೊಡುವಂತೆ, ತಂದಿರಿಸಿಕೊಳ್ಳುವದು. ನಿಮ್ಮ ಕರ್ತವ್ಯ. ಹಿಂದೆ ಹಿಂದೂ ಮುಸಲ್ಮಾನರು ಬಿಹಾರದಲ್ಲಿ ಬಂಧು ಬಾಂಧವರಂತೆ ಬದುಕಾಳಿದ್ದು ಇವೆ. ನೀವು ಹಳೆಯಗಾಲವನ್ನು ಪುನರುಜ್ಜೀವನಗೊಳಿಸಬಾರದೇಕೆ?

"ಹಿಂದುಗಳು ಬಾಂಧವ್ಯದ ಭಾವನೆಯನ್ನು ತೋರಿಸಿದರೆ, ಅದು ಬಿಹಾರಕ್ಕೂ ಒಳಿತು, ಹಿಂದುಸ್ತಾನಕ್ಕೂ ಒಳಿತು, ಜಗತ್ತಿಗೂ ಒಳಿತು" ಎಂದು ಗಾಂಧೀಜಿ ಮುಗಿಸಿದರು.

೨೧—೩—೪೭

ಇಂದು ಸಂಜೆ ಗಾಂಧೀಜಿ ವಿಕ್ರಮದಲ್ಲಿ ಪ್ರಚಂಡ ಸಭೆಯಲ್ಲಿ ಭಾಷಣಮಾಡಿದರು. ಪ್ರಾರ್ಥನಾಕಾಲದಲ್ಲಿ ಮೊದಲಿಂದ ಕೊನೆವರೆಗೆ ನಿಶ್ಯಬ್ದವಾಗಿ ಉಳಿದುದಕ್ಕೂ ರಾಮಧುನಿ ಹಾಡುವಾಗ ಲಯತಪ್ಪದೆ ತಾಳಹಾಕಿದ್ದಕ್ಕೂ ಅವರು ನೆರೆದವರನ್ನು ಅಭಿನಂಧಿಸಿದರು.

ಸುತ್ತಲೂ ಹುಚ್ಚು ಅಮರಿದ್ದಾಗ, ಇಲ್ಲಿ ಕೆಲವು ಕಾಂಗ್ರೆಸಿಗರ ಹಾಗು ಹಿಂದುಗಳ ಪರಿಶ್ರಮದ ಫಲವಾಗಿ ತಮ್ಮ ಬುದ್ಧಿಯನ್ನು ಅಂಕೆಯಲ್ಲಿಟ್ಟುಕೊಂಡದ್ದುದಕ್ಕಾಗಿಯೂ ವಿಕ್ರಮದ ಜನರನ್ನು ಗಾಂಧೀಜಿ ಅಭಿನಂದಿಸಿದರು. ಆದರೂ ಅಲ್ಪಸ್ವಲ್ಪ ಉದ್ವೇಗ ಇಲ್ಲದಿಲ್ಲ. ಕೆಲ ಮುಸ್ಲಿಮರು ಭಯದಿಂದ ಊರು ಬಿಟ್ಟು ಹೋಗಿದ್ದರು. ಮನೆಗಳೆಲ್ಲ ಇದ್ದಂತೆಯೆ ಇದ್ದುದರಿಂದ ಅವುಗಳನ್ನು ಮತ್ತೆ ಕಟ್ಟುವ ಪ್ರಶ್ನೆ ಏಳಲಿಲ್ಲ. ಆದರೂ ಮುಸ್ಲಿಮರು ಬಿಟ್ಟು ಹೋದ ಓಣಿಗಳ ಕಸ ಬಳಿದು ಸ್ವಚ್ಛ ಮಾಡಿ ಹಿಂದುಗಳು, ಅಲ್ಲಿಯ ಮುಸ್ಲಿಮರು ತಿರುಗಿ ಬರುವಂಥ ವಾತಾವರಣವನ್ನು ಕಲ್ಪಿಸಬಹುದೆಂದು ಗಾಂಧೀಜಿ ಸೂಚಿಸಿದರು.

ಆ ಮೇಲೆ ಅವರು ನಿನ್ನೆ ಹಿಲಸಾದಲ್ಲಿ ಬಿಟ್ಟಲ್ಲಿಂದ ತಮ್ಮ ಮಾತಿನ ಎಳೆಗಳನ್ನು ಮುಂದೆ ನೂಲತೊಡಗಿದರು. ಕಳೆದ ೬೦ ವರ್ಷಗಳಲ್ಲಿ ಅಂದರೆ ೧೮೮೫ ರಲ್ಲಿ ಅದು ಬಲು ಚಿಕ್ಕ ರೂಪದಲ್ಲಿ ತಲೆಯೆತ್ತಿದ ಮೇಲೆ ಲಕ್ಷಾಂತರ ಬೆಂಬಲಿಗರನ್ನು ಪಡೆದ ಇಂದಿನ ಪ್ರಚಂಡ ರೂಪಕ್ಕೆ ಬೆಳೆದು ನಿಲ್ಲುವ ವರೆಗಿನ ಉಜ್ವಲ ಇತಿಹಾಸದಲ್ಲಿ ನಡೆಸಿಕೊಂಡು ಬಂದ ತ್ಯಾಗ ತಪಸ್ಸೇವೆಗಳ ಪರಂಪರೆಯನ್ನು, ಕಾಂಗ್ರೆಸ್ಸು ಅಧಿಕಾರ ಸ್ವೀಕಾರ ಮಾಡಿದಂದಿನಿಂದ ತ್ಯಜಿಸಿಬಿಟ್ಟಿದೆಯೆಂದು ಹಲವರ ಬಾಯಿಂದ ನಾನು ಕೇಳಿದ್ದೇನೆ. ಅದು ಅಧಿಕಾರ ಲೋಲುಪರ ಮತ್ತು ನೌಕರಿಗೆ ಹಾತೊರೆಯುವ ಸ್ವಾರ್ಥಿಗಳ ಸಂಸ್ಥೆಯಾಗಿ ಭರದಿಂದ ರೂಪುಗೊಳ್ಳುತ್ತಿದೆಯೆಂದು ಅವರು ಹೇಳುತ್ತಾರೆ. ಜನತೆಯ ಸೇವಕರಾಗಿ ಉಳಿಯುವ ಬದಲು ಕಾಂಗ್ರೆಸ್ಸಿಗರು ಅದರ ಪ್ರಭುಗಳಾಗಿ, ಸ್ವಾಮಿಗಳೂ ಆಗಿಬಿಟ್ಟಿದ್ದಾರೆ. ಸಾಲದ್ದಕ್ಕೆ ಕಾಂಗ್ರೆಸ್ಸು ಹಲಬಗೆಯ ಅಲ್ಪ ಕುತಂತ್ರಗಳಿಂದಲೂ ಗುಂಪುಗುಂಪುಗಳ ವೈಷಮ್ಯದಿಂದಲೂ ಹರಿಹಂಚಾಗಿ ಹೋಗಿದೆ. ನಾನು ಹೇಳುವದು ಎಲ್ಲ ಪ್ರಾಂತಗಳಿಗೂ ಅನ್ವಯಿಸುತ್ತದೆ. ಇದು ಹೀಗೆಯೆ ಸಾಗಿದರೆ ಹಿಂದೀಯರು ಕೈಗೆ ಬರಲಾಚೆ ಅಮೂಲ್ಯ ವಸ್ತುವನ್ನು ಕಾಯ್ದುಕೊಳ್ಳಲಾರದವರಾದಾರೆಂದು ನನಗೆ ಸಂಶಯವಾಗುತ್ತದೆ. ಅದಕ್ಕೆ ಜ್ಞಾನ, ತಿಳುವಳಿಕೆ, ಮನಃಶುದ್ಧಿಗಳು ಬೇಕಾಗುತ್ತವೆ. ಕಾಂಗ್ರೆಸ್ಸಿನಲ್ಲಿಯೂ ಲೀಗಿನಲ್ಲಿಯೂ ಅವಶ್ಯಕ ಪಾರಿಶುದ್ಧ್ಯವೂ ಸಾಮರ್ಥ್ಯವೂ ಉಳಿಯದಿದ್ದರೆ ಅವುಗಳ ಬೆರಳುಗಳಿಂದ ಅಧಿಕಾರ ಜಾರಿಹೋಗುವದು ಖಂಡಿತ. ಬ್ರಿಟಿಶರಂತೆ ಬಂದೂಕಿನ ಬಲದಿಂದ ಅದನ್ನು ಉಳಿಸಿಕೊಳ್ಳುವ ಆಸೆಯನ್ನು ಅವು ಕಟ್ಟಿಕೊಳ್ಳಲಾರವು. ಅವುಗಳ ಅಧಿಕಾರವೆಲ್ಲ, ಜನರಿಂದಲೇ ಉಗಮಿಸಿದ್ದು. ಅವರಿಗೆ ಈ ಕ್ಷಣ ಅದರ ಅರಿವಿಲ್ಲದೆ ಹೋದರೂ ಜನರೇ ನಿಜವಾದ ಸ್ವಾಮಿಗಳು. ಕಾಂಗ್ರೆಸ್ಸು ವರ್ಷಗಟ್ಟಲೆ ಸೇವೆ ಮಾಡಿದವರ ವಿಶ್ವಾಸವನ್ನು ಸಂಪಾದಿಸಿಕೊಂಡಿತು. ಅದು ಅವರಿಗೆ ವಿಶ್ವಾಸಘಾತ ಮಾಡಿದರೆ, ಆಗ ಜನರು ಸಮಾಜದಲ್ಲಿರುವ ಸಂಭಾವಿತ ಪುಂಡರ ಬಲೆಯಲ್ಲಿ ಬೀಳುವರು. ಆ ಪುಂಡರ ಕೈಗೇ ಎಲ್ಲ ಅಧಿಕಾರವೂ ಸೇರುವುದು," ಎಂದು ಗಾಂಧೀಜಿ ಎಚ್ಚರಿಕೆ ಕೊಟ್ಟರು.

ತಾವು ಬಿಹಾರಕ್ಕೆ ಬಂದದ್ದು ಹಿಂದೂ—ಮುಸ್ಲಿಂ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ. ಆದರೆ ವಿಷಯಗಳು ಒಂದಕ್ಕೊಂದು ಗೊಣಸುಗೂಡಿರುವದರಿಂದ ಇತರ ವಿಷಯಗಳನ್ನು ತಾವು ಎತ್ತಿಕೊಳ್ಳಬೇಕಾಗುತ್ತದೆ. ಆದರಿಂದಲೇ ತಾವು ಕಾಂಗ್ರೆಸ್ಸಿನಲ್ಲಿ ತಲೆಹಾಕುತ್ತಿರುವ ಭ್ರಷ್ಟತೆಯನ್ನು ಎತ್ತಿತೋರಿಸಬೇಕಾಯಿತು, ಎಂದು ಅವರು ವಿವರಿಸಿದರು. ಕಾಂಗ್ರೆಸ್ಸು ಪಕ್ಷಗಳ ಕುತಂತ್ರಗಳಿಂದ ದೂರವಾಗಿರಬೇಕು. ಅದು ಇಡಿ ಹಿಂದುಸ್ತಾನದ ಐಕ್ಯ ಮತ್ತು ಸೇವೆಯ ಕುರುಹಾಗಿರಬೇಕೆಂದು ಅವರು ಹಾರೈಸಿದರು.

೨೨—೩—೪೭

ಫತ್ತೇಪುರದಲ್ಲಿ ಸೇರಿದ ಪ್ರಚಂಡ ಕೂಟಕ್ಕೆ ಇಂದು ಗಾಂಧೀಜಿ, ತಾವು ದಿನಾಲೂ ಬೇರೆ ಬೇರೆ ಸ್ಥಳಗಳಲ್ಲಿ ಪ್ರಾರ್ಥನೆ ನಡೆಸುವದರ ಪ್ರಯೋಜನವನ್ನು ಜನರು ಹೇಗೆ ತೆಗೆದುಕೊಳ್ಳಬಹುದೆಂದು ವಿವರಿಸಿದರು. "ಪ್ರಾರ್ಥನಾ ಸ್ಥಳದ ೫ ಮೈಲು ಸುತ್ತಳತೆಯೊಳಗಿನ ಜನರು, ನನ್ನನ್ನು ಕಾಣಲು ರಸ್ತೆಯ ಬದಿಯಲ್ಲಿ ಕಾಯುವ ಬದಲು ಪ್ರಾರ್ಥನೆಯಾಗುವಲ್ಲಿಗೆ ನಡೆದು ಬರುವ ಮನಸು ಮಾಡಿದರೆ—ಹೀಗೆ ಮಾಡುವದು ಅಸಾಧ್ಯವೇನೂ ಅಲ್ಲ—ದಾರಿಯುದ್ದಕ್ಕೂ ನನ್ನ ಶಾಂತಿಭಂಗವಾಗುವದೂ ತಪ್ಪೀತು, ಅವರಿಗಾದರೂ ನನ್ನ ಮಾತು ಕೇಳುವ ಹೆಚ್ಚಿನ ಲಾಭವೊಂದು ದೊರಕೀತು"

ಮುಂದುವರಿಯುತ್ತ, ಸಂತ್ರಸ್ತ ಭಾಗಗಳಲ್ಲಿ ಕೆಲಸ ಮಾಡಲು ಶಾಂತಿ ಸಮಿತಿಯೊಂದು ಸ್ಥಾಪಿಸಲ್ಪಟ್ಟದ್ದು ತಮಗೆ ಗೊತ್ತಿದೆಯೆಂದು ಅವರು ಹೇಳಿದರು. ಅಂಥ ಸಮಿತಿಯಲ್ಲಿ ಎಲ್ಲ ವರ್ಣಸ್ತ ಹಿಂದುಗಳೂ ಪ್ರಾಂತದಲ್ಲಿರುವ ಎಲ್ಲ ಮುಸ್ಲಿಮರೂ—ಹೇಳಿ ಕೇಳಿ ಅವರ ಸಂಖ್ಯೆ ಅತ್ಯಲ್ಪವಾಗಿದೆ—ಇರಬೇಕೆಂದು ಅವರು ಅಭಿಪ್ರಾಯಪಟ್ಟರು.

ಆ ಮೇಲೆ, ಒಬ್ಬ ತಂಗಿಯ ಪ್ರಶ್ನೆಗುತ್ತರವಾಗಿ ಸ್ತ್ರೀಯರು ಹೇಗೆ ಪುನರ್ನಿವೇಶನ ಕಾರ್ಯದಲ್ಲಿ ಸಹಾಯ ಮಾಡಬಹುದೆಂದು ಅವರು ವಿವರಿಸಿದರು. ಸುದೈವದಿಂದ ಹಿಂದುಗಳಲ್ಲಿ ಘೋಸಾಪದ್ಧತಿ ಇಲ್ಲ, ನಿಜವಾದ ಘೋಷಾ ಎಂದರೆ ಹೃದಯದ್ದು. ಯಾವದೇ ಧರ್ಮದಲ್ಲಿ ಘೋಷಾಕ್ಕೆ ಏನೇ ಅನುಮತಿಯಿರಲಿ, ಇಂದಿನ ದಿನಮಾನಕ್ಕೆ ಅದು ಸರ್ವಥಾ ಒಗ್ಗುವದಿಲ್ಲ.

ಆದುದರಿಂದ ಹಿಂದೂ ಸ್ತ್ರೀಯರು ಮುಸ್ಲಿಂ ಭಗಿನಿಯರಲ್ಲಿ ಬೆರೆತು ಅವರ ಸುಖದುಃಖಗಳಲ್ಲಿ ಪಾಲುಗಾರರಾಗಬಹುದು, ಆಗಬೇಕು. "ಮಸೋರಿಯ ಹಾಲು ಹಂಚುವ ಕೇಂದ್ರದಲ್ಲಿ ಹಿಂದೂ ಹುಡುಗರು ಮೊದಲು ಬಳಸಿದ ಕಪ್ಪುಗಳಲ್ಲಿ ಹಾಲು ತೆಗೆದುಕೊಳ್ಳಲು ಮುಸ್ಲಿಂ ಹುಡುಗರು ಆಕ್ಷೇಪ ಎತ್ತುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಇದರಿಂದ ಹಿಂದುಗಳು ಸಿಟ್ಟಾಗುವ ಕಾರಣವಿಲ್ಲ. ಏಕೆಂದರೆ ಅವರು ಮುಸ್ಲಿಮರ ಮೇಲೂ ಇತರರ ಮೇಲೂ ಉಪಯೋಗಿಸುವ ಅಸ್ಪೃಶ್ಯತೆಯ ರೂಢಿಯೇ ಮುಸ್ಲಿಮರಿಗೂ ಅಂಟಿಕೊಂಡಿದೆ ಹೊರತು ಬೇರೇನಿಲ್ಲ. ಇಲ್ಲದಿದ್ದರೆ ಅಸ್ಪೃಶ್ಯತೆಯೆಂಬುದು ಇಸ್ಲಾಂ ಧರ್ಮದ ತತ್ವಕ್ಕೆ ಬಾಹಿರವಾದುದು. ಈ ಹೊಸ ವಿಷಾದಕರ ಘಟನೆಯಿಂದ ನೊಂದು ವಿಮುಖರಾಗದೆ ಹಿಂದೂ ಸ್ತ್ರೀಯರು ಪ್ರೇಮದಿಂದಲೂ ಸೇವಾಬುದ್ಧಿಯಿಂದಲೂ ಪ್ರೇರಿತರಾಗಿ, ತಮ್ಮ ಮುಸ್ಲಿಂ ಭಗಿನಿಯರ ಮನಸಿನಲ್ಲಿ ಸೌಹಾರ್ದ ಉಂಟಾಗುವಂತೆ ಮಾಡುವ ಉದಾತ್ತ ಕಾರ್ಯವನ್ನು ಕೈಕೊಳ್ಳಬೇಕು."

—೯ ನೇ ಪುಟಕ್ಕೆ

ಬಿಹಾರ ಯಾತ್ರೆ

(೮ ನೇ ಪುಟದಿಂದ)

ಬಳಿಕ ಗಾಂಧೀಜಿ ಇದೀಗ ಅಸ್ಪತ್ರೆಯಿಂದ ತಿರುಗಿ ಬಂದ ತಮ್ಮ ಮೊಮ್ಮಗಳು ತಿಳಿಸಿದ ಘಟನೆಯೊಂದನ್ನು ಪ್ರಸ್ತಾಪಿಸಿದರು. ಆ ಘಟನೆಯು ದುಃಖಕರ ಸಂಕೇತಾರ್ಥವಿಷ್ಟೆ: ಅಧಿಕಾರಗ್ರಹಣ ಮಾಡಿದಂದಿನಿಂದ ಕಾಂಗ್ರೆಸ್ಸಿಗರು ಎಲ್ಲವೂ ತಮಗೆ ಸೇರಿದ್ದೆಂದು ಭಾವಿಸತೊಡಗಿದ್ದಾರೆ. ಒಂದು ಬಗೆಯಿಂದ ನೋಡಿದರೆ ಇದು ಸೂಕ್ತವೆ. ಆದರೆ ಶಿಸ್ತು ಸಂಯಮಗಳನ್ನೆಲ್ಲ ಗಾಳಿಗೆ ತೂರಿ ಬಿಡಬೇಕೆಂದು ಇದರ ಅರ್ಥವಲ್ಲ. ಶಿಸ್ತೂ ವಿನಯವೂ ಕಾಂಗ್ರೆಸ್ಸಿಗರಿಗೆ ಹೆಮ್ಮೆಯ ವಸ್ತುಗಳಾಗಿರಬೇಕು.

ಬಳಿಕ ಇತರ ಪ್ರಾಂತಗಳಂತೆ ಬಿಹಾರವನ್ನೂ ವ್ಯಾಪಿಸಿರುವ ಕಳ್ಳಪೇಟೆಯ ಕಡೆಗೆ ಗಾಂಧೀಜಿ ಹೊರಳಿದರು. ಉಪವಾಸಬಿದ್ದರೂ ಕಳ್ಳಪೇಟೆಯಲ್ಲಿ ಏನನ್ನೂ ಕೊಳ್ಳಲಿಕ್ಕಿಲ್ಲವೆಂದು ಜನರು ಶಪಥ ಮಾಡಿದರೆ ಒಡನೆ ಈ ದುವ್ಯಾ೯ಪಾರ ಕೊನೆಗೊಳ್ಳುವದು. ವ್ಯಾಪಾರಿವರ್ಗಕ್ಕೂ ಪ್ರಾಮಾಣಿಕತೆಯ ಉಪದೇಶವನ್ನು ಅವರು ಕೊಟ್ಟರು. ದೇಶದಲ್ಲಿ ಅಹಾರ ವಸ್ತುಗಳ ಕೊರತೆ ತೀಕ್ಷ್ಣವಾಗಿರುವಾಗ ಕಳ್ಳಪೇಟೆಯಲ್ಲಿ ಮಾರುವದು ಪರಮ ಪಾತಕ. ಹೊರಗಿನಿಂದ ಅಹಾರ ಧಾನ್ಯ ಬಾರದಿದ್ದರೆ, ಉಪವಾಸವನ್ನು ತಡೆಯುವ ಹಾದಿಯೇ ತಮಗೆ ಹೊಳೆಯುವದಿಲ್ಲೆಂದು ಡಾ. ರಾಜೇಂದ್ರ ಪ್ರಸಾದರು ಮದ್ರಾಸಿನಲ್ಲಿ ಹೇಳಿದರು. "ಆದರೆ ಈ ನಿರಾಶೆಯ ಕ್ರಂದನಕ್ಕೆ ನಾನು ಬೆಂಬಲಕೊಡಲಾರೆ" ಎಂದರು ಗಾಂಧೀಜಿ "ನನ್ನ ಸೂಚನೆಯನ್ನು ಎಲ್ಲರೂ ಅನುಸರಿಸದರೆ ಭಿಕ್ಷುಕತನಕ್ಕೆ ಇಳಿಯುವ ಬದಲು ತನಗೆ ಬೇಕಾದ ಧಾನ್ಯವನ್ನೆಲ್ಲ ಬೆಳೆಸಿಕೊಳ್ಳಬಲ್ಲ ಈ ದೇಶದಲ್ಲಿ ಯಾರೂ ಉಪವಾಸ ಬೀಳಬೇಕಿಲ್ಲ. ಅಗಸಿಯನ್ನು ಕೊಟ್ಟರೆ ಮಾತ್ರ ಅಹಾರ ಧಾನ್ಯವನ್ನು ಹಿಂದುಸ್ತಾನಕ್ಕೆ ಮಾರುವೆನೆಂದು ಅಸ್ಟ್ರೇಲಿಯಾದ ಹೇಳಿಕೆ. ಅತ್ಯಂತ ಆಪತ್ತಿಯದಲ್ಲಿರುವ ದೇಶದೊಡನೆ ವ್ಯಾಪಾರ ಮಾಡುವಾಗ ಈ ರೀತಿ ವ್ಯಾಪಾರಿ ರೀತಿಯನ್ನು ಅನುಸರಿಸುವದು ಯಾವ ದೇಶಕ್ಕೂ ಶೋಭಿಸುವದಿಲ್ಲ. ಆದರೂ ಜಗತ್ತಿನ ರೀತಿಯೆ ಹೀಗಿದೆ ಎಂದರು ಗಾಂಧೀಜಿ.

೨೩—೫—೪೭

ಇಂದು ಸಂಜೆಯ ಪ್ರಾರ್ಥನೆ ಮನೇರಿಯಲ್ಲಿ ಆಯಿತು. ಆದರಿಂದ ಮೊದಲು ಗಾಂಧೀಜಿ ಈ ಊರಿನಲ್ಲಿ ೮೦೦ ವರ್ಷಗಳ ಹಿಂದೆ ಬಾಳಿದ್ದ ಸಾಧು ಮಖದೂಂ ಮನೇರಿಯವರನ್ನು ಸ್ಮರಿಸಿಕೊಂಡರು. ಮುಂದುವರಿಯುತ್ತ ಅವರು ಹೇಳಿದ್ದು: "ಮನೇರದಲ್ಲಿ ಅಲ್ಪಸ್ವಲ್ಪ ಉದ್ವೇಗವಿದ್ದರೂ ಕಾಂಗ್ರೆಸ್ಸಿಗರ ಪ್ರಯತ್ನದಿಂದ ಗಲಭೆಗಳು ಜರಗಲಿಲ್ಲ. ನಿನ್ನೆಯೆ ನಾನು ಹೇಳಿದಂತೆ ವಿಷಯಗಳು ಒಂದಕ್ಕೊಂದು ತಳಕು ಬಿದ್ದಿರುವದರಿಂದ ನನ್ನ ಸದ್ಯದ ಕಾರ್ಯವಾದ ನಿರಾಶ್ರಿತರ ಪುನರ್ನಿಯೋಜನದ ಸಂಗಡ ಬೇರೆ ಪ್ರಶ್ನೆಗಳನ್ನೂ ನಾನು ಎತ್ತಿಕೊಳ್ಳಬೇಕಾಗಿದೆ. ಇಲ್ಲಿ ಜಮೀನ್ದಾರರ ವಿಷಯವನ್ನು ಪ್ರಸ್ತಾವಿಸುತ್ತೇನೆ.

"ಬಿಳಿಯ ನೀಲಿ ತೋಟಗಾರರ ಶತಮಾನವ್ಯಾಪಿಯಾದ ರಾಜ್ಯ, ಜನತೆಯ ಹಾಗು ದಿವಂಗತ ವ್ರಜಕಿಶೋರ ಮತ್ತು ಡಾ. ರಾಜೇಂದ್ರ ಪ್ರಸಾದರೇ ಮೊದಲಾದ ಮುಂದಾಳುಗಳ ದೃಢ ಇಚ್ಛೆ ಮತ್ತು ಏಕತ್ರಿತ ಕ್ರಿಯೆಯ ಫಲವಾಗಿ ಕೊನೆಗೊಂಡ ಸಂಗತಿ ನಿಮಗೆಲ್ಲರಿಗೂ ಗೊತ್ತು. ಆದರೆ ಆ ಬಿಳಿ ರಾಜರ ದಬ್ಬಾಳಿಕೆಯನ್ನು ಹಿಂದೀ ಜಮೀನದಾರರು ಮುಂದೆ ಸಾಗಿಸುತ್ತಿದ್ದಾರೆಂದೂ ಅವರು ರೈತರನ್ನು ತಮ್ಮ ಸೇವಕರ ಮೂಲಕ ಪೀಡಿಸಿ ಅಧಿಕಾರಿಗಳನ್ನು ಒಡೆದುಕೊಳ್ಳುವ ಮೂಲಕ ತಮ್ಮ ಅನ್ಯಾಯಗಳ ಶಿಕ್ಷೆಯಿಂದ ಪಾರಾಗುತ್ತಿದ್ದಾರೆಂದೂ ಕೇಳುತ್ತೇನೆ. ಇದು ನಿಜವಾದರೆ ಜಮೀನದಾರರು ತಮ್ಮ ಚಿತೆಗೆ ತಾವೇ ಕಟ್ಟಿಗೆ ಕೂಡಹಾಕುತ್ತಿದ್ದಾರೆ. ಅವರು ತಮ್ಮ ಒಕ್ಕಲುಗಳ ವಿಶ್ವಸ್ತರಾಗಿ ನಡೆದುಕೊಂಡರೆ ಮಾತ್ರ ಅವರಿಗೆ ಉಳಿಯುವ ಆಶೆಯಿದೆ.

"ಆದರೆ ಸತ್ಯಸಂಧನೂ ನ್ಯಾಯಶೀಲನೂ ಆದ ನಾನು ಜಮೀನದಾರರು ತೋರಿಸುವ ಕೆಲ ವಂಶಗಳನ್ನೂ ಬೆಳಕಿಗೆ ತರಬೇಕಾಗಿದೆ. ನಾನು ಜನಸಾಮಾನ್ಯರಲ್ಲಿ ಸೇರಿಹೋದವನೆಂದು ಗೊತ್ತಿದ್ದರೂ ವಿಶ್ವಮಿತ್ರನಾದ ನನ್ನಲ್ಲಿ ಜಮೀನದಾರರೂ ತಮ್ಮ ಗೆಳೆಯನನ್ನು ಕಾಣುತ್ತಾರೆ. ಕಾಂಗ್ರೆಸ ರಾಜ್ಯ ಬಂದಂದಿನಿಂದ ಅದರ ಬೆಂಬಲಿಗರಾದ ರೈತ ಜನರು ತಾವು ಬೇಕಾದು ಮಾಡಬಹುದೆಂಬ ಭಾವನೆಯನ್ನು ಕಟ್ಟಿಕೊಂಡು ಜಮೀನದಾರರ ಎಲ್ಲ ಸೊತ್ತುಗಳನ್ನೂ ಕಸಿದುಕೊಳ್ಳಬೇಕೆಂಬ, ಅವರ ಬೆಳೆಗಳನ್ನು ನಾಶಗೊಳಿಸಿಯೂ ಇತರ ಹಿಂಸಾಕೃತ್ಯಗಳಿಂದಲೂ ಅವರನ್ನು ಹಣ್ಣುಮಾಡಬೇಕೆಂಬ ಹವ್ಯಾಸಕ್ಕೆ ಬಿದ್ದಿದ್ದಾರೆಂದು ಅವರು ದೂರುತ್ತಾರೆ. ಅದೇ ಪ್ರಕಾರ ಸುಳ್ಳು ಪ್ರಚಾರಕ್ಕೆ ಬಲಿಬಿದ್ದು ಗಿರಣಿಗಳಲ್ಲಿನ ಕೂಲಿಕಾರರೂ ಅವುಗಳಿಗೆ ಧಕ್ಕೆ ಮಾಡಿ ಅವುಗಳಿಗೆ ತಾವೇ ಒಡೆಯರಾಗಬೇಕೆಂದು ಹವಣಿಸುತಿದ್ದಾರೆ.

"ಜನರಲ್ಲಿ ಒಂದಾಗಿರುವ ನಾನು ಇಂಥ ರೈತರಿಗೂ ಕೂಲಿಕಾರರಿಗೂ ಈ ಹುಚ್ಚುಬಟ್ಟೆ ಧೋರಣೆಯಿಂದ ಅವರ ಧ್ಯೇಯವೇ ಕೆಡುವದೆಂದು ಎಚ್ಚರ ಕೊಡದಿರಲಾರೆ. ಅವರ ನಿಜವಾದ ಜನತೆಯೇನೊ ಸತ್ಯ. ಆದರೆ ಅವರಿಗೆ ತಮ್ಮ ಶಕ್ತಿಯ ಅರಿವಿರಬೇಕು. ಹುಚ್ಚುಗೆಟ್ಟ ಲಕ್ಷಾಂತರ ಜನ ಸೇರಿ ಕೈಬೆರಳಲ್ಲೆಣಿಸುವಷ್ಟಿರುವ ಜಮೀನುದಾರರನ್ನು ನಾಶಮಾಡುವದೇನೂ ದೊಡ್ಡದಲ್ಲ. ಆದರೆ ಕೊನೆಗೆ ಅವರ ಹುಚ್ಚು ಅವರ ಮೇಲೆಯೆ ತಿರುಗಿ ಬೀಳದಿರದು.

"ರಾಷ್ಟ್ರಕ್ಕೆ ದೊರೆತಿರುವ ಅಧಿಕಾರವನ್ನು ಸ್ವತಃ ತೂಗಿಸಿಕೊಂಡು ಹೋಗಲಾರದ ಆದರೆ ತೂಗಿಸಿಕೊಂಡು ಹೋಗುವವೆಂಬ ಇತರರನ್ನೂ ಹಾಗೆ ಮಾಡಲೂ ಬಿಡದ ಕೆಲವರು ಸರಕಾರವನ್ನು ಯದ್ವಾತದ್ವಾ ಟೀಕಿಸುವದನ್ನೂ ಕೇಳುತಿದ್ದೇನೆ.

"ಈ ಮೂವರೂ— ಅಂದರೆ ಜಮೀನದಾರರೂ ರೈತರೂ ಸರಕಾರವೂ— ಬಿಹಾರದಲ್ಲಿ ತಂತಮ್ಮ ಕರ್ತವ್ಯವನ್ನು ಪೂರೈಸಿದರೆ ಅದು ಇಡಿ ಹಿಂದುಸ್ತಾನಕ್ಕೆ ಉದಾತ್ತ ಆದರ್ಶವಾಗಿ ಎದ್ದು ನಿಂತೀತು."

ನ್ಯೂಯಾರ್ಕಿನಮೇಲೆ ಮೃತ್ಯುಲೋಕದ ಮಂಜು

[ಇದು 'ಕೋಸ್ಟ್ ಆರ್ಟಿಲ್ಲರಿ ಜರ್ನಲ್' ಎಂಬ ಪತ್ರಿಕೆಗೆ ಲೆ. ಕರ್ನಲ್ ಡೇವಿಡ್ ಬಿ. ಪಾರ್ಕರರು ಬರೆದುಕೊಟ್ಟ ಲೇಖನವನ್ನು ಏಪ್ರಿಲ್ ೪೭ ರ 'ರೀಡರ್ಸ್ ಡಾಯಿಜೆಸ್ಟ್' ಪತ್ರಿಕೆಯಲ್ಲಿ ಸಂಕ್ಷಿಪ್ತವಾಗಿ ಮಾಡಿ ಸಾರಾಂಶ ರೂಪದಿಂದ ಕೊಟ್ಟದ್ದು.

ವಿ. ಜಿ. ಡಿ.]

ಒಬ್ಬ ಭಾವೀ ಚರಿತ್ರಕಾರನ ಟಿಪ್ಪಣಿ ಪುಸ್ತಕದಿಂದ ತೆಗೆದದ್ದು

೧೯೫೩ ರ ಫೆಬ್ರುವರಿ ತಾ. ೨೫ ನೆಯ ದಿನ ಬೆಳಿಗ್ಗೆ ೩॥ ಗಂಟೆಗೆ ನ್ಯೂಯಾರ್ಕ ನಗರದ ಕೆಳಭಾಗದ ನಿವಾಸಿಯಾದ ರೋಜರ್ ಜೋನ್ಸ್ ಎಂಬವನು ಕಾಲು ಗಂಟೆಯ ವರೆಗೆ ಒಂದು ವಿಧದ ಹೇಳಲಾಗದ ದುರ್ಧರವಾದ ದುರ್ವಾಸನೆಯ ಕಾಟದಲ್ಲಿ ಸಿಕ್ಕಿ ಎಚ್ಚೆತ್ತನು. ಪುನ್ಹ ಅವನು ಹಾಸಿಗೆಯ ಬಳಿ ಹೋದಾಗ ಹತ್ತಿರದ ಕಿಟಕಿಯ ಮೂಲಕ ಸಾಂದ್ರವಾದ ಮಂಜಿನ ಗಾಳಿಯು ಒಳಮಗ್ಗುತ್ತಿದ್ದುದನ್ನು ಕಂಡನು. ಮಲಗುವಾಗ ರಾತ್ರಿಯು ವಾತಾವರಣ ತಿಳಿಯಾಗಿತ್ತು. ಮತ್ತು ಬಲವಾದ ಗಾಳಿಯು ಒಂದೇ ಸಮನಾಗಿ ಬೀಸುತ್ತಿತ್ತು; ಆದುದರಿಂದ ಆಗಿನ ಬದಲಾವಣೆಯಿಂದ ಬಹಳ ಆಶ್ಚರ್ಯಪಟ್ಟನು.

ನ್ಯೂಯಾರ್ಕ ಪಟ್ಟಣದ ಬಂದರಿನ ಮುಖ್ಯಾಧಿಕಾರಿಗಳಾದ ಯು. ಮ್ಯಾಂಚೆಸ್ಟರನು ೩—೪೦ಕ್ಕೆ ಸಮುದ್ರದ ದಂಡೆಯತ್ತ ನಡೆದರು. ಕೆಳಗಿನ ನೌಕರರು ಭಯಗ್ರಸ್ತರಾಗಿ ಟೆಲಿಫೋನಿನ ಮೂಲಕ ಕರೆದ ಕರೆಯಿಂದ ಅವರು ಹಾಸಿಗೆ ಬಿಟ್ಟೇಳಬೇಕಾಯಿತು. ದೊಡ್ಡ ತೆರೆಯೊಂದರ ಹೊಡೆತಕ್ಕೆ ಸಿಕ್ಕಿದ್ದ "ಪಾಯರ್ ೧೦" ಎಂಬ ಸ್ಥಳದಲ್ಲಿ ಅವರೆಲ್ಲ ಮ್ಯಾಂಚೆಸ್ಟರರಿಗೆ ಭೆಟ್ಟಿಯಾದರು. ಕತ್ತಲೆ ಮತ್ತು ಮಂಜು ಬಹಳವಾಗಿದ್ದರೂ ಹಡ್ಸನ್ ಕೊಲ್ಲಿಯ ಸನಿಹದಲ್ಲಿ ಮತ್ತಷ್ಟು ಅಪಾಯ ಸಂಭವಿಸಿದೆಯೆಂದು ಮುಖ್ಯಾಧಿಕಾರಿಗಳಿಗೆ ಕಾಣಿಸಿತು. ಸಮುದ್ರದಲ್ಲಿ ಬಹು ದೂರ ಒಂದೆಡೆ ಭೂಕಂಪವಾಗಿದ್ದು ಅದರಿಂದ ಒಂದು ಭರತದ ದೊಡ್ಡ ತೆರೆಯೆದ್ದಿದೆಯೆಂದು ಗಾಬರಿಯಾದ ಜನರು ಅವರಿಗೆ ತಿಳಿಸಿದರು. ಅವರು ತಮ್ಮ ಮೋಟಾರು ಕಾರಿನತ್ತ ನಡೆದಾಗ ನಡುವೆ ಆಕಸ್ಮಿಕವಾಗಿ ಕೆಟ್ಟವಾಸನೆಯೆದ್ದು ಅವರ ಮೂಗಿಗೆ ಬಡಿದು ಅವರಿಗೆ ಉಸಿರು ಬಿಡುವುದೇ ಕಷ್ಟವಾಯಿತು.

ಅದೇ ಸಮಯದಲ್ಲಿ ತಮ್ಮ ಪ್ರಯೋಗಶಾಲೆಯಲ್ಲಿ ಒಮ್ಮೊಮ್ಮೆ ಇಡಿಯ ರಾತ್ರಿ ಕೆಲಸ ಮಾಡುವ ಅಭ್ಯಾಸವಿದ್ದ ಕೊಲಂಬಿಯಾ ವಿಶ್ವವಿದ್ಯಾಲಯದ ರೇಡಿಯೋ ಶಾಸ್ತ್ರಜ್ಞನಾದ ಡಾ. ಹೀರಾವರ್ ಸ್ಟ್ಯಾಂಡ್‌ಬರ್ಗ ಎಂಬವರು ತಮ್ಮ ರೇಡಿಯೋ ಕ್ರಿಯೆಯನ್ನು ತೋರಿಸುವ ಮೂರು ಯಂತ್ರಗಳ ಮೇಲಿನ ಮುಳ್ಳುಗಳು ದೂರ ಸರಿದು ಹೋದದ್ದನ್ನು ಕಂಡರು. ಉಳಿದ ಉಪಕರಣಗಳನ್ನು ಗಡಿಬಿಡಿಯಿಂದ ಪರಿಶೀಲಿಸಿ ಆಗಿಂದಾಗ ನಗರವನ್ನು ಬಿಟ್ಟು ಹೊರಡಬೇಕೆಂದು ತಮ್ಮ ಹೆಂಡತಿಗೆ ಟೆಲಿಫೋನಿನ ಮೂಲಕ ತಿಳಿಸಿದರು. ಅನಂತರ ಪೋಲೀಸರು, ನಗರ ಸಭಾಧ್ಯಕ್ಷರು ಮತ್ತು ಸೈನ್ಯಾಧಿಕಾರಿಗಳು—ಇವರಿಗೆ ದೂರು ಕೊಟ್ಟರು. ಉತ್ತರ ಕೊಟ್ಟವರಲ್ಲಿ ಕೆಲವರು ಒಳ್ಳೆಯ ವಿನಯದಿಂದ ನಂಬಲಾರೆವೆಂದರು. ಮತ್ತೆ ಕೆಲವರು ನಿದ್ದೆಗೇಡಾಯಿತೆಂದು ಮುಳುಗುಟ್ಟಿದರು. ಸ್ಟ್ಯಾಂಡ್‌ಬರ್ಗರು ತಮ್ಮ ಪ್ರಯೋಗಶಾಲೆಯನ್ನು ಬಿಟ್ಟು ಹೊರಟರು. ನೋಡುತ್ತಿರುವ ಹಾಗೇ ಹಿಂದೆ ಎಂದೂ ಕಾಣದ ರೀತಿಯಲ್ಲಿ ನೈಋತ್ಯ ಮಾರುತದ ಮೇಲೆ ಮಂಜು ಏರಿ ಹೋಗುವುದನ್ನ ದಿಟ್ಟಿಸಿ ಅವರು ಬೆಕ್ಕಸಬೆರಗಾದರು.

೫ ಗಂಟೆಯೊಳಗೆ ನಗರ ಸಭಾಧ್ಯಕ್ಷರ ಕಾರ್ಯಾಲಯದಲ್ಲಿ ಪತ್ರಿಕೆಗಳು, ರೇಡಿಯೋ ಕೆಲಸಗಾರರು ಮತ್ತು ಇತರ ನೌಕರರು ತುಂಬಿ ಹೋದರು. ನಿಸ್ತೇಜವಾದ ಗಡ್ಡ ಬೆಳೆದ ಮುಖದ ಆ ಜನರು ಕೆಲವು ವಿಜ್ಞಾನಿಗಳು ಆಡುತ್ತಿದ್ದ ಮಾತುಗಳನ್ನು ಆಲಿಸುತ್ತಿದ್ದರು. ವಿಜ್ಞಾನಿಗಳ ನಡುವೆ ನಂಬಲರ್ಹವಾದ ಯಾವನೂ ಕಾಣದ ಆ ದುರ್ದಶೆಯಿಂದ ಮುಕ್ತನಾಗಿ ಬಾಳಲು ಪ್ರಯತ್ನಿಸುತ್ತಿದ್ದ ನೊಬೆಲ್ ಬಹುಮಾನ ಪಡೆದ ಸುಪ್ರಸಿದ್ಧ ವಿಜ್ಞಾನಿಯಾದ ಡಾ. ಫೆಲಿಕ್ಸ್ ನೋವಾಕ್ ಎಂಬಾತನೂ ಇದ್ದನು.

ಆ ದುರ್ಘಟನೆಯ ಕತೆಯನ್ನು ಸಂಪೂರ್ಣವಾಗಿ ಕೂಡಿಸಲು ಒಂದು ಇಡಿಯ ತಿಂಗಳು ಬೇಕಾಯಿತು. ನ್ಯೂಯಾರ್ಕ ಬಂದರಿನ ನೀರಿನೊಳಗೆ ಒಂದು ಅಣುಬಾಂಬು ನೆಲದಲ್ಲಿ ಹೊಕ್ಕಿತ್ತು. ಯಾವುದಾದರೂ ಜಲಾಂತರ್ಗಾಮಿಯಾದ ಹಡಗು ಅದನ್ನು ಅಲ್ಲಿ ಜಡಿದಿತ್ತೋ ಅಥವಾ ವಿಮಾನವಾವುದಾದರೂ ಕೆಲವು ಕಾಲಾವಧಿಯ ಬಳಿಕ ಸಿಡಿವಂತೆ ಎಸೆದುಹೋಯಿತೋ ಎಂಬುದು ಯಾರಿಗೂ ಗೊತ್ತಾಗಲಿಲ್ಲ. ಮಲಗಿದ ಸಹಸ್ರಾವಧಿ ನಗರವಾಸಿಗಳಲ್ಲಿ ಕೆಲವರು ಮಾತ್ರ ಅಸ್ಪಷ್ಟಗರ್ಜನೆಯೊಂದಿಗೆ ಆ ಅಣುಬಾಂಬು ಸಿಡಿಯುವದನ್ನು ಕಂಡಿದ್ದರು. ಆಕಾಶದಲ್ಲಿ ಒಂದು ಮೈಲೆತ್ತರದವರೆಗೆ ಖಂಡಿಗಟ್ಟಲೆ ನೀರು ಚಿಮ್ಮಿತು. ನೀರೆಂದರೆ ನೀರೇ ಅಲ್ಲ, ಮಾರಕಶಕ್ತಿಯುಳ್ಳ "ಗ್ಯಾಮಾ ಮತ್ತು "ಬೀಟಾ" ಕಿರಣಗಳನ್ನು ಬಿಡುವ ರೇಡಿಯೋ ಕ್ರಿಯೆಯುಳ್ಳ ಕಣಗಳಿಂದಕೂಡಿದ ತುಂತುರು ಹನಿಗಳ ಮಂಜಿನಮಳೆ! ಶತ್ರುವಾದರೊ ತನ್ನ ಉದ್ದೇಶ ಸಾಧನೆಗೆ ಅತ್ಯಂತ ಅನುಕೂಲವಾದ ರಾತ್ರಿಯನ್ನೇ ಆರಿಸಿಕೊಂಡನು. ೩೦ ಮೈಲಿಯಗಾಳಿಯು ಬಾಂಬು ಸಿಡಿದ ಸ್ಥಳದಿಂದ ದೂರದಲ್ಲಿದ್ದ 'ಮಾನ್ ಹಟ್ಟಾನ್' ದ್ವೀಪದ ನಿಲುಗಂಬದ ಕಡೆಗೆ ಬೀಸುತ್ತಿತ್ತು. ಒಂದೇ ಗಂಟೆಯೊಳಗೆ ಆ ಪ್ರಾಣಾಪಾಯಕರವಾದ ಮಳೆಯು ನಗರದ ಮೇಲೆಲ್ಲಾ ಸುರಿದಿತ್ತು. ರೇಡಿಯೋ ಕ್ರಿಯೆಯುಳ್ಳ ಕಣಗಳು ಎಲ್ಲಕಡೆಗೂ ಒಂದೇ ಪ್ರಮಾಣದಿಂದ ಬೀಳದಿದ್ದರೂ ಪ್ರತಿಯೊಬ್ಬನಿಗೂ ಸಾವಿನ ಭಯವುಂಟಾಗಿತ್ತು. ಐದೂ ಕಾಲಿಗೆ ಕೆಲವು ವರ್ಷಗಳ ಹಿಂದೆ ತಯಾರಿಸಿದ ನಗರ ನಿಷ್ಕ್ರಮಣದ "ಪೆಡ್ಮ್ಯಾರ್ಲ್" ಎಂಬ ಯೋಜನೆಯನ್ನು ನಗರಾಧ್ಯಕ್ಷರು ಜಾರಿಮಾಡಿದರು. ವಿದ್ಯುತ್—ಕಾರ್ಯಾಲಯದಕೆಲಸಗಾರರೆಲ್ಲ ಓಡಿಹೋಗಿ ವಿದ್ಯುಚ್ಛಕ್ತಿ ಬರುವುದು ನಿಲ್ಲುವತನಕ ಒಂದೇ ಸಮನಾಗಿ ಅಪ್ಪಣೆಗಳೂ ಎಚ್ಚರಿಕೆಗಳೂ ಎಲ್ಲಾ ರೇಡಿಯೊ ನಿಲ್ದಾಣಗಳಿಂದಲೂ ಹೊರಟು ಅಂತರಿಕ್ಷವನ್ನು ತುಂಬಿದವು. ಮತ್ತೆಷ್ಟೋ ಜನರು ಪಲಾಯನ ಮಾಡಿದರು. ಆದರೆ ಅಗ್ನಿಶಾಮಕ ದಲದವರು, ಪೋಲೀಸರು, ರಾಷ್ಟ್ರೀಯ ರಕ್ಷಕ ದಲದವರು ಮತ್ತು ವಿಜ್ಞಾನಿಗಳು ತಮ್ಮ ತಮ್ಮ ಸ್ಥಳಗಳಲ್ಲಿದ್ದು ಕೆಲಸ ಮಾಡುತ್ತಿದ್ದರು. ಅವರಿಗಾದರೂ ಮಾರಕವಾದ "ಗ್ಯಾಮಾ" ಕಿರಣಗಳು ಬಂದು ಎಲ್ಲಿ ತಮ್ಮನ್ನು ಕೊಂದು ಬಿಡುವವೋ ಎಂಬ ಹೆದರಿಕೆ ಎದೆಯನ್ನು ಅಡಿಗಡಿಗೆ ನಡುಗಿಸುತ್ತಿತ್ತು. ಅಲ್ಲಿ ಅತ್ಯಂತ ಶಾಂತರಾಗಿದ್ದವರೆಂದರೆ ವಿಜ್ಞಾನಿಗಳು, ಅವರು ಜರ್ಮನನೊಬ್ಬನಿಂದ ತಯಾರಿಸಲ್ಪಟ್ಟ "ಜೀಗರ್ ಕೌಂಟರ್ಸ್" ಎಂಬ ರೇಡಿಯೋ ಕ್ರಿಯೆಯನ್ನು ಕಂಡು ಹಿಡಿವ ಶಕ್ತಿಯುಳ್ಳ ಯಂತ್ರಗಳನ್ನು ತೆಗೆದುಕೊಂಡು ಅಲ್ಲಲ್ಲಿ ತಿರುಗಾಡುತ್ತ ಗ್ಯಾಮಾ-ಗ್ರಸ್ತ ಪ್ರದೇಶಗಳ ನಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರು.

ಸಿಡಿತದ ಸುದ್ದಿ ಮುಟ್ಟಿದ ಹತ್ತೇ ನಿಮಿಷಗಳಲ್ಲಿ ಫೆಲಿಕ್ಸ್ ನೋವಾಕನು ರೇಡಿಯೋ ಕ್ರಿಯೆ ಎಷ್ಟು ಹೊರಬಿದ್ದಿದೆಯೆಂಬುದನ್ನು ಲೆಕ್ಕ ಹಾಕಿದ್ದನು. ಬಹಳವಾಗಿ "ಗ್ಯಾಮಾ" ಕಿರಣಗಳಿಗೆ ಗುರಿಯಾದ ನಗರದ ಭಾಗಗಳಲ್ಲಿರುವವರು ಮೂರು ಗಂಟೆಗಳು ಮೀರಿದರೆ ಬಹಳ ಗಂಡಾಂತರಕ್ಕೆ ಗುರಿಯಾಗುವರೆಂದು ಅತನು ನಗರಸಭಾಧ್ಯಕ್ಷರಿಗೆ ಹೇಳಿದನು. "ಈ ಭಾಗಗಳಲ್ಲಿ ೯ ದಿನಗಳ ವರೆಗೆ ಅಥವಾ ೬ ದಿನಗಳ ವರೆಗೆ ಜನರು ಸಾಯದೆ ಇರಬಹುದು. ೨—೩ ದಿನಗಳ ವರೆಗೆ ಯಾವ ಕುರುಹೂ ಕಂಡು ಬರುವುದಿಲ್ಲ. ಒಂದೇ ಸಲ ವಾಕ ಬಡಿದು ಉಸಿರು ಕಟ್ಟಿ ಹೋಗುವಂತಾಗಿ ಕೆಲವರೆ ಜನರು ಮರಳಬಹುದು. ಇಂಥವರು ನಾಲ್ಕೇ ದಿನಗಳಲ್ಲಿ ಸಾಯುವರು; ಕೂಡಲೆ ನಗರದಿಂದ ಹೊರಬೀಳಲು ಶಕ್ತರಾದ ಕೆಲವರು ಒಂದು ವಾರದಲ್ಲಿ ದೋಳುತಲೆಯುಪರಾಗಬಹುದು ಅಥವಾ ಸ್ವಲ್ಪ ಜ್ವರಪೀಡಿತರಾಗಬಹುದು, ಆದರೆ ಅವರು ಪೂರ್ಣವಾಗಿ ಆರೋಗ್ಯವನ್ನು ಹೊಂದುವರು. ಇನ್ನು ಅವರ ವಂಶದ ಮೇಲೆ "ಗ್ಯಾಮಾ" ಕಿರಣಗಳು ಯಾವ ಪರಿಣಾಮವನ್ನುಂಟು ಮಾಡಬಹುದೆಂಬುದನ್ನು ಭವಿಷ್ಯವೇ ನಿರ್ಣಯಿಸಬಲ್ಲುದು."

ಈ ದುರ್ಘಟನೆ ನಡೆದ ೯ ನೆಯ ದಿನ ಡಾ. ನೋವಾಕನು ಸತ್ತು ಹೋದನು. ಅವನ ಗಣಿತದ ಪ್ರಕಾರ ರೇಡಿಯೋಕ್ರಿಯೆಯು ಸರಿಯಾಗಿತ್ತಾದರೂ ಅತನು ಹೇಳಿದ ಕಾಲಾವಧಿಯೊಳಗೇ ಅನೇಕರು ಸತ್ತರು. ಏಕೆಂದರೆ, ಅವನಾಗಲಿ ಆಳುತ್ತಿದ್ದ ನಗರ ಸಭಾಧ್ಯಕ್ಷರು, ಪೋಲೀಸರು, ಸೈನಿಕರು—ಇವರಲ್ಲಿ ಯಾರೇ ಆಗಲಿ, ರೇಡಿಯೋ-ಕ್ರಿಯೆಯಿಂದುಂಟಾಗುವ ಮೂರ್ಛೆಯ ಕ್ರಮಿಕ ಪರಿಣಾಮವನ್ನು ಊಹಿಸಲಾರದವರಾಗಿದ್ದರು. ತಮ್ಮ ಸಣ್ಣ ನಡುಗಡ್ಡೆಯಿಂದ ಹೊರಹೊರಡುವ ಮೊದಲೇ ಆ ಮೂರ್ಛೆ ನಗರವಾಸಿಗಳನ್ನು ಹಿಡಿದುಬಿಟ್ಟಿತ್ತು. ಮಾನವ ಚರಿತ್ರೆಯಲ್ಲೇ ಅದೊಂದು ಅತ್ಯಂತ ಕೆಟ್ಟ ಗಂಡಾಂತರವಾಗಿತ್ತು.

ನಡುನಡುವಿನ ನಿಲ್ದಾಣಗಳಲ್ಲಿ, ಸೇತುವೆಗಳ ಮೇಲೆ, ನದಿಗಳ ಕೆಳಗಿನ ಸುರಂಗಗಳಲ್ಲಿ ಸಾವಿರಾರು ಜನರು ಸತ್ತುಬಿದ್ದಿದ್ದರು. ಭಂಗಿಗಳು ಮತ್ತು ಈಜುಗಾರರಿಗಲ್ಲದೆ ಮತ್ತಾರಿಗೂ ಕಾಲಿಡಲಾಗದಷ್ಟು ದಟ್ಟವಾಗಿ ದಾರಿಗಳಲ್ಲಿ ಮುರಿದ ವಾಹನಗಳೂ ಹೆಣಗಳೂ ತುಂಬಿಕೊಂಡಿದ್ದವು. ಭರ್ತಿಯಾಗಿ ರೈಲುಗಳು ಆ ದಿನ ಬೆಳಿಗ್ಗೆ ನಗರದಿಂದ ಹೊರಹೊರಟಿದ್ದವು. ರೈಲು ಹತ್ತಿದ ಎಷ್ಟೋ ಜನರು ವಾಪಸು ತಿರುಗಲು ಹವಣಿಸಿ ಪುನಃ ನಗರದಿಂದ ಹೊರಟೇ ಹೊರಟರು. ಪರಿಸ್ಥಿತಿ ಹದಕ್ಕೆ ಬರುವುದರೊಳಗೆ ಇಡಿಯ ಪಟ್ಟಣವೇ ಖಾಲಿಯಾದಂತಿತ್ತು. ಇಷ್ಟರ ಮೇಲೆ ವಾಪಸು ಬಂದವರಿಗೆ ಕಡಿಮೆಯಾದ ಅಂಶದ ರೇಡಿಯೋಕ್ರಿಯೆತುಂಬಿಬಂದು ನಾಲ್ಕು ವಾರಗಳ ನಂತರ ಪರಂಧಾಮವನ್ನೈದಿದರು.

ಸಿಡಿತದ ಕಾಲದಲ್ಲಿ "ಮ್ಯಾನ್‌ಹಟ್ಟನ್" ದ್ವೀಪದಲ್ಲಿ ೨೦ ಲಕ್ಷಕ್ಕಿಂತ ಹೆಚ್ಚು ಜನರಿದ್ದರು. ಕಡೆಗೆ ಗೊತ್ತಾದ ಪ್ರಕಾರ ಸುಮಾರು ನಾಲ್ಕು ಲಕ್ಷದಷ್ಟು ಜನರು ಮರಣಹೊಂದಿದ್ದರು ಇಲ್ಲವೆ ಕಾಣೆಯಾಗಿದ್ದರು.

ಉಳಿದವರಲ್ಲಿ ಹಲವರು ಒಂದು ವಿಧದ ರೇಡಿಯೋ ಕ್ರಿಯೋತ್ಪನ್ನವಾದ ರೋಗದಿಂದ ನರಳಿದರು. ಇವಲ್ಲದೆ "ಮ್ಯಾನಹಟ್ಟನ್" ನ ಹೊರಗಿನ "ಬ್ರಾಂಕ್ಸ್" ಮತ್ತು ವೆಸ್ಟ್‌ಚೆಸ್ಟರ್‌ನಲ್ಲಿರುವ ಸಾವಿರಾರು ಜನರಿಗೂ ಅದು ಸೋಂಕಿತು. ಅವರಲ್ಲಿ ಬಹಳ ಜನ ಮಡಿದರು. ಬಾಂಬು ಸಿಡಿದ ದೂರದಜಾಗದಿಂದ ೧೫ ಮೈಲು "ವ್ಯಾಟ್‌ಕಿನ್ಸ್‌ಗ್ಲೆನ್" ಪಟ್ಟಣದಲ್ಲಿ ಕೂಡ ಅನೇಕರಿಗೆ ನೋವು ನುರಿಗಳುಂಟಾದವು. ಏಕೆಂದರೆ, ಅಡ್ಡತಿಡ್ಡ ಬೀಸಿದ ಗಾಳಿ ಅಲ್ಲಿಗೆ ರೇಡಿಯೊಕ್ರಿಯಾತ್ಮಕ ಕಣಗಳನ್ನು ಒಯ್ದಿತ್ತು.

ದುರ್ಘಟನೆಯ ಸುಳಿವನ್ನು ಮೊಟ್ಟಮೊದಲು ಕಂಡ ಡಾ. ಸ್ಟ್ಯಾಂಡ್‌ಬರ್ಗರು "ಜೀಗರ್ ಕೌಂಟರ್ಸ್" ರಕ್ಷಕ ದಲ ನಡೆಸುವ ಹೊಣೆ ಹೊತ್ತಿದ್ದರು. ಆದರೆ ಡಾ. ನೋವಾಕನ ಅಪ್ಪಣೆಯ ಮೇರೆಗೆ ಪಟ್ಟಣವನ್ನು ಕಡೆಗೆ ಬಿಟ್ಟು ಹೊರಟರು. ಸಿಡಿತವಾದ ಎರಡು ವಾರಗಳ ಬಳಿಕ ಅವರ ತಲೆಗೂದಲು ಒಂದೊಂದೇ ಉದುರ ಹತ್ತಿದವು. ೧೮ ದಿನಗಳ ನಂತರ ಮೈಯೆಲ್ಲ ಬಿಳಿಚಿಕೊಂಡು ಮೂಗಿನಲ್ಲಿ ರಕ್ತಸ್ರಾವ ಪ್ರಾರಂಭವಾಯಿತು ಮತ್ತು ಅವರು ೨೫ ರಾತ್ರಿಗಳಷ್ಟು ಕಾಲದಲ್ಲಿ ಇಳಿದು ಹೋದರು. ಕೆಲವು ಜೀವಸತ್ವಗಳನ್ನೂ ಇತರ ಔಷಧಗಳನ್ನೂ "ಇಂಜೆಕ್ಷನ್" ಕೊಟ್ಟದ್ದರಿಂದ ಅವರು ಬದುಕಿಕೊಂಡರು. "ವಾಲ್‌ಸ್ಟ್ರೀಟ್" ನ ರಾತ್ರಿಯ ಪಹರೆಯವನಿಗೆ ಅದೇ ರೋಗ ತಲೆದೋರಿ ೩೨ ದಿನಗಳ ನಂತರ ತೀರಿ ಹೋದನು.

ನ್ಯೂಯಾರ್ಕಿನಿಂದ ಜೀವಂತವಿರುವದೆಲ್ಲವನ್ನೂ ಹೊರಗೊಯ್ಯಲು ಒಂದು ಇಡಿಯ ವಾರ ಹಿಡಿಯಿತು. ರೇಡಿಯೋ ಕ್ರಿಯೆಯ ಪರಿಣಾಮದ ಹೊರತಾಗಿ ಬೇರೆಯ ಕಾರಣಗಳಿಂದ ಎಷ್ಟು ಜನರು ನದಿಯಲ್ಲಿ ಮುಳುಗಿ ಮಡಿದರೊ ಮೂರನೆಯ ರೈಲುಕಂಬಿಗೆ ಡಿಕ್ಕಿ ಹೊಡೆದು ಎಷ್ಟುಮಂದಿ ಹತರಾದರೋ ಮತ್ತೆ ಎಷ್ಟು ಜನರು ಕೊಳ್ಳೆಗಾರರಿಂದ ಗುಂಡು ಹಾಕಲ್ಪಟ್ಟರೋ ಯಾರು ಬಲ್ಲರು?

ಮಾರ್ಚ ೬ ರಲ್ಲಿ ಹಳೆಯ ಪತ್ರಗಳನು ಪಡೆಯಲು "ಜೀಗರ್ ಕೌಂಟರ್ಸ್" ಗಳನು ಕೈಯಲ್ಲಿ ಹಿಡಿದುಕೊಂಡು ಮೃತ್ಯುಲೋಕಕ್ಕೆ

೧೦ ನೇ ಪುಟ

ಹಿಂದುಸ್ತಾನವನ್ನು ವಿಭಜಿಸಕೂಡದು

ಗಾಂಧೀಜಿ ಇತ್ತೀಚೆ ಕಲಕತ್ತೆಗೆ ಹೋದಾಗ ಒಂದುವಾರ ಅವರ ಕೂಡ ಇರುವ ಭಾಗ್ಯ ನನಗೊದಗಿತ್ತು. ಆ ಸಹವಾಸದ ಪ್ರಾರಂಭದಲ್ಲಿ ಬಂಗಭಂಗವನ್ನು ತೀವ್ರತರವಾಗಿ ವಿರೋಧಿಸಿ ದ್ದ ಬಂಗಾಲಿಗಳು ಇಂದು ಬಂಗಾಲ ವಿಭಜನೆ ಯ ಬಗ್ಗೆ ಹುಚ್ಚು ಹಿಡಿದಂತಾಗಿರುವದನ್ನು ನೋಡುವದು ಅಂದಿನ ಪ್ರಶ್ನೆಯಾಗಿತ್ತು. "ಪಾಕಿ ಸ್ತಾನ ಸಂಸ್ಥಾಪಿತವಾಗುವದಿದ್ದರೆ ಬಂಗಾಲ ವನ್ನು ಒಡೆಯಬೇಕು ಎಂಬುದು ಅವರ ಘೋಷಣೆ" "ಆದರೆ ಪಾಕಿಸ್ತಾನವೇಕೆ ಎಂದು ಕೇಳಿದರು ಗಾಂಧೀಜಿ "ಪಾಕಿಸ್ತಾನ ಅಪರಿಹಾ ರ್ಯವಾಗಿದೆಯೆಂದು ನೀವೇಕೆ ಭಾವಿಸುವಿರಿ" ವಾದಿ ಗಳ ಉತ್ತರಗಳು ಹೀಗಿದ್ದವು. "ಪಾಕಿಸ್ತಾ ನದ ಬಗ್ಗೆ ಜಿನ್ನಾರವರು ಆಗ್ರಹ ತಾಳಿದವರು. ಅವರು ಅದನ್ನು ಪಡೆದೇತೀರುವರು" ಓ ಅವರ ಹೊರತು ಬೇರೆ ಮಾರ್ಗವೇ ಇಲ್ಲ. "ಇದಲ್ಲ ದಿತ್ತಾರೆ ನೀವು ಮೂಢತನದಿಂದ ಏಕೆ ಒಪ್ಪು ತ್ತೀರಿ" ಎಂದು ಗಾಂಧೀಜಿ ಅತುರತೆಯಿಂದ ಪ್ರಶ್ನಿಸಿ ದಾಯಿಸಿದರು. "ಬ್ರಿಟಿಶರ ಕೆಲಸ್ಟ ಇತ್ತೀಚಿನ ಯಶಸ್ವಿಯಾಗಿ ಉಪಯೋ ಗಿಸಿದ ತಿಳುವಳಿಕೆಯ ಸವಿನಯ ಕಾಯದೇಭಂಗದ ತಂತ್ರವನ್ನು ನೀವು ಮರೆತು ಬಿಟ್ಟಿರಾ? ಅವರ ಜನತೆಯಲ್ಲಿ ಹೋರಾಟದ ಲಕ್ಷಣ ಇದ್ದಂತೆ ತೋರಲಿಲ್ಲ. ಗಾಬರಿ ಮತ್ತು ತೀರ ನಿರಾಶೆಯ ಭಾವನೆಯಿಂದ ಅವರು ಬಳಲುತ್ತಿದ್ದರು. ಈ ಬಗೆಯ ನಿರಾಶೆಯ ಭಾವನೆಯನ್ನು ಮತ್ತು ಪರಾಜಿತ ಭಾವನೆಯ ಘೋರತರವಾದ ತೀರ ಅಸಹಾಯತೆಯನ್ನು ನೋಡಿ ಗಾಂಧೀಜಿ ಅತ್ಯಂ ತ ವಿಷಾದಪಟ್ಟರು.

ಎಲ್ಲಕ್ಕಿಂತ ಹೆಚ್ಚು ವಿಷಾದಕರ ಮಾತೆಂದರೆ ಕಾಂಗ್ರೆಸ್ಸ ಮೊಟ್ಟಮೊದಲು ಪಂಜಾಬ ಮತ್ತು ಬಂಗಾಲದ ವಿಭಜನೆಯ ಪ್ರಶ್ನೆಯನ್ನು ಮುಂದೆ ಮಾಡಿತು. 'ಪಾಕಿಸ್ತಾನ ಕನಸಿನ ಸಾಮ್ರಾಜ್ಯ ಹಿಂದುಸ್ತಾನದಲ್ಲಿ ಅವೆಂದಿಗೂ ಪ್ರಸ್ಥಾಪಿತವಾಗ ಲಾರದೆಂದು, ನಮ್ಮ ರಾಷ್ಟ್ರೀಯ ಧುರೀಣರು ಮೇಲಿಂದ ಮೇಲೆ ಆಶ್ವಾಸನ ಕೊಟ್ಟಿರುವದಿಲ್ಲವೆ? ಆದರೆ ಬಂಗಾಲ ಮತ್ತು ಪಂಜಾಬದಲ್ಲಿಯ ಪಾಕೀಯ ದೊಂಬಿಗಳಿಂದ ಜನರು ಸರ ಸತ್ತು ಹೋಗಿದೆಂದು ತೋರುತ್ತದೆ ಧುರೀಣರೂ ಸರ ಸತ್ತವರಾಗಿರುವರೆಂದು ತೋರುತ್ತದೆ. ಪ್ರಾಂತ ಗಳನ್ನು ವಿಭಜಿಸಬೇಕೆಂಬಬೇಡಿಕೆಯೆಂದರೆ ಪಾಕಿ ಸ್ತಾನಕ್ಕೆ ನಾವು ಒಪ್ಪಿಗೆ ಕೊಟ್ಟಂತೆಯೆ. ಇಲ್ಲ ದಿದ್ದರೆ ಪಾಕಿಸ್ತಾನ ಪ್ರಸ್ಥಾಪಿತವಾಗುವದಾದರೆ ಪಂಜಾಬ ಮತ್ತು ಬಂಗಾಲವನ್ನೂ ವಿಭಾಗಿಸ ಬೇಕು ಎನ್ನುವದರ ಬದಲು "ಇಲ್ಲ. ಹಿಂದು ಸ್ತಾನ ಅಖಂಡವಾಗಿಯೇ ಉಳಿಯುವದು. ಜಗತ್ತಿನಲ್ಲಿ ಯಾವ ಸರಕಾರವೂ ಅದನ್ನು ಒಡೆ ಯಲಾರದು" ಎಂದು ನಾವು ಸ್ಪಷ್ಟವಾಗಿ ಹೇಳ ಬೇಕಾಗಿದ್ದಿತು"

ಶ್ರೀ ಜಿನ್ನಾ ಸಾಹೇಬರು ಹೇಳಿದ್ದೆಲ್ಲವನ್ನು ಶಾಂತ ರೀತಿಯಿಂದ ಕೇಳಿಕೊಂಡ ಬಳಿಕವೂ ಬ್ರಿಟಿಶ ಮಂತ್ರಿ ಶಿಷ್ಟಾಯಿಯವರು ತಮ್ಮ ಮೇ ೧೬, ೧೯೪೬ ನೇ ತಾರೀಕಿನ ಘೋಷ ಣೆಯಲ್ಲಿ ಸಕಾರಣವಾಗಿಯೆ ಪಾಕಿಸ್ತಾನವನ್ನು ತಿರಸ್ಕರಿಸಿಬಿಟ್ಟಿರುವರು. ಇತ್ತೀಚಿನ ತನ್ನ ಘೋಷಣೆಯಲ್ಲಿ ಬ್ರಿಟಿಶ ಮುಖ್ಯ ಮಂತ್ರಿ ಗಳು ಆ ಘೋಷಣೆಯನ್ನೆಯೆ ನಡೆಯುವುದಾಗಿ ವಚನಬದ್ಧರಾಗಿರುವರು. ಅಂದ ಬಳಿಕ, ಮೇ ೧೬ರಘೋಷಣೆಯನ್ನು ಹಳೆಸುವದನ್ನಾಗಿಮಾಡುವ ಮಾರ್ಗವನ್ನು ನಾವೇಕೆ ಹಿಡಿಯಬೇಕು? ಅವಶ್ಯ ವೆನಿಸಿದರೆ ಈಗಿದ್ದ ಪ್ರಾಂತಗಳಿಗೆ ಅಧಿಕಾರ ವನ್ನು ಪ್ರತ್ಯೇಕವಾಗಿ ಒಪ್ಪಿಸಿ ಕೊಡಲಾಗುವ ದೆಂದು ಬ್ರಿಟಿಶ ಸರಕಾರದವರು ಫೆಬ್ರುವರಿ ೨೦ ರ ತಮ್ಮ ಪ್ರಕಟನೆಯಲ್ಲಿ ಸಾರಿರುವರೆಂದು ಹೇಳಲಾಗುತ್ತದೆ. ಅದುದರಿಂದ ಪಾಕಿಸ್ತಾನ ಅಪ ರಿಹಾರ್ಯವೆಂದು ವಾದಿಸಲಾಗುತ್ತದೆ. ಆದರೆ ಇಂಥ ತಿವಾದಗಳು ಹಿಂದೀ ರಾಷ್ಟ್ರೀಯ ಮಹಾ ಸಭೆಯಂಥ ದೊಡ್ಡ ಸಂಸ್ಥೆಗೆ ಸರಿಹೋಗು ವದಿಲ್ಲ. ಹಿಂದುಸ್ತಾನದಿಂದ ಹೊರಟು ಹೋಗು ವಂತೆ ಬ್ರಿಟಿಶರನ್ನ ಒತ್ತಾಯ ಪಡಿಸುವಲ್ಲಿ ನಾವು ಸಮರ್ಥರಾಗಿದ್ದರೆ ಇಲ್ಲ. ಹಿಂದುಸ್ತಾನ ವನ್ನು ಒಡೆಯಲಾಗದು" ಎಂದು ಅವರಿಗೆ ಸ್ಪಷ್ಟ ವಾಗಿ ಮತ್ತು ದೃಢವಾಗಿ ಹೇಳಬೇಕು ಮತ್ತು ಒಂದು ವೇಳೆ ಪಾಕಿಸ್ತಾನವನ್ನು ಒತ್ತಾ ಯದಿಂದ ನಮ್ಮ ಮೇಲೆ ಹೇರಿದ್ದಾದರೆ ದೇಶದಾ ದ್ಯಂತ ಸಾರ್ವತ್ರಿಕ ಬಂಡಾಯವನ್ನೆಬ್ಬಿಸಿ ಅದನ್ನ ಮುರಿಸಲು ಶಕ್ತಿಮೀರಿ ಪ್ರಯತ್ನಿಸಲೇ ಬೇಕು.

ಪಾಕಿಸ್ತಾನದ ಬೇಡಿಕೆ ಅತ್ಯಂತ ಅಸಮಂಜಸ ಮತ್ತು ಅವಿವೇಕತನದ್ದಾಗಿದೆ. ಅದರ ಕಾರಣ ಗಳು ಸ್ಪಷ್ಟವಿದ್ದುದರಿಂದ ಇಲ್ಲಿ ಉಲ್ಲೇಖಿಸುವ ವಶ್ಯಕತೆಯಿಲ್ಲ. ಬ್ರಿಟಿಶ ಮಂತ್ರಿಶಿಷ್ಟಾ ಮಂಡಳಿಯವರೂ ಅದನ್ನು ತಾರಿಸಿ ಬಿಟ್ಟಿತು. ಆದರೆ, ಮುಸ್ಲಿಂಲೀಗು, ಪ್ರತ್ಯಕ್ಷ ಕೃತಿಯಿಂದ ಅದನ್ನು ಸಾಧಿಸಿ ಬಿಡಬೇಕೆಂದು ಬೆದರಿಸುತ್ತಿದೆ. ಈ ಪ್ರತ್ಯಕ್ಷ ಕೃತಿಯೆಂದರೆ ಅತ್ಯಂತ ಅಮಾನುಷ ಹಿಂಸಾಚಾರವೆಯೇ. ಪ್ರಾಂತಗಳವಿಭಜನೆಯನ್ನು ಬೇಡಿ ನಾವು ಈ ಬೆದರಿಕೆಗೆ ಬಲಿ ಬಿದ್ದಿಲ್ಲವೆ? ಪಾಕಿಸ್ತಾನ 'ಅಪರಿಹಾರ್ಯ' ವೆಂದು ಒಪ್ಪಿ ರಾಜ ಕೀಯ 'ಗುಂಡಾಗಿರಿ' ಗೆ ನಾವು ಪ್ರತ್ಯಕ್ಷವಾಗಿ ಪ್ರೋತ್ಸಾಹಿಸಿದಂತಿಲ್ಲವೆ? ಬ್ರಿಟಿಶ ಸಾಮ್ರಾಜ್ಯ ಶಾಹಿ ಶಕ್ತಿಯನ್ನೆ ದಿವಾಳಿ ಎಬ್ಬಿಸಿದಾಗ ಪಾಕಿ ಸ್ತಾನದ ಬೆದರ ಗುಂಡನ್ನು ವಿಫಲಗೊಳಿಸು ವದು ದುಸ್ತರವಿದೆ ಆಟವನ್ನೆ?

ಶ್ರೀ ಜಿನ್ನಾರವರವರಾದರೂ ಒಂದೊಮ್ಮೆ ಸಮಾಧಾನ ಹೊಂದಿದಿರುತ್ತಿದ್ದರೆ ಪಾಕಿಸ್ತಾನಕ್ಕೆ ಒಪ್ಪಿಗೆ ಕೊಟ್ಟಿದ್ದರೂ ಅದೊಂದು ಬಗೆಯಾಗಿ ಸಾರ್ಥಕವಾಗುತ್ತಿತ್ತು. ಆದರೆ ಅವರು ಪ್ರಾಂತ ಗಳ ವಿಭಜನೆಯನ್ನು ತೀವ್ರವಾಗಿ ವಿರೋಧಿಸು ತ್ತಿರುವರು ಮತ್ತು ಇಡೀ ಪಂಜಾಬ ಮತ್ತು ಬಂಗಾಲ ಬೇಕೆಂದು ಹೇಳುತ್ತಿರುವರು. ಆದರೆ ಅವರ ಮಹತ್ವಾಕಾಂಕ್ಷೆ ಅಷ್ಟಕ್ಕೇ ನಿಲ್ಲುವದಿಲ್ಲ. ಪಶ್ಚಿಮ ಮತ್ತು ಪೂರ್ವ ಪಾಕಿಸ್ತಾನ ಪ್ರದೇಶಗ ಳನ್ನು ಕೂಡಿಸುವ 'ಕೂಟ ಮಾರ್ಗ'ವನ್ನು ಅವರು ಇತ್ತೀಚೆ ಬೇಡಹತ್ತಿರುವರು. ಇಂದಿಲ್ಲ ನಾಳೆಯಾದರೂ ಪಾಕಿಸ್ತಾನದ ಭಾಗವೇ ಆಗ ಬಹುದಾಗಿರುವ ನಿಜಾಮ ಪ್ರದೇಶವನ್ನು ಪಾಕಿ ಸ್ತಾನದೊಡನೆ ಕೂಡಿಸಲು ಕೂಟ ಮಾರ್ಗ ವನ್ನು ಅವರು ಮುಂದೆ ಬೇಡಬಹುದು. ಈ ರೀತಿ ಜಿನ್ನಾರವರ ಪಾಕಿಸ್ತಾನ ಇಡೀ ಹಿಂದುಸ್ತಾ ನವನ್ನೆ ಸುತ್ತುವರಿಯಬಹುದು. ಕದಾಚಿತ್ ನೆರೆಯ ಮುಸಲ್ಮಾನ ದೇಶಗಳ ಸಹಾಯದಿಂದ ಅವರು ಇದನ್ನು ಸಾಧ್ಯ ಮಾಡಿಕೊಳ್ಳಬಹುದು. ಸಾರ್ವಭೌಮ ಪಾಕಿಸ್ತಾನದ ಸ್ಥಾಪನೆ ಹಿಂದುಸ್ತಾ ನದ ಸಂರಕ್ಷಣೆಗೆ ಯಾವಾಗಲೂ ಗಂಡಾಂತರ ಪ್ರದವೆ ಆಗಿ ಪರಿಣಮಿಸುವದು. ಅದು ಬ್ರಿಟನ್ ಮತ್ತು ರಶಿಯಾದ ಗೂಡ ಮಿತ್ರತ್ವ ಬೆಳಸಿ ಹಿಂದುಸ್ತಾನಕ್ಕೆ ಯಾವಾಗಲೂ ಗಂಡಾಂತರ ಪ್ರದ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯನ್ನುಂಟು ಮಾಡಲು ಸಮರ್ಥವಾಗಬಲ್ಲುದು. ಮತ್ತು ನಮ್ಮ ದುರ್ದೈವದಿಂದ ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಟೋರಿ ಪಕ್ಷದವರು ಅಧಿಕಾರ ದಲ್ಲಿ ಬಂದರೆ ವಿಭಕ್ತ ಹಿಂದುಸ್ತಾನ, ವಂಚಕ ಬ್ರಿಟಿಶ ಸಾಮ್ರಾಜ್ಯಶಕ್ತಿಗೆ ಸಹಜವಾಗಿ ಬಲಿ ಬೀಳಬಲ್ಲುದು.

ಇದಲ್ಲದೆ ಪಾಕಿಸ್ತಾನದ ಮತ್ತು ಪ್ರಾಂತಗಳ ವಿಭಜನೆಯ ಬೇಡಿಕೆಗಳಿಂದ ದೇಶದಲ್ಲೆಲ್ಲ ಅನಾ ರೋಗ್ಯಕರವಾದ ಪರಿಣಾಮವುಂಟಾಗುವದು. ಅನೇಕ ಹಿಂದೀ ಸಂಸ್ಥಾನಗಳೂ ಈಗಾಗಲೆ ಸಾರ್ವಭೌಮತ್ವದ ಮಾತುಗಳನ್ನಾಡಹತ್ತಿರು ವವು. ಸಾರ್ವಭೌಮ ಪಠಾನ ರಾಜ್ಯದ ಮತ್ತು ಬಲೂಚಿಸ್ತಾನ ಪ್ರಾಂತದ, ಸಾರ್ವ ಭೌಮ ರಾಜಸ್ತಾನದ, ಸಾರ್ವಭೌಮ ಮಹಾ ರಾಷ್ಟ್ರ, ಸ್ವತಂತ್ರ ದ್ರವಿಡಸ್ತಾನ, ಮೊದಲಾದ್ದರ ಸ್ಥಾಪನೆಯ ಬಗ್ಗೆ ಗಂಭೀರ ರೀತಿಯಿಂದ ಮಾತು ಕತೆಗಳು ನಡೆಯುತಿವೆ. ಹಿಂದುಸ್ತಾನ ಪ್ರದೇಶ ಗಳಲ್ಲಿ ಮುಸ್ಲಿಂ ಲೀಗು ಸಣ್ಣ ಸಣ್ಣ ಪಾಕಿಸ್ತಾನ ಪ್ರದೇಶಗಳನ್ನೂ ಬೇಡಬಹುದು. ಜಿಲ್ಲಾ ತಾಲೂಕು ಹಳ್ಳಿ ಮತ್ತು ನಗರಗಳಲ್ಲಿಯ ಬೀದಿ ಗಳನ್ನು ಕೂಡ ವಿಭಾಗ ಮಾಡಿಕೊಡಿರೆಂಬ ಬೇಡಿಕೆಯೂ ಕೊನೆಯಲ್ಲಿ ಬರಬಹುದು. ಈ ವಿಭಜನೆಯ ಅರ್ಥ ಈ ವರೆಗೂ ಹೋಗಿ ಮುಟ್ಟ ಬಹುದು. ಇದಕ್ಕೆಲ್ಲ ನಾವು ಸಿದ್ಧರಾಗಿರು ವೆವೊ? ಇಲ್ಲದಿದ್ದರೆ ದೇಶದ ವಿಭಜನೆಯನ್ನು ನಾವು ಈಗಲೆ ಸರ್ವ ಶಕ್ತಿಯಿಂದ ತಡೆಯಬೇಕು. ಇದನ್ನು ಈಗ ಮಾಡದಿದ್ದರೆ ಮುಂದೆಂದಿಗೂ ಶಕ್ಯವಾಗದು.

ಸುದೈವದಿಂದ ನಮ್ಮ ಧುರೀಣತ್ವವನ್ನು ವಹಿ ಸಲು ಗಾಂಧೀಜಿ ಈಗಲೂ ಇರುವರು. ಅವರು ಪಾಕಿಸ್ತಾನಕ್ಕೆ ಮತ್ತು ಪ್ರಾಂತಗಳ ವಿಭಜನೆಗೆ ನಿಶ್ಚಿತವಾಗಿ ವಿರೋಧಿಗಳಾಗಿರುವರು. ಅವರ ಸಲಹೆಯನ್ನು ಅಲ್ಲಗಳೆಯುವ ಮೊದಲು ನಾವು ಒಮ್ಮೆಲ್ಲ ನೂರು ಸಲ ಗಂಭೀರ ರೀತಿಯಿಂದ ವಿಚಾರ ಮಾಡಬೇಕು. ವಿಚಾರ ಮಾಡಿ ನಿರ್ಣ ಯಿಸಲು ಈಗಲೂ ಸಮಯವಿದೆ. ನಮ್ಮ ದೇಶದ ವಿಭಜನೆಯ ವಿರುದ್ಧ ದೇಶದ ಒಂದು ತುದಿಯಿಂದ ಮತ್ತೊಂದು ತುದಿಯ ವರೆಗೆ "ಹಿಂದುಸ್ತಾನವನ್ನು ವಿಭಜಿಸಲಾಗದು" ಎಂಬ ಕ್ರಾಂತಿ ಕೂಗು ಹೊರಡೊಮ್ಮಲಿ.

—ಎಸ್. ಎನ್. ಅಗರವಾಲಾ

ಪ್ರಶ್ನೆ ಪೆಟ್ಟಿಗೆ

(೭ನೇ ಪುಟದಿಂದ)

ಪರಿಸ್ಥಿತಿಯಲ್ಲಿ ಕೆಲವರ ಶ್ರೀಮಂತಿಕೆಯಲ್ಲಿ ಲೋಲಾಡುತಿರುವರು. ಆದರೆ ಜನಸಾಮಾನ್ಯ ರಿಗೆ ತಿನ್ನಲಿಕ್ಕೆ ಕೂಡ ಸಾಕಷ್ಟು ಸಿಕ್ಕುವದಿಲ್ಲ. ದಕ್ಷಿಣ ಆಫ್ರಿಕೆಯಲ್ಲಿ ನಾನು ಇರುವಾಗಲೆ ಸಾಮ್ಯ ವಾದದ ತತ್ವವನ್ನು ನಾನು ಒಪ್ಪಿಕೊಂಡೆ. ಸಾಮ್ಯ ವಾದಿಗಳಿಗೆ ಇಲ್ಲವೆ ಬೇರೆಯವರಿಗೆ ನಾನು ವಿರೋಧಿಸುವದು, ಶಾಶ್ವತವಾದ ಸುಧಾರಣೆ ಯನ್ನು ಮಾಡಬೇಕಾದರೆ ಹಿಂಸಾ ಮಾರ್ಗವೆ ಯೋಗ್ಯವೆಂಬ ಅವರ ತಿಳುವಳಿಕೆಗಾಗಿ.

ಪ್ರಶ್ನೆ ೪— ಅರಸನು, ಜಮೀನದಾರ ಇಲ್ಲವೆ ಬಂಡವಲದಾರನು ಬಡವರ ಟ್ರಸ್ಟಿಯಾಗಿರಬೇ ಕೆಂದು ನೀವು ಪ್ರತಿಪಾದಿಸುತಿರುವಿರಿ. ಇಂಥವ ರಾರಾದರೂ ಇಂದು ಇರುವರೆಂದು ನೀವು ಭಾವಿ ಸುವಿರಾ? ಆ ರೀತಿ ಅವರು ಪರಿವರ್ತನ ಹೊಂದ ಬಹುದೆಂದಾದರೂ ನಿಮಗೆನಿಸುವದೊ?

ಉತ್ತರ ೪— ಯಥಾರ್ಥವಾಗಿಯಿಲ್ಲದಿದ್ದರೂ ಕೆಲಮಟ್ಟಿಗಾದರೂ ಅದರಂತೆ ನಡೆಯುವ ತೀರ ಸ್ವಲ್ಪ ಜನ ಈಗಲಾದರೂ ಇರುವರೆಂದು ನನಗೆ ನಿಸುತ್ತದೆ. ಆ ದಿಸೆಯಲ್ಲಿ ನಿಶ್ಚಿತವಾಗಿ ಅವರು ಪ್ರಯತ್ನಿಸುತಿರುವರು. ಸದ್ಯದ ರಾಜೇಸಾಹೇ ಬರು ಮತ್ತು ಉಳಿದವರು ಬಡವರ ಟ್ರಸ್ಟಿಗಳಾ ಗಬಲ್ಲರೊ ಎಂದು ಕದಾಚಿತ್ ಕೇಳಬಹುದು. ಅವರು ತಾವಾಗಿಯೆ ಟ್ರಸ್ಟಿಗಳಾಗಿ ಪರಿವರ್ತಿಸದಿ ದ್ದರೆ, ಹಾಗೆ ಮಾರ್ಪಾಟುಹೊಂದಲು ಪರಿಸ್ಥಿತಿ ಅವರನ್ನು ಒತ್ತಾಯ ಪಡಿಸುತ್ತದೆ ಸರ್ವನಾಶಕ್ಕೆ ಅವರು ಸಿದ್ಧರಾದರೆ ಮಾತ್ರ ಆ ಮಾತು ಬೇರೆ. ಪಂಚಾಯತ ರಾಜ್ಯಸ್ಥಾಪನೆಯಾದಾಗ ಹಿಂಸೆ ಗೆಂದಿಗೂ ಶಕ್ಯವಾಗದಿದ್ದಂಥ ಕಾರ್ಯವನ್ನು ಸಾರ್ವಜನಿಕಾಭಿಪ್ರಾಯ ಮಾಡಬಲ್ಲುದು. ಜನ ಸಾಮಾನ್ಯರಿಗೆ ತಮ್ಮ ಶಕ್ತಿಯ ಅರಿವಾಗುವ ವರೆಗೆ ಮಾತ್ರ ಜಮೀನದಾರರು, ಬಂಡವಾಲದಾ ರರು ಮತ್ತು ಅರಸರ ಅಧಿಕಾರ ನಡೆಸಬಲ್ಲರು. ಜಮೀನದಾರಿ ಇಲ್ಲವೆ ಬಂಡವಲುಗಾರಿಕೆಯನ್ನು ಜನರು ಬಹಿಷ್ಕರಿಸಿದ್ದಾದರೆ ಅದು ನಿಷ್ಪ್ರಯೋಜಕ ವಾಗಿ ಸಾಯಲಿಕ್ಕೆ ಬೇಕು. ಪಂಚಾಯತ ರಾಜ್ಯ ದಲ್ಲಿ ಪಂಚಾಯತದ ಅಪ್ಪಣೆಯೇ ಮನ್ನಿಸಲ್ಪಡು ತಿದೆ; ಈ ಪಂಚಾಯತವಾದರೊ ತನ್ನನ್ನಾರಿಸಿದ ಕಾಯದೆ ಕಾನೂನುಗಳಿಗೊಳಪಟ್ಟೇ ಕಾರ್ಯ ಮಾಡುವದು.

ಹೊಸದಿಲ್ಲಿ ಮೋ. ಕ. ಗಾಂಧಿ

೨೫-೫-೪೬

(ಹಿಂದುಸ್ತಾನಿಯಿಂದ ಪರಿವರ್ತನ)

ಅಂತರ್‌ರಾಷ್ಟ್ರೀಯ ಕಳ್ಳಪೇಟೆ

(೬ನೇ ಪುಟದಿಂದ)

ವಹಿಸುವದೆಂದರೆ ಸಾಮ್ರಾಜ್ಯವಾದಿಗಳ ಮೇಲೆ ನಾವು ಯಾವ ಆರೋಪ ಹೊರಿಸುತಿದ್ದೆವೊ ಅದೇ ಆರೋಪಕ್ಕೆ ನಾವು ಗುರಿಯಾದಂತೆಯೆ ಎಂದು ನಾವು ಅಭಿಪ್ರಾಯಪಟ್ಟೆದ್ದೆವು.

ಆತ್ಯಾಸೆ ಮತ್ತು ಸ್ವಾರ್ಥ ಇವೇ ರಾಷ್ಟ್ರ ರಾಷ್ಟ್ರಗಳಲ್ಲಿ ಹೊಟ್ಟೆಕಿಚ್ಚು ದ್ವೇಷ ಹುಟ್ಟಿಸಲು ಮೂಲ ಕಾರಣಗಳು. ಜಾಗತಿಕ ಯುದ್ಧಕ್ಕೆ ಅವೇ ಕಾರಣಗಳಾಗಿವೆ. ಆ ಯುದ್ಧಗಳು ಅನರ್ಥ, ಉಪವಾಸ ಬಳಲುವಿಕೆ ಮತ್ತು ಮರಣ ವನ್ನು ತಂದೊಡ್ಡಿವೆ. ಹಿಂದುಸ್ತಾನದ ಸಾಂಸ್ಕೃ ತಿಕ ಹಿನ್ನೆಲೆ ರಾಷ್ಟ್ರ ರಾಷ್ಟ್ರಗಳಲ್ಲಿ ಶಾಂತಿ ಸುಹೃ ದ್ಭಾವನೆಯನ್ನುಂಟು ಮಾಡುವದಾಗಿದೆ. ಜಗ ತ್ತಿನ ರಾಷ್ಟ್ರಗಳಿಗೆಲ್ಲ ಹಿಂದುಸ್ತಾನ ಈ ಮಿತ್ರತ್ವದ ಸಂದೇಶವನ್ನು ಬೀರಬೇಕಾಗಿದ್ದರೆ ಈ ಹಿಂದಿನ ಪರಂಪರೆಯನ್ನು ಹಿಂದುಸ್ತಾನ ಬಿಡಲರಿಯದು.

ಹಿಂದುಸ್ತಾನಕ್ಕಾಗಿ ಜಪಾನದ ೮೦೦ ಲಕ್ಷ ವಾರ ಬಟ್ಟೆ ಮತ್ತು ೮೦ ಲಕ್ಷ ಪೌಂಡು ನೂಲು ಮೀಸಲಾಗಿಟ್ಟದೆಂಬ ರಾಯಟರ ಸುದ್ದಿಯನ್ನು ಉಲ್ಲೇಖಿಸುತ್ತ ಮದ್ರಾಸದ ಪತ್ರಿಕೆಯೊಂದರ ವಿಶೇಷ ಪ್ರತಿನಿಧಿಯು ಈ ಸುದ್ದಿಯ ಸಂಬಂಧ ದಲ್ಲಿ ತಿಳುವಳಿಕೆಯನ್ನು ಕೊಡಲು ಹಿಂದುಸ್ತಾನ ಸರಕಾರ ಇಷ್ಟಪಡುವದಿಲ್ಲೆಂದು ತೋರುತ್ತ ದೆಂದು ಅಭಿಪ್ರಾಯಪಟ್ಟಿದ್ದನು. ಮೇಲೆ ಹೇಳಿ ದುದಕ್ಕಿಂತ ಹೆಚ್ಚು ಸರಕನ್ನು ತಮಗಾಗಿ ಕಾಯ್ದಿಡಬೇಕೆಂದು ಹಿಂದುಸ್ತಾನ ಸರಕಾರದ ವರು ಕೇಳಿರುವರೆಂದೂ ಇದರ ಹಂಚಿಕೆಯ ವಿಚಾರ ಜೋರಿನಿಂದ ನಡೆದಿದೆಂದೂ ಆ ಪ್ರತಿನಿಧಿ ಹೇಳಿದ್ದನು. ಜಪಾನದಿಂದ ಪರಿಹಾರ ಲೂಟಿ ಯೆಂದು ಬಂದ ವಸ್ತುಗಳಿವೊ ಇವು ಎಂಬ ಮುಂತಾದ ಬಗ್ಗೆ ಮಾತ್ರ ನಮಗೆ ಸ್ಪಷ್ಟವಾಗಿ ತಿಳಿದಿಲ್ಲ. ನಿಜವಾಗಿ ಅದು ಪರಿಹಾರ ಲೂಟಿ ಯಾಗಿದ್ದರೆ ಹಿಂದುಸ್ತಾನವೂ ತೀವ್ರ ಗತಿಯಿಂದ ಸಾಮ್ರಾಜ್ಯತ್ವಕ್ಕೆ ಧಾವಿಸುತಿದೆಂದು ಹೇಳಬೇಕಾ ಗುವದು. ಕಳೆದ ನೂರು ವರ್ಷಗಳಲ್ಲಿ ಜಪಾನ ಅನುಸರಿಸುತಿದ್ದ ಬಂದ ಮಾರ್ಗವನ್ನು ನಾವು ಅನುಸರಿಸದಂತೆ ಸದ್ಯದ ನಡುಗಾಲ ಸರಕಾರ ಶಕ್ತಿಮೀರಿ ಪ್ರಯತ್ನಿಸುವದೆಂದು ನಾವು ಬಲ ವಾಗಿ ಆಶಿಸುತ್ತೇವೆ. —ಜೆ. ಸಿ. ಕುಮಾರಪ್ಪ

ನ್ಯೂಯಾರ್ಕಿನ ಮೇಲೆ ಮೃತ್ಯುಲೋಕದ ಮಂಜು

(೯ ನೇ ಪುಟದಿಂದ)

ಮಂಜಿನ ತೆರೆಯ ಮೂಲಕ ಕೆಲವು ವಿಜ್ಞಾನಿಗಳು ಧೈರ್ಯದಿಂದ ನುಗ್ಗಿ ನಡೆ ದರು. ಪಟ್ಟಣದ ಗೋಡೆ, ಕಾಲು ದಾರಿ, ಸೋಪಾನ ಮಾರ್ಗ, ಎತ್ತರದ ಪ್ರಸ್ಥ— ಇವುಗಳ ಮೇಲೆ ರೇಡಿಯೋ ಕ್ರಿಯೆ ಕಡಿಮೆ ಯಾಗುತ್ತ ಹೋದಂತೆ ಸೀಸದ ಯುದ್ಧದ "ಟ್ಯಾಂಕು"ಗಳಲ್ಲಿ ಕುಳಿತು ಮತ್ತೆ ಮತ್ತೆ ವಿಜ್ಞಾನಿಗಳು ನಗರದೊಳಗೆ ಪ್ರವೇಶಿಸ ತೊಡ ಗಿದರು.

ಅಂತಹ ಜೈತ್ರಯಾತ್ರೆಗೆ ಸ್ವಯಂಸೇವಕರು ಒದಗುವುದು ದುರ್ಲಭವಾಗಿತ್ತು. "ಜೀಗರ್ ಕೌಂಟರ್ಸ್"ಗಳ ರಕ್ಷಣೆಯಿದ್ದರೂ ಹೆಚ್ಚು ಜನಕ್ಕೆ ಧೈರ್ಯ ಉಂಟಾಗಲಿಲ್ಲ. "ಗ್ಯಾಮಾ" ಕಿರಣತಜ್ಞರು ಪದೇ ಪದೇ ಅವನ್ನು ಹೊರಗೆ ದಹಿ ಅವುಗಳಿದುರು ನಿಂತು ಒಂದೇ ಒಂದು ತೀಕ್ಷ್ಣವಾದ ರೇಡಿಯೋ ಕ್ರಿಕ್ರಿಯೆ ಹೊರತ ಕ್ಕಿಂತ ಹೆಚ್ಚಿನ ಅವುಗಳ ಪರಿಣಾಮವನ್ನು ಸಹಿ ಸಿಕೊಂಡು ಜನರ ಧೈರ್ಯವನ್ನು ಹೆಚ್ಚಿಸಲು ಪ್ರಯತ್ನಪಡುತ್ತಿದ್ದರು.

ಬೇಸಿಗೆ—ಮಳೆಗಾಲವೆಲ್ಲಾ ರೇಡಿಯೋ ಕ್ರಿಯಾದೋಷ ನಿವಾರಕ ಕಾರ್ಯಕ್ರಮಗ ಳನ್ನು ಪಟ್ಟಣದ ವಿವಿಧ ಭಾಗಗಳಲ್ಲಿ ಕೈಕೊಳ್ಳ ಲಾಯಿತು; ಸಮುದ್ರದ ನೀರನ್ನು ನಗರದ ರಸ್ತೆಗ ಳಲ್ಲಿ ನುಗ್ಗಿಸಿ ಬಹಳ ಮಟ್ಟಿಗೆ ರೇಡಿಯೋಕ್ರಿಯೆ ಯನ್ನು ತೊಳೆದು ತೆಗೆಯಲಾಯಿತು; ಆದರೆ ದೊಡಲನೆಯ ಸಾರೆ ತೊಳೆದು ತೆಗೆದ ಬಳಿಕ ಉಳಿದುದರ ಮೇಲೆ ಮತ್ತೆ ಎಷ್ಟು ಸಲ ನೀರು ನುಗ್ಗಿಸಿದರೂ ಪರಿ ಣಾಮವಾಗಲಿಲ್ಲ. ಮೇಲಿನ ಕೊಳೆಯೆಲ್ಲಾ ತೊಳೆದುಕೊಂಡು ಬಂದು ಬುಡದಲ್ಲಿ ನಿಂತದ ರಿಂದ ಮನೆಗಳ ಸುತ್ತುಮುತ್ತಣ ಪ್ರದೇಶಗಳಲ್ಲಿ ರೇಡಿಯೋಕ್ರಿಯಾ-ನಿವಾರಕ ಚಟುವಟಿಕೆಗ ಳನ್ನು ನಡೆಸುವುದು ಬಹಳ ಕಷ್ಟವಾಯಿತು. ರೇಡಿಯೋ ಕ್ರಿಯೆಯ ದೋಷವನ್ನು ತೆಗೆಯಲು ಯಾವ ರಸಾಯನ ದ್ರವ್ಯವೂ ಸಿಗಲಿಲ್ಲ. ಕೋಟಿ ಟ್ಟಲೆ "ಡಾಲರ್" ಬೆಲೆ ಬಾಳುವ ಯಂತ್ರ ಸಾಮಗ್ರಿಗಳೆಲ್ಲ ನಿರುಪಯೋಗಿಗಳಾಗಿ ಮಾಲಿ ರಿಗೆ ಹೇಳಲಾರದಷ್ಟು ನಷ್ಟವುಂಟಾಯಿತು. ಅವುಗಳನ್ನು ಎಲ್ಲಿಗೊಯ್ದರೂ ಅವುಗಳ ರೇಡಿ ಯೋ-ಕ್ರಿಯಾದೋಷ ಸಂಗಡವೇ ಇರುತ್ತಿತ್ತು.

ಇಡಿಯ ಒಂದು ವರ್ಷದ ವರೆಗೆ ನ್ಯೂಯಾರ್ಕ ಪಟ್ಟಣವು ಅದರ ಅಳಿದುಳಿದ ಪ್ರಜೆಗಳು ಪುನಃ ಬಂದು ವಾಸಿಸಲು ಯೋಗ್ಯವಲ್ಲವೆಂದು ಅಧಿ ಕೃತವಾಗಿ ಸಾರಲಾಯಿತು.

(ಡಾ. ವೈ. ಎಂ. ದಾದೂ ಮತ್ತು ಡಾ. ಜಿ. ಎಂ. ನ್ಯಾಕರರನ್ನು ದಕ್ಷಿಣ ಆಫ್ರಿಕಕ್ಕೆ ಬೀಳ್ಕೊಡುವಾಗ ಫೀಲ್ಡ ಮಾರ್ಷಲ ಸ್ಮಟ್ಸ್‌ರವರಿಗೂ ಯೂರೋಪಿಯನ್ ಜನರಿ ಗೂ ಆಫ್ರಿಕದ ಮತ್ತು ಇತರ ಬಣ್ಣದ ಜನರಿ ಳಿಗೂ ಸತ್ಯಾಗ್ರಹಿಗಳಿಗೂ ತಲುಪಿಸಬೇಕೆಂದು ಗಾಂಧೀಜಿಯವರು ಈ ಕೆಳಗಿನ ಸಂದೇಶ ವನ್ನು ಕೊಟ್ಟರು. —ಸಂ.)

ಪಾಶ್ಚಾತ್ಯ ನಾಗರಿಕತೆಗೆ ಫೀಲ್ಡ ಮಾರ್ಷಲ ಸ್ಮಟ್ಸರೇ ರಕ್ಷಕರು. ಆದರೆ ಆಫ್ರಿಕನರನ್ನೂ ಏಶಿ ಯನರನ್ನೂ ಅಡಿಯಾಳುಗಳಾಗಿಟ್ಟು ಅವರು ಅದನ್ನು ಕಾದುಕೊಳ್ಳುವುದಿಲ್ಲವೆಂದು ನಂಬು ತ್ತೇನೆ.

ದಕ್ಷಿಣ ಆಫ್ರಿಕದ ಜನರಿಗೆ ಹೊಸಬನಲ್ಲದ ನಾನು 'ವರ್ಣದ ಮೇಲೆ ವಿರುದ್ಧ ಭಾವನೆ ಯಿಟ್ಟು ತಮ್ಮ ಪ್ರತಿನಿಧಿಗಳನ್ನು ಸ್ವಾ ಭ್ರಷ್ಟರಾಗಿ ಮಾಡಬೇಡಿರಿ' ಎಂದು ಹೇಳ ಲಪೇಕ್ಷಿಸುತ್ತೇನೆ. ಪರದೆಯಲ್ಲಿರುವುದಾದ ಬಿಳಿಯರೆನಿಸಿಕೊಳ್ಳುವವರಿಗೆ ಒಳ್ಳೆಯ ಭವಿಷ್ಯ ವಿಲ್ಲ. ದುರ್ಬುದ್ಧಿಯಿಂದ ತೋರುವ ಭಾವ ನೆಯ ಜಾಗತಿಕ ಯುದ್ಧದ ಸಂಕೇತವೇ ಸರಿ. ಬುದ್ಧಿ ಸರಿಯಾಗಿರುವರೆಲ್ಲ ಅಂಥದನ್ನು ತಪ್ಪಿಸ ಬೇಕು. ಸತ್ಯಾಹಿಂಸೆಗಳನ್ನಾಧರಿಸಿ ಸರಿಯಾದ ಮಾರ್ಗದಲ್ಲಿ ನಡೆದರೆ ದಕ್ಷಿಣ ಆಫ್ರಿಕದ ಪರದೇ ಶೀಯರಿಗೋಸ್ಕರ ನಷ್ಟಹೊಂದಿದ ಜನರ ರಾಜ ಕೀಯ ಸಹಕಾರವು ಪರಸ್ಪರ ಸದಿಚ್ಛೆಯಲ್ಲಿ ಪರಿಣಮಿಸಿತು.

ಶಾಶ್ವತವಾಗಿ ಅಜಯ್ಯವಾದ ಸತ್ಯದ ಸಾಮ ರ್ಥ್ಯವಾದ ಸತ್ಯಾಗ್ರಹದ ಮೂಲಭೂತ ತತ್ವ ಕ್ಕೆ ಅಂಟಿಕೊಂಡಿರಬೇಕೆಂದು ಸತ್ಯಾಗ್ರಹಿಗಳಿಗೆ ನಾನು ಬುದ್ಧಿ ಹೇಳಬಯಸುತ್ತೇನೆ. ಪ್ರಗತಿ ಶೀಲ ಯುರೋಪಿಯನರ ಗುಂಪೊಂದು ಅವರ ಬೆಂಬಲಕ್ಕಿರುವುದೊಂದು ಶುಭಲಕ್ಷಣ. ತಮ್ಮ ಆತ್ಮ ಗೌರವ ರಕ್ಷಣೆಯ ಹೋರಾಟಕ್ಕೆ ಭಾರತದ ಬೆಂಬಲವಿದೆಯೆಂಬುದ. ಆಫ್ರಿಕದ ಹಿಂದೀಯರೆಲ್ಲರೂ ತಿಳಿಯತಕ್ಕದ್ದು.

ಕರ್ನಾಟಕ

ಧಾರವಾಡ

ಕಲಘಟಗಿಯಲ್ಲಿ ತಾ. ೨೦ ರಲ್ಲಿ ಸಾರ್ವಜನಿಕ ಸಭೆ ಸೇರಿ ಹರಿಜನ ವಾಚನಾಲಯ ಸ್ಥಾಪಿಸುವ ನಿರ್ಣಯವಾಯಿತು. ಅದಕ್ಕೆ ಶ್ರೀ ಶೇಷಪ್ಪ ಗಡಾಕೇರ ಅವರು ಚೇರಮನ್ನರಾಗಿಯೂ ಶ್ರೀ ಪರಶುರಾಮ ದಾಗೀನದವರ ಅವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಧಾರವಾಡದ "ದಿ ಲಮಾಣಿ ಫ್ರೀ ಬೋರ್ಡಿಂಗ ಹೌಸ"ದ ಸುಪರಿಂಟೆಂಡೆಂಟರು ಈ ಕೆಳಗಿನಂತೆ ತಿಳಿಸುತ್ತಾರೆ— ಮೇಲಿನ ಸಂಸ್ಥೆ ತಾ. ೯-೬-೪೭ಕ್ಕೆ ತೆರೆಯುವುದು. ಹಿಂದುಳಿದ ಎಲ್ಲಾ ವರ್ಗಗಳ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶವಿದೆ. ಮುದ್ರಿತ ಅಪೇಕ್ಷಾ ಪತ್ರವನ್ನು ಮೇಲ್ಸಹಿಸಿದ ಅಧಿಕಾರಿಗಳಿಂದಾಗಲಿ, ಅಸಿಸ್ಟಂಟ ಬ್ಯಾಕ್ ವರ್ಡ್ ಕ್ಲಾಸ್ ಅಫೀಸರ್, ದಕ್ಷಿಣಭಾಗ, ಧಾರವಾಡ ಇವರಿಂದಾಗಲಿ ಪಡೆಯಬಹುದು ಮತ್ತು ಅದನ್ನು ತುಂಬಿ ಮೇಲ್ಸಹಿಸಿದ ಅಧಿಕಾರಿಗೆ ತಾ. ೮-೬-೪೭ ರೊಳಗೆ ಮುಟ್ಟಿಸಬೇಕು. ಪ್ರಾಥಮಿಕ ೪ ನೆಯ ಇಯತ್ತೆಯನ್ನು ಮುಗಿಸಿ ಮುಂದೆ ಓದುತ್ತಿರುವ ಎಲ್ಲಾ ವಿದ್ಯಾಸಂಸ್ಥೆಗಳ ಹಿಂದುಳಿದ ವರ್ಗದ ವಿದ್ಯಾರ್ಥಿಗಳೂ ಅರ್ಜಿಮಾಡಬಹುದು. ವಿದ್ಯಾರ್ಥಿಗಳ ಪಾಲಕರು ನಡುವೆ ಶಾಲೆ, ಕಾಲೇಜುಗಳಿಂದ ಪ್ರವಿಷ್ಟ ವಿದ್ಯಾರ್ಥಿಗಳನ್ನು ಬಿಡಿಸುವುದಿಲ್ಲವೆಂದು ಜಾಮೀನು ಪತ್ರ ಬರೆದುಕೊಡತಕ್ಕದ್ದು. ಬೋರ್ಡಿಂಗಿನವರು ವಿದ್ಯಾರ್ಥಿಗಳಿಗೆ ಊಟ, ವಾಸ, ದೀಪದ ಎಣ್ಣೆ ಮತ್ತು ಔಷಧಿ ಇವುಗಳನ್ನು ಮಾತ್ರ ಒದಗಿಸಿ ಕೊಡುತ್ತಾರೆ; ಉಳಿದವುಗಳನ್ನು ವಿದ್ಯಾರ್ಥಿಗಳೇ ತರತಕ್ಕದ್ದು.

ತಾ. ೨೨ ರಲ್ಲಿ ಧಾರವಾಡದ ಲಿಂಗಾಯತ ನಗರಭವನದಲ್ಲಿ ಶ್ರೀ ಕಲ್ಲೂರ ರಾಯನಗೌಡರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪಿಕ್ಕೆಲಶನ ಶಿಕ್ಷಕರ ಪರಿಷತ್ತು ಸೇರಿತ್ತು. ವೃತ್ತಿಮೂಲ ಶಿಕ್ಷಣ ಪ್ರಸಾರದಲ್ಲಿ ನಿರತರಾಗಿದ್ದಕ್ಕೆ ಸರಕಾರವನ್ನಭಿನಂದಿಸಲಾಯಿತು. ಬಳಿಕ ಅಧ್ಯಕ್ಷರು ಭಾಷಣ ಮಾಡುತ್ತ 'ನಿಂತಿನಲ್ಲಿ ಯಶಸ್ವಿಗಳಾದೆವೆಂದು ಹೆಮ್ಮೆ ಪಡಬೇಡಿರಿ. ದೇಶಕ್ಕಾಗಿ ಪ್ರೇಮ ಉತ್ಸಾಹಗಳಿಂದ ದುಡಿಯಿರಿ. ಯಾವ ರಾಜಕೀಯ ಪಕ್ಷಕ್ಕೂ ಸೇರದೆ ಸ್ವತಃ ಸುಸಂಘಟಿತರಾಗಿ ನಿಮ್ಮ ಕೆಲಸ ಸಾಧಿಸಿಕೊಳ್ಳಿರಿ' ಎಂದು ಮುಂತಾಗಿ ಶಿಕ್ಷಕರಿಗೆ ಉಪದೇಶ ಮಾಡಿದರು.

ಧಾರವಾಡದ ಕ. ಗಂ. ಟ್ರೇನಿಂಗ ಕಾಲೇಜನಲ್ಲಿ ದಿನಾಂಕ ೫ ರಿಂದ ೧೫ ರ ವರೆಗೆ ನಡೆದ ಡ್ರಾಯಿಂಗ ವರ್ಗದ ಮುಕ್ತಾಯ ಸಮಾರಂಭವು ದಕ್ಷಿಣ ಭಾಗದ ವಿದ್ಯಾಧಿಕಾರಿಗಳಾದ ಶ್ರೀ ಸಾನೆಯವರ ನೇತೃತ್ವದಲ್ಲಿ ದಿನಾಂಕ ೧೫ ರಲ್ಲಿ ಜರುಗಿತು. ಈ ಸಮಾರಂಭಕ್ಕೆ ಡ್ರಾಯಿಂಗ ಇನಸ್ಪೆಕ್ಟರರಾದ ಶ್ರೀ ಬಡಿಗೇರರೂ ಆಗಮಿಸಿದ್ದರು.

ಗದಗದ ನಗರ ಸಭೆಯ ಹೈಸ್ಕೂಲು ಡ್ರಾಯಿಂಗ್ ಶಿಕ್ಷಕರಾದ ಶ್ರೀ ಟಿ. ಪಿ. ಅಕ್ಕಿ ಅವರು ಡ್ರಾಯಿಂಗ್ ಮಾಸ್ಟರ್ ಪರೀಕ್ಷೆಯಲ್ಲಿ ಮುಂಬಯಿ ಪ್ರಾಂತಕ್ಕೆ ಮೊದಲಿಗರಾಗಿ ತೇರ್ಗಡೆ ಹೊಂದಿದ್ದಾರೆ.

ನರೇಗಲ್ಲಿನ ಸರ್ಕಲ್ ಇನಸ್ಪೆಕ್ಟರರು ಜೋಳದ ಹಗೆಗಳನ್ನು ತೆಗೆದು ಅವುಗಳಲ್ಲಿಯ ಜೋಳ ಜಪ್ತ ಮಾಡಿದ್ದಾರೆ.

ರೋಣ ತಾಲೂಕಿನ ಪ್ರಾಥಮಿಕ ಶಿಕ್ಷಕರಿಗೆ ಫೆಬ್ರುವರಿ ತಿಂಗಳ ಪಗಾರವೇ ಇನ್ನೂ ಕೈಸೇರಿಲ್ಲ ಶಿಕ್ಷಕರು ದುಡ್ಡಿಲ್ಲದೆ ಪೇಚಾಡುತ್ತಾರೆ.

ಧಾರವಾಡದ ಕಲೆಕ್ಟರರು ಧಾರವಾಡ, ಹುಬ್ಬಳ್ಳಿ, ಗದಗ, ರಾಣೆಬೆನ್ನೂರ, ಹಾವೇರಿ, ಗಜೇಂದ್ರಗಡ ಈ ಸೀದಾ ಕ್ಷೇತ್ರಗಳಲ್ಲಿರುವವರು ತಮಗೆ ತಾ ೧೬—೬—೪೭ರೊಳಗೆ ತಮ್ಮ ಧಾನ್ಯ ಸಂಗ್ರಹವನ್ನು ತಿಳಿಸಬೇಕೆಂದು ತಿಳಿಸುತ್ತಾರೆ. ಮೇಲಿನ ಆಜ್ಞೆಯನ್ನು ಉಲ್ಲಂಘಿಸಿ ಧಾನ್ಯಸಂಗ್ರಹವನ್ನು ತಿಳಿಸದವರ ಧಾನ್ಯವನ್ನು ಜಪ್ತಮಾಡಲಾಗುವದೆಂದೂ ಆದರೆ ಕಾರ್ಡಿನಮೇಲೆ ಪಡೆದುಕೊಂಡ ಧಾನ್ಯಸಂಗ್ರಹಕ್ಕೆ ಈ ಆಜ್ಞೆ ಅನ್ವಯಿಸುವದಿಲ್ಲೆಂದೂ ಹೇಳಲಾಗಿದೆ.

ತಾ ೨೫ ರಲ್ಲಿ ಗದಗ ಭಾವಸಾರ ಕ್ಷತ್ರಿಯ ಸಹಕಾರ ಸಂಘದವರು ಇಂಡಿಯನ್ ಪ್ರೆಸ್ ಅಸೋಸಿಯೇಶನ್ನಿನ ಸಂಸ್ಥಾಪಕರಲ್ಲೊಬ್ಬರಾದ ಶ್ರೀ ಶ್ರೀಧರ ಕೇಲಕರರ ಸನ್ಮಾನಮಾಡಿದರು.

ಉತ್ತರ ಕನ್ನಡ

ಹಳಿಯಾಳ ತಾಲೂಕ ಕಾಂಗ್ರೆಸ ಕಮಿಟಿಯ ಸಾಧಾರಣ ಸಭೆಯು ತಾ ೧೯ ರಲ್ಲಿ ಸೇರಿ ಶ್ರೀರಾಮಚಂದ್ರ ಉರ್ಫ್ ಖಂಡೋಪಂತ ಗೋಪಾಳರಾವ ಕಾಮತ ವಕೀಲ ಅವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಕುಮಟೆಯ ಕೆನರಾ ಕಾಲೇಜ ಸೊಸಾಯಿಟಿಯ ಕಾರ್ಯದರ್ಶಿಗಳು ಕೆಳಗಿನಂತೆ ತಿಳಿಸುತ್ತಾರೆ.

'ಸರಕಾರದಿಂದ ಮುಕ್ಕಟೆಯಾಗಿ ಸಿಕ್ಕ ಭವ್ಯ ವಿಸ್ತೀರ್ಣ ಪ್ರದೇಶದಲ್ಲಿ ಸಂಸ್ಥೆಯ ಕಟ್ಟಡಗಳ

ಬೆಳಗಾವಿ

ಬೆಳಗಾವ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ತಾ. ೨೧ ಬುಧವಾರ ಖಾನಾಪುರದಲ್ಲಿ ಕೂಡಿತ್ತು. ಬೇರೆ ಬೇರೆ ಭಾಗಗಳಿಂದ ಸುಮಾರು ೧೫೦ ಕಾರ್ಯಕರ್ತರು ಬಂದಿದ್ದರಲ್ಲದೆ ಪ್ರಾಂತಾಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಮತ್ತು ಮಾನ್ಯ ಎಂ ಪಿ. ಪಾಟೀಲರು ಉಪಸ್ಥಿತರಿದ್ದರು. ಸಂಘಟನೆಯ ಬಗ್ಗೆ ದೀರ್ಘ ಚರ್ಚೆ ನಡೆದು ಅದಕ್ಕಾಗಿ ನಿಧಿ ಸಂಗ್ರಹಿಸಿ ತಾಲೂಕಿಗೆ ಇಬ್ಬರಂತೆ ವೇತನ ಕೊಟ್ಟು ಕಾರ್ಯಕರ್ತರನ್ನು ನೇಮಿಸಬೇಕೆಂದೂ ಜಿಲ್ಹೆಯಲ್ಲಿ ೫೦೦ ವಸ್ತ್ರಸ್ವಾವಲಂಬಿಗಳನ್ನು ಮಾಡಬೇಕೆಂದೂ ಕರ್ನಾಟಕ ರಾಷ್ಟ್ರೀಯ ಮಜೂರ ಸಂಘಕ್ಕೆ ಮಾನ್ಯತೆಕೊಡಬೇಕೆಂದೂ ಗೊತ್ತುವಳಿಗಳಾದವು. ಪ್ರಾರಂಭದಲ್ಲಿ ದಿ. ಅಧ್ಯಾಪಕರ ನಿಧನ ಕುರಿತು ದುಃಖ ಪ್ರದರ್ಶನ ನಿರ್ಣಯವಾಯಿತು.

ಬೆಳಗಾವಿಯಲ್ಲಿ ಜಿಲ್ಲೆಯ 'ಅ' ವರ್ಗದ ಏಡೆಡ್ ಶಾಲೆಗಳ ಸಭೆ ಕಳೆದ ಪಕ್ಷದಲ್ಲಿ ಸೇರಿತ್ತು. ಪ್ರಾಥಮಿಕ ಶಾಲೆಗಳಿಗಾಗಿ ಸರಕಾರದವರು ಮಾಡಿದ ಸುಧಾರಣಾನಿರ್ಣಯ ಅಸಮಾಧಾನಕರವಿದೆ. ಖಾಸಗಿ ಶಾಲೆಗಳ ಸಹಾಯ ಧನ ಮೂನ್ಸಿ ಕಮಿಟಿ ವರದಿಯ ಮೇಲೆ ದೊರೆಯಬೇಕು. ಶಲೆ ಪದ್ಧತಿ ಮತ್ತು ಎರಡರಲ್ಲಿ ಕಡಿಮೆ ಬರುವ ಹಣ ಎಂಬ ಪದ್ಧತಿ ತೆಗೆದು ಹಾಕಬೇಕು. ೪೦ ಹುಡುಗರಿಗೆ ಒಬ್ಬ ಶಿಕ್ಷಕನೆಂದು ಗ್ರಹಿಸದೆ ಒಂದು ಕ್ಲಾಸಿಗೆ ಒಬ್ಬ ಶಿಕ್ಷಕನೆಂದು ಹಿಡಿಯಬೇಕು. ತುಟ್ಟಿ ಭತ್ತೆ, ಬೋನಸ್ಸು, ಪರಿಹಾರ—ಇವುಗಳನ್ನು ಉಳಿದ ಶಾಲೆಗಳಿಗೆ ಕೊಟ್ಟ ತಾರೀಖಿನಿಂದ ಈ ಶಾಲೆಗಳಿಗೂ ಕೊಡಬೇಕು. ಈ ಬೇಡಿಕೆಗಳನ್ನು ಪೂರೈಸದಿದ್ದರೆ ತಮ್ಮ ಸಂಘದ ಅಧೀನದಲ್ಲಿರುವ ಶಾಲೆಗಳನ್ನು ಮುಚ್ಚುವದಾಗಿ ಬೆಳಗಾವ ಜಿಲ್ಹಾ ಬೋರ್ಡಿನ ಏಡೆಡ್ ಶಾಲೆಗಳ ಸಂಘದವರು ನಿರ್ಣಯಿಸಿದ್ದಾರೆ.

ಜಾತೀಯ ಗಲಭೆಗಳ ಶಾಂತಿಗಾಗಿ ಬೆಳಗಾವಿಯಲ್ಲಿ ಪ್ರಾರಂಭಿಸಲ್ಪಟ್ಟ ವಿಷ್ಣುಯಾಗ ಹಾಗೂ ಜ್ಞಾನಸತ್ರಗಳು ಉತ್ಸಾಹದಿಂದಕೊನೆಗಂಡವು. ಮೆರವಣಿಗೆ, ಉಪನ್ಯಾಸ ಮಾಡಲಾದ ಕಾರ್ಯಕ್ರಮಗಳು ಜರುಗಿದವು.

ವಿಜಾಪುರ

ತಾ ೧೮ರ ರಾತ್ರಿ ೯ ಘಂಟೆಗೆ ವಿಜಾಪುರ ಜಿಲ್ಹಾ ಪುನರ್ರಚನಾಪರಿಷತ್ತಿಗೆ ದಯಮಾಡಿಸಿದ್ದ ಮಾನ್ಯ ಎಲ್. ಎಂ. ಪಾಟೀಲರವರು ಜಿಲ್ಹಾ ಕಾಂಗ್ರೆಸ ಕಮಿಟಿಯ ಪರವಾಗಿ ವಿಜಾಪುರದ ಯುನಿಯನ್ ಕ್ಲಬ್ಬಿನಲ್ಲಿ ಶ್ರೀ. ಮುದೆಯವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡುತ್ತ ಹೊಟ್ಟೆಬಟ್ಟೆಯ ಸಂಕಷ್ಟಗಳನ್ನು ನಿವಾರಿಸಲು ಮಂತ್ರಿಮಂಡಳವು ಕೈಕೊಂಡ ಕಾರ್ಯಗಳನ್ನು ವಿವರಿಸಿ ಬೇಕಾದ ಎಲ್ಲ ಆಹಾರ ಪೂರೈಸುವದು ಶಕ್ಯವಾಗದಿದ್ದರೂ ಕೂಳಿಲ್ಲದೆ ಯಾರನ್ನೂ ಕೊಲ್ಲುವದಿಲ್ಲವಾಗಿ ಆಶ್ವಾಸನ ಕೊಟ್ಟರು.

ಬಾಗಲಕೋಟೆಯಲ್ಲಿ ದಿನಾಂಕ ೨೪ರಲ್ಲಿ ಹಾರ್ಡಿಂಜ ವಾಚನಾಲಯದಲ್ಲಿ ಸಂಗೀತ ಕಲೋಪಾಸಕರ ಸಂಘವೊಂದು ಶ್ರೀ. ವೆಂಕಪ್ಪ ಸಕ್ರಿ ಅವರ ಹಸ್ತದಿಂದ ಆರಂಭವಾಯಿತು.

ದಿನಾಂಕ ೨೪ ರಲ್ಲಿ ಬಾಗಲಕೋಟೆಯ ಹರಿಜನಕೇರಿಯಲ್ಲಿ ಹರಿಜನ ಸಭೆ ಸೇರಿ ಶಾಲಾಕಟ್ಟಡ ಕೊಟ್ಟದ್ದಕ್ಕೆ ನಗರ ಸಭೆಯವರನ್ನು ಅಭಿನಂದಿಸಲಾಯಿತು, ನಗರ ಸಭೆಯ ಹರಿಜನ ನೌಕರರ ಸಭೆ ಶ್ರೀ. ಗುರುರಾವ್ ಜೋಯಿಸರರ ಅಧ್ಯಕ್ಷತೆಯಲ್ಲಿ ಜರುಗಿ ಅನೇಕರ ಭಾಷಣಗಳಾದವು.

ವಿಜಾಪುರದಲ್ಲಿ ತಾ. ೨೦ರ ರಾತ್ರಿ ಭಯಂಕರ ಬಿರುಗಾಳಿ ಬೀಸಿ ವಿದ್ಯುತ್ ಕಂಬಗಳೆಲ್ಲ ಕತ್ತರಿಸಿ ಹೋದ್ದರಿಂದ ಪಟ್ಟಣವೆಲ್ಲ ಕಗ್ಗತ್ತಲೆಯಲ್ಲಿ ಮುಳುಗಿತ್ತು. ಅನೇಕ ಗಿಡಗಳು ಉರುಳಿಬಿದ್ದದ್ದಲ್ಲದೆ ಎಷ್ಟೋ ಚಪ್ಪರಗಳೂ ಹಾರಿಹೋದವು. ಗುಡುಗಿನಿಂದ ಕೂಡಿದ ಮಳೆಯೂ ಆಯಿತು.

ಶಂಕುಸ್ಥಾಪನೆಯನ್ನು ಜೂನ ೧೪ ನೆಯ ತಾರೀಕಿನ ದಿವಸ ಬೆಳಿಗ್ಗೆ ೭॥ ಗಂಟೆಗೆ ಮುಂಬಯಿಯ ಡಾ. ಬಿ. ಡ್ಡಿ. ಬಾಳಿಗಾ, ಎಫ್. ಆರ್. ಸಿ. ಎಸ್. ಇವರ ಹಸ್ತದಿಂದ ಮಾಡಿಸುವವರಿದ್ದು ಮುಖ್ಯಮಂತ್ರಿ ಶ್ರೀ ಖೇರರನ್ನು ಅಧ್ಯಕ್ಷತನಕ್ಕಾಗಿ ನಿಮಂತ್ರಿಸಲಾಗಿದೆ. ವಿದ್ಯಾಭಿಮಾನಿಗಳೆಲ್ಲರೂ ಈ ಸಮಾರಂಭಕ್ಕೆ ದಯಮಾಡಿಸಬೇಕು.

ಬಳ್ಳಾರಿ

ಹರಪನಹಳ್ಳಿಯಲ್ಲಿ ನಡೆದ ೩೦ ನೆಯ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ದಯಮಾಡಿಸಿದ ಯುವಜನ ತಾ ೯—೫—೪೭ ರಲ್ಲಿ ಸಭೆ ಸೇರಿದ್ದರು. ಕರ್ನಾಟಕದ ನಾನಾ ಭಾಗಗಳಿಂದ ಸುಮಾರು ನೂರುಜನ ಯುವಕರು ಸಭೆಗೆ ಬಂದಿದ್ದರು. ಶ್ರೀ ಕುಳಕಂದ ಶಿವರಾಯರು ಅಧ್ಯಕ್ಷತೆ ವಹಿಸಿದರು. ಭಾಷಾವಾರ ಪ್ರಾಂತರಚನೆಯ ಕಾಲ ಸನ್ನಿಹಿತವಾಗುತ್ತಿರುವಾಗ ಪರಪ್ರಾಂತೀಯರ ಆಕ್ರಮಣಕ್ಕೊಳಗಾದ ಕನ್ನಡ ಗಡಿನಾಡುಗಳಲ್ಲಿ ಪ್ರಚಾರ ಕಾರ್ಯವು ತೀವ್ರವಾಗಿ ಆಗಬೇಕು. ಅಲ್ಲದೆ ನಾಡಿನ ಮೂಲೆ ಮೂಲೆಗಳಲ್ಲಿರುವ ಯುವಜನರ ಪರಸ್ಪರ ಪರಿಚಯ ಬೆಳೆದು ಸಮಗ್ರ ನಾಡಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಜಾಗ್ರತಿಯು ಆಗಬೇಕು. ಎಂದು ಮುಂತಾಗಿ ಭಾಷಣಮಾಡಿದರು.

ಹರಪನಹಳ್ಳಿಯ ತೆಗ್ಗಿನ ಮಠದ ಪಟ್ಟಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಹಾಸ್ವಾಮಿಗಳವರು ತಾ. ೧೨ ರಲ್ಲಿ ಲಿಂಗೈಕ್ಯರಾದರೆಂಬ ವಿಷಾದದ ಸಂಗತಿ ತಿಳಿದು ಬಂದಿದೆ.

ಮದ್ರಾಸ ಸರಕಾರದವರು ಆಂಧ್ರ ವಿಶ್ವವಿದ್ಯಾನಿಲಯದ ಕಾರ್ಯಕ್ಷೇತ್ರದಲ್ಲಿ ದತ್ತ ಮಂಡಲ ಮತ್ತು ಚಿತ್ತೂರು ಜಿಲ್ಲೆಗಳನ್ನು ಸೇರಿಸುವ ೮ ಪ್ರಶ್ನೆಗಳನ್ನು ವಿಚಾರಿಸುವುದಕ್ಕೆ ಒಂದು ಸಮಿತಿಯನ್ನು ಏರ್ಪಡಿಸಿದ ಕೆಲವು ದಿನಗಳಲ್ಲಿಯೇ ಬಳ್ಳಾರಿ ಜಿಲ್ಹೆಯ ನಾಭಿ ಸಂಸ್ಥೆಗಳಿಗೂ ಇಡಿಯ ಕನ್ನಡ ಜನಾಂಗಕ್ಕೂ ವಿಸಂತಿ ಮಾಡಿಕೊಂಡು ಜಾಹೀರು ಸಭೆಗಳನ್ನು ಏರ್ಪಡಿಸಿ ಬಳ್ಳಾರಿ ಜಿಲ್ಹೆಯ ಕನ್ನಡಿಗರು ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಸೇರುವದಿಲ್ಲೆಂದೂ ಪ್ರತ್ಯೇಕ ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪಿಸಲ್ಪಡುವ ವರೆಗೆ ಈಗಿರುವಂತೆ ಮದ್ರಾಸ ವಿಶ್ವವಿದ್ಯಾನಿಲಯದಲ್ಲಿರಬೇಕೆಂದೂ ಗೊತ್ತುವಳಿ ಪಾಸು ಮಾಡಿ ಅಧಿಕೃತ ವ್ಯಕ್ತಿಗಳಿಗೆ ಕಳುಹಬೇ

ಕನ್ನಡ ಸಂಸ್ಥಾನ

ಶಿವಮೊಗ್ಗೆಯಲ್ಲಿ ಸಂಸ್ಥಾನದ [illegible] [illegible] [illegible] ಕರ್ನಾಟಕ ಸಂಘದ ಭವನದಲ್ಲಿ [illegible] ವಿದ್ಯಾಧಿಕಾರಿಗಳಾದ ಶ್ರೀ [illegible] ಅವರ ನವ ಕಟ್ಟಡದ [illegible] ಅಧ್ಯಕ್ಷತೆಯಲ್ಲಿ [illegible] ಜರುಗಿತು. ಶ್ರೀ [illegible] [illegible] ಮಾಡಿದರು. [illegible] ಸಂಸ್ಥಾನದ [illegible] ಗಳಾದ ಶ್ರೀ ಎಂ [illegible] ಅವರು [illegible] ಪ್ರಾರಂಭೋತ್ಸವವನ್ನು ನಡೆಸಿದರು. ತಾ. ೨೬ ರಲ್ಲಿ ಶ್ರೀ [illegible] ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ [illegible] ಪರಿಷತ್ತು ಸೇರಿತ್ತು. ಪರಿಷತ್ತಿಗೆ [illegible] [illegible] ಹಿಂದೀ ಜ್ಯೋತಿಷಶಾಸ್ತ್ರ ಮತ್ತು [illegible] ಶಾಸ್ತ್ರದ ಹಿರಿಮೆಯನ್ನು ಮನದಟ್ಟಾಗುವಂತೆ ತೋರಿಸಿ ಕೊಟ್ಟರು.

ಜಮಖಂಡಿ ಪ್ರಜಾ ಪರಿಷತ್ತಿನ [illegible] ಕ್ಷರೂ ಸಂಸ್ಥಾನದ ಪ್ರಮುಖ [illegible] ಅದ, ಶ್ರೀ. ಎ. ಬಿ. ಸಾಲಕೆಯವರು [illegible] ಹಾರ ಇರಿಯಲ್ಪಟ್ಟು ಮರಣಹೊಂದಿದರೆಂಬ ವಿಷಾದಕರ ಸಂಗತಿ ತಿಳಿದು ಬಂದಿದೆ. ಅವರ ಸ್ಮಶಾನಯಾತ್ರೆಗೆ ಸಾವಿರಾರು ಜನರು ನೆರೆದಿದ್ದರು. ದಕ್ಷಿಣ ಸಂಸ್ಥಾನದ ಪ್ರಜೆಗಳೆಲ್ಲ ದುಃಖದಲ್ಲಿ ಮುಳುಗಿದ್ದಾರೆ.

ಜಿಲ್ಹಾ ಲೋಕಲ್ ಬೋರ್ಡ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಕಂಬಾಳಕರ ಅವರಿಗೆ ತಾ. ೧೬ ರಲ್ಲಿ ದೇವಗಿರಿಯಲ್ಲಿ ಸನ್ಮಾನ ಸಮಾರಂಭ ಜರುಗಿತು.

ವಾಡಿ ಹಾಗೂ ಕೊಲ್ಲಾಪುರ ಬಿಟ್ಟು ಉಳಿದ ದಕ್ಷಿಣ ಸಂಸ್ಥಾನಗಳಿಗೆ ಸಾಮಯಿಕ ಕಾರ್ಯನಿರ್ವಾಹ ಮಂಡಳ ರಚಿಸುವ ಯೋಜನೆ ವಿಚಾರ ಮಾಡಲು ತಾ ೨೨ ರಲ್ಲಿ ಕೊಲ್ಲಾಪುರ ರೆಸಿಡೆನ್ಸಿಯಲ್ಲಿ ದಕ್ಷಿಣ ಸಂಸ್ಥಾನಿಕರ ಸಭೆ ಸೇರಿ ಮಿರಜದಲ್ಲಿ ಅದರ ಕಚೇರಿ ಸ್ಥಾಪಿಸಬೇಕೆಂದೂ ಅದರ ವೆಚ್ಚಕ್ಕೆ ೩ ಲಕ್ಷ ರೂಪಾಯಿಯನ್ನು ಕೂಡಿಸಬೇಕೆಂದೂ ನಿರ್ಧರಿಸಲಾಯಿತು.

ಕೆಂದು ತಾವು ಮಾಡಿಕೊಂಡ ವಿನಂತಿಯನ್ನು ಮಾನ್ಯಮಾಡಬೇಕೆಂದು ಹೊಸಪೇಟೆಯ ಶ್ರೀ ಮುತ್ತಿಹಳ್ಳಿ ರಾಘವೇಂದ್ರರಾಯರು ತಿಳಿಸುತ್ತಾರೆ.

ಭಾರತ ಸಯಾಮ ಸಾಂಸ್ಕೃತಿಕ ಸಂಬಂಧ

(೬ ನೇ ಪುಟದಿಂದ)

ಭಾರತೀಯ ಸಂಸ್ಕೃತಿಗಳಲ್ಲಿರುವ ಉತ್ತಮವಾದ ಅಂಶಗಳನ್ನೆಲ್ಲ ನಾವು ತೆಗೆದುಕೊಂಡೆವು ; ಮತ್ತು ಅದನ್ನು ಥೈಕುಲದ ಪ್ರತಿಭೆಗನುಗುಣವಾಗಿ ತಿದ್ದಿ ಸರಿಪಡಿಸಿಕೊಂಡು ನಮ್ಮ ಜೀವ ಜೀವಾಳವಾಗಿ ಮಾರ್ಪಡಿಸಿಕೊಂಡೆವು.

ಭಾರತದ ಸಂಸ್ಕೃತಿಯ ರಕ್ಷಣೆ

ತಮ್ಮಲ್ಲಿ ಮೂಲತಃ ಇದ್ದ ಕಲಾ ಕೌಶಲ್ಯ ಮತ್ತು ಕುಲಸಹಜವಾದ ವಿಶಿಷ್ಟ ಲಕ್ಷಣಗಳಿಂದ ಥೈ ಜನರು ಪ್ರಾಚೀನ ಸಾಂಸ್ಕೃತಿಕ ಹಿನ್ನೆಲೆಯಿಂದ ಭಿನ್ನ ಸ್ವರೂಪವಾದ ತಮ್ಮ ಕಲೆಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಬಿಂಬಿಸಲು ಶಕ್ತರಾದರು. ಸಯಾಮಿನ ನೆಲದಲ್ಲಿ ತನ್ನ ಸಂಸ್ಕೃತಿಗಳನ್ನು ಬಿತ್ತಿ ನೆಲೆ ನಿಲ್ಲಿಸುವ ಯೋಜನೆಯನ್ನು ಭಾರತವು ಸಾಧಾರಣ ಆರೇಳು ನೂರು ವರುಷಗಳ ಹಿಂದೆಯೇ ಪೂರೈಸಿತು. ಪೂರೈಸಿತೆಂದು ಏಕೆ ಹೇಳಬೇಕಾಯಿತೆಂದರೆ ಅನಂತರ ಹಿಂದುಸ್ತಾನವು ತನ್ನ ಒಳಗೆಲಸದಲ್ಲೇ ನಿರತವಾಗುವ ಸಂದರ್ಭ ಬಂದುದರಿಂದ ಮೊದಲಿನಂತೆ ಶಾಂತಿಯುತವಾಗಿ ಹೊರನಾಡುಗಳಲ್ಲಿ ಸಾಂಸ್ಕೃತಿಕ ದಾಳಿಯಿಡಲು ಸಮರ್ಥವಾಗಲಿಲ್ಲ. ಆಗ ಪರಂಪರಾಗತ ಭಾರತೀಯ ಸಂಸ್ಕೃತಿಗಳ ಆಧಾರದ ಮೇಲೆ ಸಯಾಮವು ತನ್ನದೇ ಆದ ಕಲೆ ಸಂಸ್ಕೃತಿಗಳನ್ನು ಬೆಳಸಿಕೊಳ್ಳಬೇಕಾಯಿತು. ಸಯಾಮವು ತನ್ನ ಸ್ವಾತಂತ್ರ್ಯವನ್ನೂ ಸಾರ್ವಭೌಮಾಧಿಕಾರವನ್ನೂ ಕಲಕಾಲಾಂತರದ ವರೆಗೆ ಉಳಿಸಿಕೊಂಡು ಬಂದಿರುವುದರಿಂದ ಹಿಂದುಸ್ತಾನವು ಕಳೆದುಕೊಂಡ ಕೆಲವು ಸಾಂಸ್ಕೃತಿಕ ಅಂಶಗಳನ್ನು ಸುರಕ್ಷಿತವಾಗಿರಿಸಲು ಅದು ಶಕ್ತವಾಯಿತು.

ಥೈ ಭಾರತ ಸಾಂಸ್ಕೃತಿಕ ಕೇಂದ್ರ

ನಾವು ಇಂದೀಗ ಸಯಾಮಿ ಸಂಬಂಧಗಳನ್ನು ಪುನರುಜ್ಜೀವಿಸಿ ಹಿಂದೀಯರಿಗೂ ಸಯಾಮಿಗೂ ಸಾಮಾನ್ಯವಾದ ಸಾಂಸ್ಕೃತಿಕ ಮೈತ್ರಿಯನ್ನು ಬೆಳಸಲು ಪ್ರಯತ್ನ ನಡೆಸಿದ್ದೇವೆ. ಗತಿಸಿದ ಸ್ವಾಮಿ ಸತ್ಯಾನಂದ ಪುರಿಯವರ ಪ್ರತಿಭೆಯಿಂದಲೂ ಶ್ರೀ ದೇವನಾಥದಾಸ ಮತ್ತು ಪಂಡಿತ ರಘುನಾಥ ಶರ್ಮರ ಸಂಘಟಕ ಶಕ್ತಿಯಿಂದಲೂ ಈಗ ೭ ವರುಷಗಳ ಹಿಂದೆ ಥೈ ಭಾರತ ಸಾಂಸ್ಕೃತಿಕ ಕೇಂದ್ರವು ಬ್ಯಾಂಕಾಕನಲ್ಲಿ ಸ್ಥಾಪಿಸಲ್ಪಟ್ಟಿತು. ಆ ಸಂಸ್ಥೆಯು ಬಿಕ್ಕಟ್ಟು ಪರಂಪರೆಗಳೆಷ್ಟೇ ಬಂದರೂ ಗಮನಿಸದೆ ತನ್ನ ಕರ್ತವ್ಯವನ್ನು ಮಾಡುತ್ತ ನಡೆದಿದೆ. ನೇತಾಜಿ ಸುಭಾಷಚಂದ್ರ ಬೋಸರು ಸಯಾಮಕ್ಕೆ ಬಂದಾಗ ಅದಕ್ಕೆ ತಮ್ಮ ಬೆಂಬಲ ಮತ್ತು ಆಶೀರ್ವಾದಗಳನ್ನು ಕೊಟ್ಟಿದ್ದರು. ಸಯಾಮಿಗಳಿಗೂ ಸಯಾಮದಲ್ಲಿಯ ಭಾರತೀಯರಿಗೂ ಅಂತಹ ಸಂಸ್ಥೆ ಅದೊಂದೇ ಆಗಿದೆ. ಸಂಸ್ಥೆಯ ಸಭ್ಯದ ಅಧ್ಯಕ್ಷನಾಗಿರುವ ಗೌರವವು ಈಗ ನನ್ನ ಪಾಲಿಗೆ ಬಂದಿದೆ.

ನಮ್ಮ ಕಾರ್ಯಕ್ರಮಗಳು ಈ ಕೆಳಗಿನಂತಿವೆ:—

೧. ಪಂಡಿತರ ಪರಸ್ಪರ ವಿನಿಮಯ.

೨. ಸಂಸ್ಕೃತ ಮತ್ತು ಹಿಂದುಸ್ತಾನಿಯನ್ನು ಸಯಾಮಿಗಳಿಗೆ ಕಲಿಸುವುದು ಮತ್ತು ಸಯಾಮಿಯನ್ನು ಹಿಂದೀಯರಿಗೆ ಕಲಿಸುವುದು.

೩. ಅವಲೋಕನಕ್ಕಾಗಿ ಒಂದು ಗ್ರಂಥಾಲಯವನ್ನು ಸ್ಥಾಪಿಸುವುದು.

೪. ಉಚಿತ ಚಿಕಿತ್ಸಾಲಯವೊಂದನ್ನು ತೆರೆಯುವುದು:

೫. ಒಂದು ಕಲಾವಿಭಾಗವನ್ನು ತೆರೆಯುವುದು.

೬. ಭಾರತೀಯರ ಮಕ್ಕಳಿಗೆ ರಾಷ್ಟ್ರೀಯ ವಿದ್ಯಾಭ್ಯಾಸ ಸಿಕ್ಕಲು ಸಹಾಯ ಮಾಡುವುದು.

೭. ಭಾರತೀಯರ ಮತ್ತು ಸಯಾಮೀಯರ ಮಕ್ಕಳಿಗಾಗಿ ಆಟ ಪಾಠಗಳನ್ನು ಏರ್ಪಡಿಸುವುದು.

ಈಗ ಕಾದೋಡುಗಳು ಸರಿಯು ಹೋಗಿ ಭಾರತವು ಸ್ವಾತಂತ್ರ್ಯವನ್ನು ಪಡೆಯುತ್ತಿರುವುದರಿಂದ ನಾವು ಕೈಕೊಂಡ ಕಾರ್ಯ [illegible] ನಿಮ್ಮೆಲ್ಲರ ಸಹಕಾರ [illegible] [illegible] ಬೇಕಾಗಿದೆ. ಭಾರತೀಯ ಪ್ರತಿಭೆಗೆ [illegible] ಮಾನವ ಪ್ರಪಂಚಕ್ಕೇ ಉಪಕಾರ [illegible] ತಿಯನ್ನು ಬೆಳಗಿ ತೋರುವ ದಕ್ಷ [illegible] ರುವ ಭಾರತಕ್ಕೆ ನನ್ನ ಅಭಿನಂದನೆಗಳು



ಮುಂಬಯಿ

...ಮುಂಬಯಿ ಶಾಸನ ಸಭೆಯ ಸದಸ್ಯರಾದ ...ನನೆಸ್ಟ್ ಆ. ಟಿ. ಕರಂದೀಕರರು ಪಿ. ಜಿ. ಜೋಶಿ ...ಎಂಬ ವಿದ್ಯಾರ್ಥಿಗೆ ಪುಣೆಯಲ್ಲಿಯ ತಪ್ಪು ಮನೆ ...ತ್ತ ಶಾಲೆ ಕೊಟ್ಟು ಅನ್ಯಾಯದಿಂದ ಅದಕ್ಕೆ ಶೀಲಿ ...ಯ ಶಾಶ್ವತ ಬಗೆ ಎರಡು ತಲಮುಗಳನ್ನಯ ...ಗಳವರೆಗೆ ದಂಡ ವಿಧಿಸಲಾಯಿತು.

...ಈ ಸಲದ ಮುಂಬಯಿ ವಿಶ್ವವಿದ್ಯಾಲಯದ ...ವ್ಯಾಟ್ರಿಕ್ ಪರೀಕ್ಷೆಯ ಪರಿಣಾಮ ಇದೇ ಗುರು ...ವಾರ ಜೂನ ೫ ನೇ ತಾರೀಖಿನ ಮುಂಜಾನೆ ...—೩೦ ಗಂಟೆಗೆ ಪ್ರಸಿದ್ಧವಾಗುವದು.

...ಪ್ರೀವಿ ಕೌನ್ಸಿಲ್ಲಿನ ಸಂಬಂಧವನ್ನು ಹಿಂದು ...ಸ್ತಾನ ಒಮ್ಮೆಲೆ ಕಡಿದುಕೊಳ್ಳುವದು ವೇಮುಕರ ...ವಲ್ಲ. ಪಕ್ಷಕಾರರ ಹಿತದ ದೃಷ್ಟಿಯಿಂದಲೂ ...ಅದು ಹಾನಿಕರವಾಗಿದೆಂದು ಮುಂತಾಗಿ ಪ್ರೀವಿ ...ಕೌನ್ಸಿಲ್ಲಿನ ನ್ಯಾಯಾಧೀಶರಾದ ಶ್ರೀ ಎಂ. ಆರ್. ...ಜಯಕರರು ಅಭಿಪ್ರಾಯ ಪಟ್ಟಿರುವರು.

...ಮುಂಬಯಿಯಲ್ಲಿಯ ೭ ರೂಪಾಯಿ ವತನದ ...ಅಕೌಂಟಂಟ್ ಜನರಲ್ ಕಚೇರಿಯಲ್ಲಿಯ ನವಕ ...ರರು ತಿಂಗಳಿಗೆ ಸಂಪು ಹೂಡಿ ಹೊಸ ವೇತನ ...ಪ್ರಮಾಣದ ಬಗ್ಗೆ ತಮ್ಮ ಅಸಂತೋಷ ವ್ಯಕ್ತಪ ...ಡಿಸಿರುವರು.

...ಕಳೆದ ವಾರದ ಕೊನೆಗೆ ಮುಂಬೈಗೆ ಬರಲಿದ್ದ ...ಮೂವರು ಪ್ರವಾಸಿಕರು ೧೫೫ ಮೆಕ್ಕೆಕೊ ...ಡಾಲರು [ಸುಮಾರು ೫೭೦೦೦ ರೂಪಾಯಿ] ಚಿನ್ನ ...ವನ್ನು ಕಳ್ಳತನದಿಂದ ಸಾಗಿಸುತ್ತಿದ್ದಾಗ ಸುಂಕದ ...ಅಧಿಕಾರಿಗಳ ಕೈಗೆ ಸಿಕ್ಕಿ ಬಿದ್ದರು.

...ಮುಂಬಯಿ ನಗರದ ಅಸ್ತಿವಂತರು ಒಂದೂ ...ವರೆ ಕೋಟಿ ರೂಪಾಯಿಗಳನ್ನು ದಂಗೆ ಪರಿಹಾರ ...ವೆಂದು ಕೊಡಬೇಕಾಗುವದು. ೧೯೪೬ ಸಪ್ಟೆಂಬ ...ರದಿಂದ ಸಂಭವಿಸಿದ ದಂಗೆಗಳ ವಿಷಯದಲ್ಲಿ ...೪೦೦೦ ಪರಿಹಾರ ...ಕೊಡಬೇಕಿದೆ ಮುಂಡಕ ...ಕೆಲ ಪ್ರದೇಶಗಳ ಮೇಲೆ ೧೧೨೬೩೫ ರೂ. ಸಾಮೂಹಿಕ ದಂಡ ಹೇರಿದ್ದಾರೆ. ಈ ವರೆಗೆ ದಂಗೆಗಳಲ್ಲಾದ ಹಾನಿ ಪರಿಹಾರವೆಂದು ೪೩ ಲಕ್ಷಕ್ಕಿಂತ ಹೆಚ್ಚು ಪರಿಹಾರ ಕೊಟ್ಟದ್ದು ೧೯೪೫ ರ ಜಾತೀಯ ಗಲಭೆಯಲ್ಲಿ ೭೦೧೦೦೩ ರೂ. ಅಸ್ತಿ ನಾಶವಾಗಿದೆ. ೧೯೪೬ ರಲ್ಲಿಯ ದೊಂಬಿಗ ಳಲ್ಲಿ ೬೦ ಲಕ್ಷ ರೂಪಾಯಿ ಹಾನಿಯಾಗಿದೆ.

ಇಪ್ಪತ್ತೈದು ವರುಷಗಳ ನಂತರ ಶ್ರೀ ಗೋಪಾಲದಾಸ ದರಬಾರ ಇವರು ರೈಸಾರಕಲಿ ಗಾದಿಯಲ್ಲಿ ಪುನಃ ಪ್ರಸ್ಥಾಪಿತರಾದರು. ೧೯೨೧ ರ ಅಸಹಕಾರ ಚಳವಳಿಯಲ್ಲಿ ಮುಂಬಯಿ ಗವ ರ್ನರರ ಆಗಮನದ ನಿಮಿತ್ತ ಕಾಶೀವಾಡದಲ್ಲಿ ಕೂಡಿದ್ದ ರಾಜಪುತ್ರರ ದರಬಾರಕ್ಕೆ ಹೋಗದ ರಿಂದ ಅವರ ತಾಲೂಕದಾರಿಯನ್ನು ಕಸಿದುಕೊ ಳ್ಳಲಾಗಿತ್ತು.

ಮುಂಬಯಿ ಸರಕಾರದವರು ಸೂರತ ಮುನಿಸಿ ಪಲ್ ಸ್ಕೂಲಬೋರ್ಡನ್ನು ಜುಲೈ ೨೮ ರಿಂದ ರದ್ದುಪಡಿಸಿದ್ದಾರೆ. ಪ್ರಾಥಮಿಕ ಶಿಕ್ಷಣ ಕಾಯ ದೆಯನ್ನಯ ತನ್ನ ಹೊಣೆಯನ್ನು ನಿರ್ವಹಿಸಲು ಅದು ಅಸಮರ್ಥವಾಗದಿದ್ದುದೆ ಇದರ ಕಾರಣ.

ಬಡೋದೆಯ ಸಿದ್ಧಪೂರ ಹಳ್ಳಿಯಲ್ಲಿ ೩೦೦೦ ಜನ ಕೂಡಿ ಸರಕಾರಿ ಕಾಳಿನ ಅಂಗಡಿಯನ್ನು ಲೂಟ ಮಾಡಿರುವರು. ಕಾಳಿನ ಅಭಾವವೆ ಇದಕ್ಕೆ ಕಾರಣ.

ಜಿಲ್ಲಾ ಲೋಕಲ್ ಬೋರ್ಡಗಳಿಗೆ ನವಕರರ ತುಟ್ಟಿ ಭತ್ತೆ ಸಂಬಂಧದಲ್ಲಿ ೧೯೪೬–೪೭ ಹಾಗು ೪೭ ರಲ್ಲಿ ಬಂದ ವೆಚ್ಚದಲ್ಲಿ ಅರ್ಧ ಹಣವನ್ನು ಸರ ಕಾರದಿಂದ ಕೊಡುವದಕ್ಕೆ ಸರಕಾರ ಈಗಾಗಲೆ ಒಪ್ಪಿಗೆ ಕೊಟ್ಟಿದೆ. ಇದಲ್ಲದೆ ಅವುಗಳಿಗೆ ಹೆಚ್ಚಿನ ಪರಿಹಾರವೆಂದು ೧೯೪೮ ಮಾರ್ಚ ೩೧ ಕೊನೆಯ ವರೆಗೆ ತಾತ್ಪೂರ್ತಿಕ ಹೆಚ್ಚಿನ ಸಂಬಳದ ಅರ್ಧ ವೆಚ್ಚವನ್ನು ಮುಂಬಯಿ ಸರಕಾರ ವಹಿಸುವ ದಾಗಿ ತಿಳಿಯುತ್ತದೆ.

ಜಳಗಾಂವದ ಮೋಟರ ವಾಹನಗಳ ಇನ ಸ್ಪೆಕ್ಟರರಾದ ಶ್ರೀ ಡಿ. ಜಿ. ಹಮುದ ಇವರಿಗೆ ಲಂಚದ ಸಂಬಂಧದಲ್ಲಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ೧ ವರ್ಷ ಸಶ್ರಮಶಿಕ್ಷೆ ಮತ್ತು ೨೫೦ ರೂ ದಂಡ ವಿಧಿಸಿದರು.

ಹೊಸದಿಲ್ಲಿ

ಇದು ವರೆಗೆ ಅಮೇರಿಕೆಯಲ್ಲಿ ಹಿಂದುಸ್ತಾನದ ಏಜಂಟ ಜನರಲ್‌ರಾಗಿದ್ದ ಸರ್ ಗಿರಿಜಾಶಂಕರ ವಾಜಪೇಯವರು ಹಿಂದುಸ್ತಾನ ಸರಕಾರದ ವಿದೇಶ ಶಾಖೆಯ ಜನರಲ್ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತದೆ. ಆದು ದರಿಂದ ಅವರು ನೇಪಾಳಕ್ಕೆ ಹಿಂದೀ ರಾಯ ಭಾರಿಗಳಾಗಿ ಹೋಗಲಿಕ್ಕಿಲ್ಲ.

ಪ್ರಾಂತಿಕ ಘಟನಾ ಉಪಸಮಿತಿಗೆ ಘಟನಾ ಸಮಿತಿಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಆಚಾರ್ಯ ಕೃಪಲಾನಿ, ಶಂಕರರಾವ ದೇವ, ರಂಗನಾಥ ದಿವಾಕರ ಮತ್ತು ಎಸ್. ನಾಗಪ್ಪ ಇವರನ್ನು ಸದಸ್ಯರನ್ನಾಗಿ ನೇಮಿಸಿ ಕೊಂಡಿರುತ್ತಾರೆ. ಕೊಚ್ಚಿಯ ಮಂತ್ರಿ ಪಿ. ಗೋವಿಂದ ಮೆನನ್‌ರು ಒಕ್ಕೂಟ ಘಟನಾ ಉಪ ಸಮಿತಿಗೆ ನೇಮಿಸಲ್ಪಟ್ಟಿದ್ದಾರೆ.

ಧರ್ಮಿಷ್ಠ ಮುಸಲ್ಮಾನರು ಅಂಚೆ ಬ್ಯಾಂಕು ಗಳಲ್ಲಿಟ್ಟ ತಮ್ಮ ಠೇವುಗಳ ಮೇಲೆ ತಮ್ಮ ಧರ್ಮ ಕ್ಕನುಸಾರವಾಗಿ ಬಡ್ಡಿ ತೆಗೆದುಕೊಳ್ಳುವದಿಲ್ಲ ವಷ್ಟೆ. ಅಂಥ ಬಡ್ಡಿ ಹಣವನ್ನು ... ಸರಕಾರದವರು ಮುನ್ನಿಸಿದ್ದು ಇನ್ನು ಹಾಗೆ ಸಲ್ಲುವ ಬಡ್ಡಿಯನ್ನು ಕೇಂದ್ರ ಶಾಸನಸಭಾಸದಸ್ಯರಿಂದ ಆ ಧರ್ಮ ದರ್ಶಿಗಳ ಕಡೆಗೆ ಕೊಡಲಾಗುವದು ಈ ಮೊದ ಲಿನ ಬಡ್ಡಿಯ ಬದಲು ೨೫೦೦೦೦ ರೂ. ಕೊಡ ಲಾಗುವದು.

ಇಂದೂರ ಪ್ರಜಾಮಂಡಳದ ಮತಪ್ರದರ್ಶನ ವನ್ನು ತಡೆಗಟ್ಟಲು ಪೋಲೀಸರು ೨೩ ಕ್ಕೆ ಮುಂಜಾನೆ ಗೋಳೀಬಾರು ಮಾಡಿದರು. ಇಬ್ಬ ರಿಗೆ ಗಾಯಗಳಾಗಿವೆ. ಸಂಸ್ಥಾನವು ಘಟನಾ ಸಮಿತಿಯಲ್ಲಿ ಸೇರುವಂತೆ ಮಹಾರಾಜರಿಗೆ ಒತ್ತಾಯ ಮಾಡಲು ಮತಪ್ರದರ್ಶನ ಅರ ಮನೆಯ ಕಡೆಗೆ ಹೊರಟಾಗ ಗೋಳೀಬಾರ ಮಾಡಲಿರುವ ಪ್ರಜಾಮಂಡಳದ ಕಾರ್ಯದರ್ಶಿ ಯನ್ನು ಬಂಧಿಸಲಾಗಿದ್ದು ಕರ್ಫ್ಯೂ ಜಾರಿಯಲ್ಲಿ ತರಲಾಗಿದೆ.

ನೇಪಾಳದ ಮುಖ್ಯ ಮಂತ್ರಿಗಳು ರಾಜ ಕೀಯ ಸುಧಾರಣೆಗಳನ್ನು ಘೋಷಿಸಿ ಪ್ರಜೆ ಗಳಿಗೆ ಕೆಲ ಹಕ್ಕುಬಾಧ್ಯತೆಗಳನ್ನು ಕೊಟ್ಟಿದ್ದಾರೆ ಘಟನೆಗಾಗಿ ಒರ್ವ ಘಟನಾ ಸಲಹೆಗಾರನನ್ನು ಕರಿಸಲಾಗುವದು. ವಾಕ್ ಸ್ವಾತಂತ್ರ್ಯ ಭಾಷಣ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ ಕೊಡಲಾ ಗುವದಂತೆ.

ಫಾಗ್ವಾಡಾದಲ್ಲಿ (ಕಪುರ್ಥಲಾ) ೨೩ ನೇ ರಾತ್ರಿ ಬಾಂಬ ಸ್ಫೋಟವಾಗಿ ಒರ್ವನು ಸತ್ತನು. ಇನ್ನೊಬ್ಬನಿಗೆ ಗಾಯಗಳಾಗಿವೆ. ಕಪುರ್ಥಳಾ ಸುಲ್ತಾನಪುರ ರಸ್ತೆಯಲ್ಲಿ ವಾಸಿಸುತ್ತಿದ್ದ ಒರ್ವ ವೃದ್ಧನನ್ನು ಯಾರೋ ಗುಂಡುಹೊಡೆದು ಗಾಯ ಗೊಳಿಸಿದ್ದಾರೆ.

ಹಿಂದುಸ್ತಾನ ಸರಕಾರದವರು ಶುದ್ಧ ನಿಕೆಲ್ ರೂಪಾಯಿಗಳನ್ನು ಮುದ್ರಿಸಲು ಅಧಿಕಾರ ಕೊಟ್ಟದ್ದು ಜೂನ ೨ ರಿಂದ ಹೊಸ ನಾಣ್ಯಗಳು ಹೊರಡಬಹುದಾಗಿ ಸರಕಾರದ ಪ್ರಕಟನೆ ಹೊರ ಟಿದೆ.

ಪಂಜಾಬ

ಲಾಹೋರಿನಲ್ಲಿ ಹಲವಾರು ವರುಷ ಮನೆ ಮಾಡಿಕೊಂಡಿದ್ದ ಅನೇಕ ಮದ್ರಾಸಿಗಳು ಪಂಜಾ ಬವನ್ನು ಬಿಡುತ್ತಿರುವರು. ಸುಮಾರು ೬೦ ಕುಟುಂಬಗಳು ತನ್ನ ಇದ್ದು ಬಿದ್ದು ಸಂಪತ್ತ ನ್ನೆಲ್ಲ ಕಳಕೊಂಡು ಮದ್ರಾಸಕ್ಕೆ ತೆರಳಿದರು.

ಇನ್ನು ೧೫ ದಿನಗಳಲ್ಲಿ ಸರಕಾರದವರು ತಮ್ಮ ಬೇಡಿಕೆಗಳನ್ನು ಪೂರೈಸದಿದ್ದರೆ ಅನ್ನಸತ್ಯಾಗ್ರಹ ವನ್ನು ಪ್ರಾರಂಭಿಸುವದಾಗಿ ಸಂಪು ಹೂಡಿರುವ ಪಂಜಾಬ ಸಹಕಾರಿ ಶಾಖೆಯ ೫೦೦ ಸಬ್ ಇನ ಸ್ಪೆಕ್ಟರರು ಬೆದರಿಕೆ ಹಾಕಿರುವರು.

ಲಾಹೋರಿನಲ್ಲಿ ಜಾತೀಯ ಗಲಭೆ ಇದೇ ೧೪ ಕ್ಕೆ ಮತ್ತೆ ಪ್ರಾರಂಭವಾದಂದಿನಿಂದ ೨೪ ರ ವರೆಗೆ ಸುಮಾರು ೪೪ ಜನ ಸತ್ತಿದ್ದು ೧೯೩ ಜನರಿಗೆ ಗಾಯಗಳಾಗಿವೆ. ಲಾಹೋರ ಜಿಲ್ಲಾ ಮ್ಯಾಜಿ ಸ್ಟ್ರೇಟರು ಒಂದು ಪ್ರಕಟನೆ ಹೊರಡಿಸಿ ಯಾರೂ ಧ್ವಜಗಳನ್ನು ಹಾರಿಸಬಾರದೆಂದು ವಿಧಿಸಿದ್ದಾರೆ.

ಸಂಯುಕ್ತಪ್ರಾಂತ

ಯುಕ್ತಪ್ರಾಂತ ಶಾಸನ ಸಭೆಯ ಅಧ್ಯಕ್ಷ ರಾದ ಶ್ರೀ ಪುರುಷೋತ್ತಮದಾಸ ತಂಡನ್‌ರು ಪ್ಯಾಲೋಹಾಟನಲ್ಲಿ ಇತ್ತೀಚೆ ಮಾಡಿದ ಭಾಷಣ ಬಗ್ಗೆ ಲೀಗ ಸದಸ್ಯರು ಶಾಸನಸಭೆಯಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಿದರು. ಲೀಗಿನವರು ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಮಂಡಿ ಸಲಿದ್ದು ಅಧ್ಯಕ್ಷರು ಅದಕ್ಕೆ ಅವಕಾಶ ಕೊಟ್ಟಿ ರುವರು. ನಿಯಮಗಳನ್ವಯ ೧೪ ದಿನಗಳ ನಂತರ ಇದರ ಚರ್ಚೆ ನಡೆಯುವದು. ಲೀಗಿ ನವರು ತಮ್ಮ ಭಾಷಣದ ಬಗ್ಗೆ ಆಕ್ಷೇಪವೆತ್ತಿದ್ದ ರಿಂದ ಪುರುಷೋತ್ತಮದಾಸರು ತಮ್ಮ ಸ್ಥಳಕ್ಕೆ ರಾಜೀನಾಮೆ ಕೊಡಲು ಸಿದ್ಧರಿರುವರು.

ಯುಕ್ತಪ್ರಾಂತದ ಸರಕಾರಿ ನೌಕರಿಗಳಲ್ಲಿ ಮುಸ್ಲಿಂರಿಗೆ ಇದುವರೆಗೆ ನೂರಕ್ಕೆ ೩೫ ರಂತೆ ಹೆಚ್ಚು ಸ್ಥಳಗಳನ್ನು ಕಾಜಿ ಎಂದು ಕೊಡು ತಿದ್ದುದನ್ನು ನಿಲ್ಲಿಸಿಬಿಡಬೇಕೆಂದು ಸರಕಾರದ ಆಜ್ಞೆ ಹೊರಟಿದೆ. ಜನಸಂಖ್ಯೆಯ ಪ್ರಮಾಣ ದಿಂದ ಸ್ಥಳಗಳನ್ನು ಹಾಕಿಕೊಡಲಾಗುವದು. ನಿಯಮ ... ಗಿದೆ.

ಯುಕ್ತಪ್ರಾಂತ ಪೋಲೀಸ ದಲದಲ್ಲಿಯ ಮುಸ್ಲಿಂ ಪೋಲೀಸರ ಪ್ರಮಾಣವನ್ನು ಅವರ ಜನಸಂಖ್ಯೆಯ ಪ್ರಮಾಣಕ್ಕೆ ಇನ್ನು ಮೂರು ತಿಂಗಳುಗಳಲ್ಲಿ ಇಳಿಸದಿದ್ದರೆ ಪ್ರತ್ಯಕ್ಷ ಹೋರಾಟ ಪ್ರಾರಂಭಿಸುವದಾಗಿ ಯುಕ್ತಪ್ರಾಂತ ಹಿಂದು ಮಹಾಸಭೆಯ ಉಪಾಧ್ಯಕ್ಷ ಶ್ರೀ ಗೋಪೀ ನಾಥ ಕುಂಜರು ಅವರು ಪ್ರಕಟಿಸಿರುವರು.

ಬಂಗಾಲ

೨೭ ನೇ ತಾರೀಖು ಮುಂಜಾನೆ ಮಧ್ಯ ಕಲ ಕತ್ತೆಯಲ್ಲಿ ಪೋಲೀಸ ಪಡೆಯ ಮೇಲೆ ಎರಡು ಬಾಂಬುಗಳನ್ನು ಒಗೆಯಲಾಯಿತು. ಒರ್ವ ಪೋಲೀಸನಿಗೆ ಗಾಯಗಳಾಗಿವೆ. ಪೋಲೀಸರು ಗುಂಡು ಹಾರಿಸಿದರು. ಆದರೆ ಯಾರಿಗೂ ಅಪಾ ಯವಾಗಿಲ್ಲ. ಬಾಂಬುಗಳ ಬಗ್ಗೆ ೧೪ ಜನರನ್ನು ಸೆರೆಹಿಡಿಯಲಾಗಿದೆ. ಒಂದು ಬಸ್ತಿಯನ್ನು ಪೋಲೀಸರು ಮುತ್ತಿ ೬ ದೇಶಿ ಬಾಂಬುಗಳನ್ನು ಎಷ್ಟೋ ಬರ್ಚಿಗಳನ್ನೂ ಶೋಧಿಸಿದರೆಂದು ತಿಳಿಯುತ್ತದೆ.

ಕಲಕತ್ತಾ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲಿಶ್ ಪ್ರಾಧ್ಯಾಪಕರೂ ಪ್ರಿನ್ಸಿಪಾಲರೂ ಅನಂತರ ಸ್ಟೇಟ್ಸಮನ್ ಪತ್ರಿಕೆಯನ್ನು ಸೇರಿ ೪೦ ವರ್ಷ ಹಿಂದುಸ್ತಾನದಲ್ಲಿ ಸೇವೆಗೈದ್ದ ಶ್ರೀ ಡಬ್ಲ್ಯು. ಸಿ. ವರ್ಡ್ಸ್‌ವರ್ಥರು ನಿವೃತ್ತರಾಗಿ ಇಂಗ್ಲಂಡಿಗೆ ಹೊರಟರು. ಇವರು ಹಿಂದಕ್ಕೆ ಬಂಗಾಲ ಕೌನ್ಸಿಲ್ಲಿನಲ್ಲಿದ್ದರು. ಈಗ ಬಂಗಾಲ ಶಾಸನ ಸಭೆಯ ಸದಸ್ಯರಾಗಿರುವರು.

ಕಲಕತ್ತೆಯ ಶೀಖರು ಮೋಹನಸಿಂಗರಿಗೆ ೧೨೦೦೦ ರೂಪಾಯಿ ನಿಧಿ ಸಮರ್ಪಿಸಿದರು.

೯೦೦೦ ಮಣ ಭತ್ತ ಹೇರಿಕೊಂಡು ಆಸಾಮ ದಿಂದ ಬಂಗಾಲಕ್ಕೆ ಹೊರಟಿದ್ದ ೧೩ ನಾವೆಗ ಳನ್ನು ಬ್ರಹ್ಮಪುತ್ರಾ ನದಿಯಲ್ಲಿ ಹಿಡಿಯಲಾ ಗಿದೆ.

ಸರಹದ್ದು

ಡೇರಾ ಇಸ್ಮಾಯಿಲಖಾನದಿಂದ ೧೫೦೦೦ ಹಿಂದೂ ಜನರನ್ನು ಪೋಲೀಸ ಮತ್ತು ಸೈನಿಕರ ಸಹಾಯದಿಂದ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸ ಲಾಗಿದೆಂದು, ಗಡಿನಾಡಿನ ಹಿಂದಿನ ಮಂತ್ರಿ ಭಂಜೂರಾಮ ಗಾಂಧಿಯವರು ಪ್ರಕಟಿಸಿರು ವರು. ಅಲ್ಪಸಂಖ್ಯಾಕರಿಗೆ ಇಲ್ಲಿ ಅತೀವ ಹಾನಿ ಯಾಗಿದ್ದು ಇದನ್ನು ನೋಡಲು ಗಾಂಧೀಜಿ, ಗಫರಖಾನ, ಕೃಪಲಾನಿಯಂಥವರು ಬರದಿ ದ್ದುದು ವಿಷಾದಕರವಾಗಿದೆಂದೂ ಇಲ್ಲಿ ಹೇರ ಲ್ಪಟ್ಟ ಪುಂಡಗಂಡಾಯ ಅತ್ಯಲ್ಪವಾಗಿದೆಂದೂ ಅವರು ಹೇಳಿದರು.

ಗಡಿನಾಡಿನಲ್ಲಿಯ ಪರಿಸ್ಥಿತಿಯ ಬಗ್ಗೆ ಭಾರತ ಮಂತ್ರಿ ಲಾರ್ಡ ಲಿಸ್ಟೋವೆಲ್‌ರು ಇದೇ ೨೫ ಕ್ಕೆ ಕಾಮನ್ಸದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಎಷ್ಟರಮಟ್ಟಿಗೆ ಅಧಿಕತವಾಗಿದೆಂಬ ಬಗ್ಗೆ ಸಂದೇಹವಿದೆಂದು ಮೆಹರಚಂದ ಖನ್ನಾರು ಸ್ಪಷ್ಟೋಕ್ತಿಯನ್ನು ಹೇಳಿದ್ದಾರೆ. ಮಂತ್ರಿಮಂಡ ಳವನ್ನು ಕೇಳದೆ ಅಂಕಿಸಂಖ್ಯೆಗಳನ್ನು ಕೊಡು ವದು ಸರಿಯಲ್ಲ. ಗಡಿನಾಡ ಸರಕಾರದವರು ಎಲ್ಲ ವಿವರಗಳನ್ನು ಅವರಿಗೆ ತಿಳಿಸುವರು ಎಂದು ಮುಂತಾಗಿಯೂ ಅವರು ಹೇಳಿದರು.

ಸಿಂಧ

ಎಂಥ ಪ್ರಸಂಗ ಬಂದರೂ ಶಾಂತಿಯನ್ನು ರಕ್ಷಿಸಲು ಸರಕಾರ ನಿರ್ಧರಿಸಿದೆಂದು ಸಿಂಧದ ಮುಖ್ಯ ಮಂತ್ರಿಗಳು ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಹೇಳಿದರು. ಹಿಂದುಸ್ತಾನದ ಭವಿ ತವ್ಯ ನಿರ್ಣಯವಾಗುವ ಮೊದಲು ಕುಕಲ್ಪನೆ ಗಳನ್ನು ತಂದುಕೊಂಡು ಕಚ್ಚಾಡುವದು ಭೂಷ ಣವಲ್ಲ; ಬ್ರಿಟಿಶರು ಹೊರಟು ಹೋಗುವ ... ಬಾರದೆಂದೂ ಅವರು ಹೇಳಿದರು.

ಮದ್ರಾಸ

ಗುಂಟೂರಿನಲ್ಲಿ ಗಾಂಧೀಚೌಕಿನಲ್ಲಿ ಸೇರಿದ್ದ ಸಭೆ ಯಲ್ಲಿ ಮಂತ್ರಿವರ್ಯ ಚಂದ್ರಮೌಳಿಯವರು ಭಾಷ ಣಮಾಡಲು ಎದ್ದಾಗ ಪ್ರಕಾಶಂಪಕ್ಷದ ಕೆಲವರು ಹೂಲಿಎಬ್ಬಿಸಿ ಕಲ್ಲು ಬಡಿಗೆ ಮುಂತಾದವುಗ ಳಿಂದ ಕಾಳಗಕ್ಕೆ ತೊಡಗಿದರು. ಸಶಸ್ತ್ರ ಪೋಲಿಸ ಪಡೆಯೊಂದು ಬಂದು ಪರಿಸ್ಥಿತಿಯನ್ನು ಹಿಡಿತಕ್ಕೆ ತಂದಿತು. ಸಭೆಯಲ್ಲಿ ಮೂವರನ್ನು ಬಂಧಿಸಲಾ ಯಿತು. ಇಂದಿನ ಈ ಘಟನೆಯೊಂದು ಕಲಂಕ ಎಂದು ಮಂತ್ರಿಗಳು ಹೇಳಿದರು.

ಅಮೇರಿಕೆಯಲ್ಲಿ ವರ್ಣದ್ವೇಷ

ಪ್ರಜಾ ತಂತ್ರದ ದುರ್ಗವೆನಿಸಿದ ಅಮೇರಿಕೆಯಲ್ಲಿ ನಡೆದ ಕತೆಯಿದು.

ಅವನೊಬ್ಬ ನಿಗ್ರೋ ಟ್ಯಾಕ್ಸಿ ಡ್ರಾಯವ್ಹರ. ಬಿಳಿಯನೊಬ್ಬನನ್ನು ಕೊಂದ ಆರೋಪದಮೇಲೆ ಅವನನ್ನು ಬಂಧಿಸಿ ಗ್ರೀನ್ ವಿಲ್ ನಗರ(ದ. ಕೆರೋಲಿನಾ ಸಂಸ್ಥಾನ) ದ ಸೆರೆಮನೆಯಲ್ಲಿಟ್ಟಿದ್ದರು. ಕರಿಯನಿಗೆ ಬಿಳಿಯನಮೇಲೆ ಕೈಮಾಡುವಷ್ಟು ಸೊಕ್ಕು ಬಂತೇ ಎಂದರು ಸ್ಥಳೀಯ ಬಿಳಿಯರು. ಶಾಸನಬದ್ಧವಾಗಿ ಅವನು ವಿಚಾರಣೆಯಾಗುವ ವರೆಗೆ ಅವರಿಗೆ ಸಹನೆಯಿರಲಿಲ್ಲ. ಆದ ರಿಂದ ನೂರಾರು ಬಿಳಿಯರು ಸೆರೆಮನೆಯಮೇಲೆ ದಾಳಿ ಮಾಡಿದರು. ಒಂದು ಗುಡ್ಡದ ತಪ್ಪಲಿಗೊಯ್ದು, ದಕ್ಷಿಣ ಸಂಯುಕ್ತ ಸಂಸ್ಥಾನಗಳ ಪರಂಪರೆಗಳಿಗನುಸಾರವಾಗಿ, ಅವನನ್ನು ಚಿತ್ರವಧೆ ಮಾಡಿದರು. ಅವನ ದೇಹದ ಗುರುತ್ತು ಸಿಕ್ಕದಂತೆ ಅದನ್ನು ಜಜ್ಜಿ ವಿರೂಪಗೊಳಿಸಿದರು ಅಪರಾಧ ಸಿದ್ಧವಾಗದೆ ಆರೋಪಿಯನ್ನು ಜನರು ಸ್ವೇಚ್ಛೆಯಿಂದ ಕೊಲೆಮಾಡಿದರು. ಬಿಳಿಯರ ಸ್ವಾಮಿತ್ವಕ್ಕೆ ದುರಾಡುವ ನಿಗ್ರೋಗಳಿಗೆ ದಕ್ಷಿಣ ಸಂಸ್ಥಾನಗಳ ಬಿಳಿಯರು ಕೊಡುವ ಶಿಕ್ಷೆ ಇಂಥದು.

ಸಾಮಾನ್ಯವಾಗಿ ಇಂಥ "ಚಿತ್ರವಧೆ" ಮಾಡಿದ ಬಿಳಿಯರನ್ನು ವಿಚಾರಣೆಗೊಳಪಡಿಸುವ ಧೈರ್ಯವೇ ಸರಕಾರಕ್ಕಿರುವದಿಲ್ಲ. ಆದರೆ ಈ ಬಾರಿ ಸಂಯುಕ್ತ (ಕೇಂದ್ರಸರಕಾರದ ಖಾತೆಯವರು) ನಿಗ್ರೋನನ್ನು ಕೊಲೆಮಾಡಿದವರ ಮೇಲೆ ಪುರಾವೆಗಳನ್ನು ಸಂಗ್ರಹಿಸಿ ೨೮ಜನರನ್ನು ನ್ಯಾಯಸ್ಥಾನಕ್ಕೆಳೆದರು. ಆರೋಪಿಗಳಲ್ಲಿ ಅನೇಕರು ಅಪರಾಧವನ್ನೇ ತಮ್ಮಲ್ಲಿ ಕೆಲವರು ಮಾಡಿದರೆಂದು ಬಾಯ್ಬಿಟ್ಟರು. ಆದರೆ ಆರೋಪಿಗಳಂತೆ ಬಿಳಿಯರಾದ ಪಂಚರು (ಜ್ಯೂರಿ) ಆರೋಪಿಗಳೆಲ್ಲರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿಬಿಟ್ಟರು. ಅವರು ತಮ್ಮ ತೀರ್ಮಾನಕ್ಕೆ ಯಾವುದೇ ಕಾರಣವನ್ನು ಕೊಡಲಿಲ್ಲ. ಸಾಮಾನ್ಯ ವಿಚಾರಣೆಯಲ್ಲಾದರೆ ೨೮ ಆರೋಪಿಗಳಲ್ಲಿ ೨೧ ಜನರಾದರೂ ಗಲ್ಲಿಗೇರಿಸಲ್ಪಡುವಷ್ಟು ಅವರ ಮೇಲೆ ಪುರಾವೆಯಿತ್ತು.

ಇದೀಗ ಬಿಳಿಯ ನ್ಯಾಯಬುದ್ಧಿ ನಿಗ್ರೋ ಜನರ ಚಿತ್ರವಧೆ ಮಾಡುವದು ಅವರ ಜನ್ಮಸಿದ್ಧ ಹಕ್ಕಾಗಿಬಿಟ್ಟಿದೆ.

ಅನೇಕ ನ್ಯಾಯಶೀಲ ಪತ್ರಿಕೆಗಳು ಪಂಚರ ಈ ಪಕ್ಷಪಾತಿ ನಿರ್ಣಯವನ್ನು ಖಂಡಿಸಿ ಲೇಖಗಳನ್ನು ಬರೆದಿವೆ. ಕೇಂದ್ರ ಸರಕಾರ ಈ ಪ್ರಕರಣವನ್ನು ಇಷ್ಟಕ್ಕೆ ಕೈಬಿಡದೆ ಸಂಯುಕ್ತನ್ಯಾಯಸ್ಥಾನಕ್ಕೆ ತರಬಹುದೆಂದು ಸುದ್ದಿ ಹಬ್ಬಿದೆ. ಯುದ್ಧದ ನಿಗ್ರೋ ಪ್ರಜಗಳಿಂದ ಬೇಕು ಬೇಕಾದ ತ್ಯಾಗಗಳನ್ನು ಮಾಡಿಸಿಕೊಂಡ ಸರಕಾರ ಈಗ ಒಮ್ಮೆಲೆ ಅವರ ಕೈಬಿಡಲು ಹಿಂಜರಿಯುತ್ತದೇನೋ.

ಇಡೀ ಜಗತ್ತಿನಲ್ಲಿ ಆಹಾರ ಕೊರತೆ?

ಚರ್ಚಿಸಲು ಆಹಾರ ಮಂತ್ರಿಗಳ ಪರಿಷತ್ತು

ವಾಶಿಂಗಟನ ೨೬—ಮುಂದಿನ ವಸಂತಕಾಲದಲ್ಲುಂಟಾಗಬಹುದಾದ ಆಹಾರ ಕೊರತೆಯನ್ನು ನೀಗಿಸುವ ಉಪಾಯಗಳನ್ನು ಯೋಚಿಸಲು ಜುಲೈತಿಂಗಳು ಯುರೋಪಿನಲ್ಲಿ ಎಲ್ಲ ರಾಷ್ಟ್ರಗಳ ಆಹಾರ ಮತ್ತು ಒಕ್ಕಲತನ ಮಂತ್ರಿಗಳ ಪರಿಷತ್ತನ್ನು ಕರೆಯುವದಾಗಿ ಅಮೇರಿಕೆಯ ಒಕ್ಕಲತನ ಮಂತ್ರಿಗಳಾದ ಕ್ಲಿಂಟನ್ ಆ್ಯಂಡರಸನ್ನರು ಅಂತರ ರಾಷ್ಟ್ರೀಯ ಆಹಾರಮಂಡಲಕ್ಕೆ ಬರೆದ ಪತ್ರದಲ್ಲಿ ಹೇಳಿರುವರು.

ಈ ವರ್ಷದ ಸುಗ್ಗಿಯಲ್ಲಿ ಆಹಾರವನ್ನು ಸಂಗ್ರಹಿಸಿಟ್ಟುಕೊಳ್ಳದಿದ್ದರೆ ಮುಂದಿನವರ್ಷ ಭೀಕರ ಪರಿಸ್ಥಿತಿಯುಂಟಾಗುವದೆಂದು ಅವರು ಅಭಿಪ್ರಾಯ ವ್ಯಕ್ತಮಾಡಿರುವರು.

ಈ ಪತ್ರವನ್ನು ಓದುವದಾದ ನಂತರ ಫಿಲ್ ಜಿರಾಲ್ಡರು ಜಾಗತಿಕ ಆಹಾರ ಪರಿಸ್ಥಿತಿಯ ಬಗ್ಗೆ ತಮ್ಮ ವರದಿಯನ್ನೊಪ್ಪಿಸಿದರು. ಅದರ ಮುಖ್ಯಾಂಶಗಳು ಕೆಳಗಿನಂತಿವೆ.

[೧] ಯುರೋಪದಲ್ಲಿ ಈಗುಂಟಾಗಿರುವ ಆಹಾರ ಬಿಕ್ಕಟ್ಟು ಇನ್ನೂ ಐದು ತಿಂಗಳು ಉಳಿಯುವದು.

[೨] ಇಡೀ ಜಗತ್ತಿನಲ್ಲಿ ಕಾಳಿನ ಕೊರತೆಯಿದೆ ಗೋದಿಯ ಕೊರತೆ ೧೯೪೮ ಅಗಸ್ಟ ತಿಂಗಳೊಳಗಾಗಿ ಸುಧಾರಿಸಲಾರದು.

[೩] ಕೊರತೆಯ ರಾಷ್ಟ್ರಗಳು ಈ ಕಠಿಣ ಕಾಲದಲ್ಲಿ ಸೀದಾ ನಿಯಮಗಳನ್ನು ಸಡಿಲಿಸಿದರೆ ಪರಿಸ್ಥಿತಿ ಮತ್ತಷ್ಟು ಬಿಕ್ಕಟ್ಟಿನದಾಗುವದು.

ಗಾಂಧೀಜಿಯ ಕಳೆದು ಹೋದ ಗಡಿಯಾರ

ಗಾಂಧೀಜಿಗೆ ಕಳೆದ ೨೫ ವರ್ಷಗಳಿಂದ ಸತತ ಸಂಗಡಿಗನಾಗಿದ್ದ ಅವರ ಕಿಸೆ ಗಡಿಯಾರವನ್ನು ಕಳೆದ ವಾರ ಅವರು ಕಳೆದುಕೊಂಡರು. ಪಾಟಣಾದಿಂದ ದಿಲ್ಲಿಗೆ ಬರುತ್ತಿದ್ದಾಗ್ಗೆ ಗಾಡಿಯಲ್ಲಿ ಅದು ಅವರ ಕೈ ಬಿಟ್ಟಿತು. ಪ್ರತಿ ನಿಲ್ದಾಣದಲ್ಲಿ ಸೇರುತ್ತಿದ್ದ ಜನಸಂದಣಿಯಲ್ಲಿ ಯಾರೋ ಅದನ್ನು ಎತ್ತಿ ಹಾಕಿರಬೇಕು. ಹೀಗೆ ೧೯೨೧ರ ಅಸಹಕಾರ ಚಳವಳಿಯಿಂದೀಚೆಗೆ ಅವರು ಉಪಯೋಗಿಸುತ್ತಿದ್ದ ಏಕಮಾತ್ರ ವಿದೇಶಿ ವಸ್ತು ಕಳೆದು ಹೋಯಿತು.

ಈ ಸುದ್ದಿ ಕೇಳಿ ಲಂಡನ್ನಿನ ಪ್ರಮುಖ ಗಡಿಯಾರ ಕಂಪನಿಯೊಂದು ಹೊಸ ಗಡಿಯಾರವನ್ನವರಿಗೆ ಕಾಣಿಕೆ ಕಳಿಸಿ "ಇದಾದರೂ ಹಿಂದಿನದಂತೆ ಚಿರಕಾಲ ಶ್ರದ್ಧೆಯಿಂದ ಸೇವೆ ಮಾಡಲಿ" ಎಂದು ಹಾರೈಸಿದೆ.

ಎಣ್ಣೆ ಮತ್ತು ಎಣ್ಣೆಕಾಳುಗಳ ನಿರ್ಯಾತ

ಕೆಲವು ಅಡಚಣೆಗಳ ಮೂಲಕ ಮೇ ೨ನೇ ತಾರೀಖಿನ ದಿವಸ ಎಣ್ಣೆಕಾಳು ಅಥವಾ ಎಣ್ಣೆಯನ್ನು ನಿರ್ಯಾತ ಮಾಡುವ ಲಾಯಸೆನ್ಸ ಕೊಳ್ಳುವ ಬಗ್ಗೆ ಸಾರಿದ ಟೆಂಡರ ಪದ್ಧತಿಯನ್ನು ಕೂಡಲೇ ಅಮಲಿನಲ್ಲಿ ತರುವದು ಸರಕಾರಕ್ಕೆ ಸಾಧ್ಯವಾಗಿಲ್ಲ. ಈ ಬಗ್ಗೆ ಯಾವ ನಿಶ್ಚಿತ ಧೋರಣೆಯನ್ನು ತಳೆಯಬೇಕೆಂಬದನ್ನು ಕೂಡಾ ಸರಕಾರವು ಇನ್ನೂ ವಿಚಾರ ಮಾಡುತ್ತಲಿದೆ. ಆದರೆ ಸದ್ಯದ ಮಟ್ಟಿಗೆ ಹಳೆಯ ಪದ್ಧತಿಯಂತೆ ಎಣ್ಣೆ, ಎಣ್ಣೆಕಾಳುಗಳ ನಿರ್ಯಾತ ಸಾಗಿಸಬೇಕೆಂದು ಸರಕಾರವು ತಿಳಿಸುತ್ತಿದೆ. ಮತ್ತೂ ಹೊಸ ಕ್ರಮವು ಜಾರಿಯಲ್ಲಿ ಬರುವವರೆಗೆ ಕೆಳಗಿನ ಪ್ರಕಾರ ಮಾಲನ್ನು ಕಳಿಸಲು ಅಡ್ಡಿ ಇಲ್ಲ.

ಶೇಂಗಾ	೫೦,೦೦೦	ಟನ್ನ
ಶೇಂಗಾ ಎಣ್ಣೆ	೨೨,೦೦೦	"
ಅಗಸಿ	೨೨,೦೦೦	"
ಅಗಸಿ ಎಣ್ಣೆ	೨೨,೦೦೦	"
ಔಡಲ ಎಣ್ಣೆ	೮,೧೨೫	"
ಎಲಬು, ಎಲುಬಿನ ಪುಡಿ	೨೪,೦೦೦	"

ನಿರ್ಯಾತ ಮಾಡಲಿಚ್ಛಿಸುವವರು ಯಾವ ಬಂದರದಿಂದ ಕಳಿಸುವರೋ ಅಲ್ಲಿಯ ಎಕ್ಸಪೋರ್ಟ ಟ್ರೇಡ್ ಕಂಟ್ರೋಲರನ ಹತ್ತಿರ ಹೆಚ್ಚಿನ ಮಾಹಿತಿ ಬಗ್ಗೆ ಚೌಕಶಿಮಾಡಬಹುದು.

೧೯೪೭—೪೮ ರ ಚಹಾ ನಿರ್ಯಾತ

೧೯೪೭—೪೮ ವರ್ಷಕ್ಕೆ ಹಿಂದೀ ಚಹಾ ನಿರ್ಯಾತದ ಪರಮಾವಧಿ ಪ್ರಮಾಣವು ೪೧.೩೯ ಕೋಟಿ ಪೌಂಡು ಎಂದು ಗೊತ್ತುಮಾಡಲಾಗಿದೆ. ಇದು ವಾರ್ಷಿಕ ನಿರ್ಯಾತದ ಮಟ್ಟಕ್ಕಿಂತ (Standard) ೮ ./. ದಷ್ಟು ಹೆಚ್ಚಿದೆ. ೧೯೪೬ ರಲ್ಲಿ ಚಹದ ಬೆಳೆಯು ೫೮ ಕೋಟಿ ಪೌಂಡು ಬಂದಿದ್ದು ಇಷ್ಟು ಬೆಳೆಯು ಮತ್ತಾವ ವರ್ಷದಲ್ಲಿ ಬೆಳೆದಿಲ್ಲ. ಆದರೆ ನಮಗೆ ವರ್ಷಕ್ಕೆ ಸರಾಸರಿ ೧೩ ಕೋಟಿ ಪೌಂಡು ಬೇಕಾಗಬಹುದು. ಆದರೆ ಈಗ ಗೊತ್ತುಮಾಡಿದ ೪೧.೩೯ ಪೌಂಡು ನಿರ್ಯಾತವಾದಾಗ್ಯೂ ಸ.ಮಾರು ೩.೬೧ ಕೋಟಿ ಪೌಂಡು ಚಹಾದ ಉಳಿತಾಯ.ವಾಗುವದು. ಆದರೂ ಚಹದ ಬೆಲೆಯೇಕೆ ಏರಿದೆ?

ಬರ್ಮಾದ ಬಳ್ಳಿ

ಈಚೆಗೆ ಬರ್ಮಾ ಸರಕಾರವು ಬೆಳ್ಳಿಯ ನಿರ್ಯಾತದ ಅಡ್ಡಿಯನ್ನು ತೆಗೆಯಲಾಗಿದೆಯೆಂದು ಸಾರಿದೆ. ಆದರೆ ಈ ಕ್ರಮದಿಂದ ಅಲ್ಲಿಯ ಚಿನ್ನದ ನಾಣ್ಯಗಳ ಬೆಲೆಯು ಏರಿದಂತೆ ಕಾಣುತ್ತದೆ. ಈಗಾಗಲೇ ಅಲ್ಲಿ ಕೆಲವು ಕಡೆಯಲ್ಲಿ ಹಿಂದೀ ವರ್ತಕರು ಅಲ್ಲಿಯ ಪ್ರತಿ ನಾಣ್ಯಕ್ಕೆ ರೂ. ೧-೬-೦ ದಿಂದ ರೂ. ೧-೧೨-೦ ರ ವರೆಗೆ ಕೊಟ್ಟು ಕೊಂಡುಕೊಳ್ಳುತಿದ್ದರೆಂದು ಕೇಳಿ ಬರುತ್ತದೆ. ಅದ್ದರಿಂದ, ಚಿನ್ನ ನಾಣ್ಯದ ಭದ್ರತೆಗಾಗಿ ಬರ್ಮಾ ಸರಕಾರವು ಬೇಗನೆ ಪುನಃ ಬೆಳ್ಳಿಯ ನಿರ್ಯಾತಕ್ಕೆ ಅಡ್ಡೀ ಹಾಕಬಹುದು.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮಗೆ ತಿಳಿಸಿದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ ಪಿ. ಖರ್ಚು ಮುರಿಯಲಾಗುವದು.

ವ್ಯವಸ್ಥಾಪಕ.

ಕಲಾವಿದ ಶ್ರೀ ವಿ. ಆರ್. ರಾಯರು



ಮುಂಬಯಿಯವರಾದ ಇವರು ಈ ವರ್ಷ ಲಂಡನ್ನಿನಲ್ಲಿ ಜರಗಿದ ಪ್ರದರ್ಶನದಲ್ಲಿ ಯಶಸ್ವಿಯಾದುದರಿಂದ ಲಂಡನ್ನಿನ ಕೆನ್ಸಿಂಗ್‌ಟನ್ನಿನಲ್ಲಿ ಚಿತ್ರಶಾಲೆಯನ್ನು ಸ್ಥಾಪಿಸಿ ಜನಪ್ರಿಯರಾಗಿದ್ದಾರೆ. ಇವರ ಚಿತ್ರಗಳ ಇನ್ನೊಂದು ಪ್ರದರ್ಶನ ಬೇಗನೆ ಜರಗಲಿದೆ. ಚಿತ್ರದಲ್ಲಿ ಶ್ರೀ ರಾಯರು ಪಂ. ನೆಹರೂ ಅವರ ಚಿತ್ರ ಬರೆಯುತ್ತಿದ್ದಾರೆ:

ಆಕಾಶದಿಂದ ಗೋದಿ ಬಿತ್ತುವದು:



ಗೋದಿಯನ್ನು ಬಿತ್ತಲು ವಿಮಾನವನ್ನು ಇಂಗ್ಲಂಡಿನಲ್ಲಿ ಉಪಯೋಗಿಸಲಾಗುತ್ತಿದೆ. ಅದಕ್ಕಾಗಿ ಈ ವಿಮಾನವನ್ನು ವಿಶೇಷವಾಗಿ ಪರಿವರ್ತಿಸಲಾಗಿದೆ. ಅದರಲ್ಲಿ ಗೋದಿಯ ಚೀಲಗಳನ್ನು ತುಂಬಲಾಗುತ್ತಿದೆ.

ಹುಬ್ಬಳ್ಳಿ ಧಾರವಾಡಗಳಲ್ಲಿ ಮಾನ್ಯ ವರ್ತಕರು

(೪ ನೇ ಪುಟದಿಂದ)

ಅನೇಕರು ತೀವ್ರ ವಿರೋಧ ತೋರಿಸಿಗೊಂಡಿಲ ಹಾಕಿದ್ದರಿಂದ ಮಂತ್ರಿಗಳ ಹಿಂದಿಯಲ್ಲಿ ನಾಲ್ಕು ಮಾತು ಹೇಳಿ ತಮಗೆ ರಾಷ್ಟ್ರಭಾಷೆಯಲ್ಲಿ ಮಾತ್ರ ಭಾಷೆಯನ್ನು ಪ್ರಭುತ್ವವಿಲ್ಲದ್ದರಿಂದಲೇ ಮರಾಠಿಯಲ್ಲಿ ಮಾತಾಡಲಿಚ್ಛಿಸಿದ್ದು ದಲ್ಲದೆ ಬೇರೇನೂ ಕಾರಣವಲ್ಲ ಆದರೆ ಈ ಬಗೆಯಾಗಿ ಜಗಳ ಏಳುವದು ತಮಗೆ ಬೇಕಿದ್ದಿಲ್ಲವೆಂದು ವಿಷಾದಪೂರ್ವಕವಾಗಿ ನುಡಿದರು.

ಸಭೆ ಮುಗಿದ ನಂತರ ಬೇರೆ ಬೇರೆ ಸ್ಥಳಗಳನ್ನು ನೋಡಿ ಶ್ರೀ- ವರ್ತಕರು ಮುಂಬಯಿಗೆ ಹೊರಟು ಹೋದರು.

ಘಟನಾಸಮಿತಿಯ ಪ್ರಾಂತೀಯ ಘಟನಾ ಉಪಸಮಿತಿಯ ಸಭೆ ಜೂನ ೫ನೇ ತಾರೀಕ ಮಧ್ಯಾಹ್ನ ೩ ಗಂಟೆಗೆ ದಿಲ್ಲಿಯಲ್ಲಿ ಕೂಡುವದು. ಈ ಉಪಸಮಿತಿಯ ಸದಸ್ಯರಾದ ಶ್ರೀ. ದಿವಾಕರ ರಂಗನಾಥರಾಯರು ೩ನೇ ತಾರೀಕಿಗೆ ಮುಂಬಯಿಯಿಂದ ಹೊರಡುವರು.

ಹಿಂದುಸ್ಥಾನಕ್ಕೆ ಅಕ್ಕಿ ಪೂರೈಕೆ

ಅಂತರ್ರಾಷ್ಟ್ರೀಯ ಅವಸರ ಆಹಾರ ಸಮಿತಿಯವರು ಒಟ್ಟು ೨,೧೫೪,೬೦೦ ಟನ್ ಅಕ್ಕಿಯನ್ನು ೧೯೪೭ ರಲ್ಲಿ ವಿವಿಧ ದೇಶಗಳಿಗೆ ಕಳಿಸುವವರಿದ್ದು ಅದರಲ್ಲಿ ೪,೮೫,೦೦೦ ಟನ್ ಹಿಂದುಸ್ಥಾನಕ್ಕೆ ಬರುವದು. ಅಕ್ಕಿಯ ಸಂಗ್ರಹ ಬಹಳ ಕಡಿಮೆಯಿದ್ದು ಒಟ್ಟು ೬,೬೦೦,೦೦೦ ಟನ್‌ಗಳಿಗೆ ಬೇಡಿಕೆ ಬಂದಿದ್ದುದಂತೆ. ಈಗ ೧೯೪೭ ರ ಬಗ್ಗೆ ಎಂದು ತೋರಿಸಿದ ಅಂಕೆಗಳಲ್ಲಿ ಈಗಾಗಲೆ ಕಳಿಸಿದ್ದೂ ಸೇರಿದೆ.

ಈ ಪೂರೈಕೆ ತೀರ ಕಡಿಮೆಯಾಯಿತೆಂದು ಹಿಂದುಸ್ಥಾನದ ಆಹಾರ ಮಂತ್ರಿ ಡಾ ರಾಜೇಂದ್ರ ಪ್ರಸಾದರು ಹೇಳಿದ್ದಾರೆ. ಮೊದಲು ಕೊಡ ಮಾಡಿದ್ದಕ್ಕಿಂತ ಬರಿ ೬೫೦೦೦ ಟನ್ ಹೆಚ್ಚಿಸಿದ್ದಾರೆ ಆಯಿತು ಅಷ್ಟೆ.

ಅಕ್ಕಿಯಲ್ಲದೆ ಬೇರೆ ೬೦೦,೦೦೦ ಟನ್ ಧಾನ್ಯಗಳೂ ಹಿಂದುಸ್ಥಾನಕ್ಕಾಗಿ ಗೊತ್ತುಪಡಿಸಲ್ಪಟ್ಟಿವೆಯೆಂದು ತಿಳಿಯುತ್ತದೆ.

ಬೆಂಗಳೂರು-ಮೈಸೂರು

ತಾ. ೨೮ ರಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನ ಪ್ರಾರಂಭವಾಯಿತು. ದಿವಾನರ ಭಾಷಣವನ್ನು ಬಹಿಷ್ಕರಿಸಲು ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.

ಬೆಂಗಳೂರಲ್ಲಿ ದಿವಾನರಿಗೂ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೂ ತಾ. ೨೬ರಲ್ಲಿ ಮೈಸೂರಿನ ರಾಜಕೀಯ ವಿಚಾರಗಳಲ್ಲಿ ಮಾತುಕತೆ ನಡೆಯಿತು.

ರಾಜಸೇವಾ ಪ್ರಸಕ್ತ ಎಂ. ಶೇಷಾದ್ರಿ ಯವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಸಮ್ಮೇಳನವು ತಾ. ೨೭ ರಲ್ಲಿ ಮೈಸೂರಿನ ಪುರಭವನದಲ್ಲಿ ನಡೆಯಿತು.

ಮೈಸೂರಲ್ಲಿ ತಾ. ೨೦ ರ ದಿನ ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ಶೇಕ್ ಅಬ್ದುಲ್ಲಾ ದಿನವನ್ನು ಆಚರಿಸಲಾಯಿತು. ಅವರನ್ನು ಕೂಡಲೆ ಬಿಡುಗಡೆ ಮಾಡಬೇಕೆಂಬ ಗೊತ್ತುವಳಿ ಮಾಡಲಾಯಿತು.

ಹರಿಜನೋದ್ಧಾರಕ ಸೇವಾ ಸಂಘದ ಶ್ರೀ ಬಿ. ಎಸ್. ಗೋವಿಂದರಾಯರ ಪತ್ನಿ ದೇವಕಿ ಬಾಯಿಯವರು ಬೆಂಗಳೂರಿನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಬೆಂಗಳೂರಿನ ಮುನಿಸಿಪಾಲಿಟಿಯ ಕೆಲಸಗಾರರ ಯೂನಿಯನ್ ಸಭೆ ತಾ. ೨೧ ರಲ್ಲಿ ಕರ್ಪೊರೇಶನ್ ಮೈದಾನದಲ್ಲಿ ಸೇರಿತು. ಶ್ರೀ ಕೆ. ಟಿ. ಭಾಷ್ಯಂ ರವರು ಕೆಲಸಗಾರರಲ್ಲಿ ಶಿಸ್ತು, ಸಂಘಟನೆ, ರಾಜಕೀಯ ಜ್ಞಾನ ಇವುಗಳಿರಬೇಕೆಂದು ಹೇಳಿದರು.

ಮುನಿಸಿಪಾಲಿಟಿಯ ಮೈಸೂರು ಪೌರ ಸಭೆಯ ಕೆಲಸಗಾರರ ಸಾಧಾರಣ ಸಭೆ ತಾ. ೨೧ ರಲ್ಲಿ ಸೇರಿ ಮುಷ್ಕರ ಮಾಡದೆ ತಾ. ೩೧ ಕ್ಕೆ ಮುಂದರಿಸಲಾಯಿತು.

ತಾ. ೨೨ ರಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಶಿಕ್ಷಕ ಸಭೆ ಸೇರಿತ್ತು.

ಸಂಸ್ಥಾನದ ಸರಕಾರಿ ಉಪಾಧ್ಯಾಯರ ಸಂಘದ ಗೌ॥ ಕಾರ್ಯದರ್ಶಿಗಳು ಬೇಡಿಕೆಗಳಲ್ಲಿ ... ವಿದ್ಯಾಭ್ಯಾಸ ಮಂತ್ರಿಗಳಿಗೆ ಬರೆಯುತ್ತಾರೆ.

ಬೆಂಗಳೂರಲ್ಲಿ ಸಂಸ್ಥಾನದ ಶಿಕ್ಷಕರ ಸಮ್ಮೇಳನ ತಾ. ೨೬ ರಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ನಡೆಯಿತು.

ಇಂಡಿಯನ್ ಮತ್ತು ಈಸ್ಟರ್ನ್ ನ್ಯೂಸ್ ಪೇಪರ್ ಸೊಸಾಯಿಟಿಯ ಸಭೆಯಲ್ಲಿ ಭಾಗವಹಿಸಲು "ಜನವಾಣಿ" ಪತ್ರಿಕೆಯ ಶ್ರೀ ಪಿ. ಆರ್. ರಾಮಯ್ಯನವರು ತಾ. ೨೪ ರಲ್ಲಿ ದಿಲ್ಲಿಗೆ ಪ್ರಯಾಣ ಬೆಳಸಿದರು.

ಬೆಂಗಳೂರಿನ ಶ್ರೀ ರಾಮ ಸಿಲ್ಕ್ ಮಿಲ್ಸ್ ಕೆಲಸಗಾರರ ಸಂಘ ಚುನಾವಣೆಯಿಂದ, ಇದರ ಆಶ್ರಯದಲ್ಲಿ ತಾ. ೨೪ ರಲ್ಲಿ ಕೂಲಿಗಾರರ ಸಭೆ ಸೇರಿತ್ತು. ಅನೇಕರ ಭಾಷಣ ನಡೆಯಿತು.

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ತಾ. ೨೫ ರಲ್ಲಿ ಶ್ರೀ ಕೆ. ಸಿ. ರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಜರುಗಿತು.

ತೈವಾಂಕೂರಿನ ಮುಖ್ಯ ಮಂತ್ರಿಗಳಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರವರು ತಾ. ೨೬ ರ ಬೆಳಗ್ಗೆ ಬೆಂಗಳೂರಿಂದ ದಿಲ್ಲಿಗೆ ಪ್ರಯಾಣ ಬೆಳಸಿದರು.

ಬಿಹಾರದ ಕಾಂಗ್ರೆಸ್ ಪ್ರಮುಖರೂ ಘಟನಾ ಶಾಸನ ಸಭೆಯ ಸದಸ್ಯರೂ ಆದ ಶ್ರೀ ಜಗತ್ ನಾರಾಯಣಲಾಲರು ತಾ. ೨೬ ರಲ್ಲಿ ಬೆಂಗಳೂರಿನ ಹಾಸ್ಟೆಲ್ ಗಳಿಗೆ ಭೇಟಿಯಿತ್ತು ಅಲ್ಲಿನ ಕಾರ್ಯಗಳನ್ನು ಪರಿಶೀಲಿಸಿದರು.

ಬೆಂಗಳೂರಲ್ಲಿ ನಡೆಯುವ ಟೆಕ್ನಿಕಲ್ ಎಜ್ಯುಕೇಶನ್ ಸಭೆಯಲ್ಲಿ ಭಾಗವಹಿಸಲು ತಾ. ೨೭ ರಲ್ಲಿ ಡಾ. ಗೋವಿಂದ ಮಾಳವೀಯರು, ಪ್ರೊ. ಬಟ್ಲ, ಪ್ರೊ. ದ್ಯಾನರ್ಜಿ, ಶ್ರೀ ಪಿ ಎಸ್. ಜೋಶಿ, ಹಿಂದಿನ ವಿದ್ಯಾಮಂತ್ರಿ ಸರ್ ಇಲಾಹಿ ಬಕ್ಸ್, ಸರ್ ಜಾನ್ ಸಾರ್ಜೆಂಟ್-ಈ ಮಹನೀಯರು ಬೆಂಗಳೂರಿಗೆ ಆಗಮಿಸಿದರು. ಕೋರ್ಟ್ ಸೇಷನ್ ಕಮಿಟಿಯ ಸಭೆ ಅದೇ ದಿನ ತಾತಾ ವಿಜ್ಞಾನ ಮಂದಿರದಲ್ಲಿ ನಡೆದು ಬೇರೆ ಬೇರೆ ಕಮಿಟಿಗಳ ವರದಿಗಳನ್ನು ಪರಿಶೀಲಿಸಲಾಯಿತು.

ಮೈಸೂರಲ್ಲಿ ತಾ. ೨೪ ರಲ್ಲಿ ಕಸ್ತೂರಬಾ ನಿಧಿಯ ಏಜಂಟರಾದ ಶ್ರೀಮತಿ ಯಶೋಧರಾ ದಾಸಪ್ಪನವರು ಕಾಂಗ್ರೆಸ್ ಮುಖಂಡರೊಡನೆ ದಾವಣಗೆರೆ ತಾಲೂಕಿನ ಹಳ್ಳಿಯೊಂದರಲ್ಲಿ ಸ್ಥಾಪಿತ ಮಂದಿರ ಹಾಗೂ ಶಿಕ್ಷಣ ಶಿಬಿರ ತೆರೆಯುವ ಬಗ್ಗೆ ಚರ್ಚೆ ಮಾಡಿದರು.

ಮೈಸೂರು ನಗರ ಮುಸ್ಲಿಂ ಲೀಗ ಸಮ್ಮೇಳನ ತಾ. ೨೪ರಲ್ಲಿ ಶ್ರೀ ಮಹಮ್ಮದ ಹರೀಫರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಂಸ್ಥಾನದ ಸ್ಥಾನಿಕ ... ಗಳಲ್ಲಿ ಮುಸ್ಲಿಂ ಪ್ರತ್ಯೇಕ ಅಭ್ಯರ್ಥಿ ...

ವ್ಯಾಪಾರ ಪ್ರಪಂಚ



ಮುಂಬಯಿ ಶೇರ ಪೇಟೆ

ತಾ. ೨೮

ಶೇರ ಪೇಟೆಯಲ್ಲಿ ಏನೂ ಉತ್ತೇಜನವಿಲ್ಲ. ರಾಜಕೀಯ ಪರಿಸ್ಥಿತಿ, ಸ್ಟರ್ಲಿಂಗ ಸಾಲಗಳ ಗತಿ ಇವುಗಳನ್ನು ನಿರೀಕ್ಷಿಸುತ್ತ ಪೇಟೆ ಕಣ್ಣಿಗೆ ಕಾಣಿಸಿದೆ. ಕಳೆದ ಅಗಸ್ಟಿನಲ್ಲಿ ಪರಮಾವಧಿಯನ್ನು ಮುಟ್ಟಿದಾಗಿನಿಂದ ಇಂದು ಮೂರರ ಲ್ಲೊಂದರಷ್ಟು ಇಳಿದುಬಿಟ್ಟದ್ದರಿಂದ ಶೇರುಗಳಲ್ಲಿ ಹಣ ತೊಡಗಿಸಿದ ಅನೇಕರಿಗೆ ಅಪಾರ ಹಾನಿಯಾಗಿದೆ. ಈ ವಾರದಲ್ಲಿ ಸಾಲುಗಳು ಸ್ವಲ್ಪ ಸುಧಾರಿಸಿ ಮತ್ತು ಇಳಿಗತಿಯನ್ನು ಕಂಡವು. ಟಾಟಾಸ್ಟೀಲ ಡಿಫರ್ಡ ೧೮೬೫—೦—೦ ರಿಂದ ೧೭೬೫-೦-೦ ರ ವರೆಗೂ ಇಳಿದು ೧೮೪೫-೦-೦ ಕ್ಕೆ ಸುಧಾರಿಸಿತು. ಡಾಲ್ಮಿಯಾ ೯೮೦-೦-೦ ರಿಂದ ೯೭೩-೮-೦ ಕ್ಕಿಳಿಯಿತು. ಫಿನ್ಲೆ ೨೯೨-೦-೦ ಕ್ಕೇರಿ ೨೮೩-೦-೦ ಕ್ಕಿಳಿದು ೨೯೦-೦-೦ ಕ್ಕೂ ಕೋಹಿನೂರ ೬೨೬-೦-೦ ರಿಂದ ೫೯೭-೦-೦ ಕ್ಕಿಳಿದ ೬೦೯—೦—೦ ಕ್ಕೂ ಸ್ವದೇಶಿ ೫೮೦—೦—೦ ರಿಂದ ೫೯೭-೦-೦ ಕ್ಕೇರಿ ೫೮೯-೦-೦ ಕ್ಕೂ ಗೋಕಾಕ ೨೪೬-೦-೦ ರಿಂದ ೨೯೦-೦-೦ ಕ್ಕೇರಿ ೨೮೭-೦-೦ ರಲ್ಲಿ ಕೊನೆಗಂಡವು. ಟಾಟಾ ಕೆಮಿಕಲ್ ೩೯-೦-೦ ರಿಂದ ೩೭-೮-೦ ಕ್ಕಿಳಿದು ೩೯-೧೨-೦ ಕ್ಕೇರಿದರೆ ಇಂಡಿಯನ್ ಅಯರ್ನ ೨೪೭-೦-೦ ರಿಂದ ೨೪೦-೦-೦ ಕ್ಕಿಳಿದು ೨೪೬-೦-೦ ಕ್ಕೂ ಅಸೋಸಿಯೇಟೆಡ ಸಿಮೆಂಟ್ಸ ೧೭೧-೮-೦ ರಿಂದ ೧೬೫-೪-೦ ಕ್ಕಿಳಿದು ೦೬೯-೦-೦ ರಲ್ಲೂ ಕೊನೆಗಂಡವು. ಬ್ಯಾಂಕುಗಳಲ್ಲಿ ಸೆಂಟ್ರಲ ೬೪-೮-೦ ಯಿಂದ ೬೫-೦-೦ ಕ್ಕಿಳಿದು ೯೪೧ ಕ್ಕೂ ಇಂಪೀರಿಯಲ್ ಎಸ್. ಬಿ. ೨೨೫೦—೦—೦ ರಿಂದ ೨೧೦೫-೦-೦ ಕ್ಕಿಳಿದು ೨೧೪೭-೦-೦ ಕ್ಕೂ ರಿಝರ್ವ ೧೦೮-೦-೦ ರಿಂದ ೧೨೨—೦—೦ ಕ್ಕೇರಿ ೧೧೫-೦-೦ ಕ್ಕಿಳಿದು ೧೧೬-೮-೦ ಗೂ ಸುಧಾರಿಸಿದವು. ಸರಕಾರಿ ಸಾಲ ಪತ್ರಗಳಲ್ಲಿ ಜಿ. ಪಿ. ೧೦೦-೧೪-೦ ಯಿಂದ ೧೦೦-೫-೦ ಕ್ಕಿಳಿದು ೧೦೦-೧೧-೦ ಗೆ ಸುಧಾರಿಸಿತು.

ಚಿನ್ನ ಬೆಳ್ಳಿ

ಚಿನ್ನದ ಕೊರತೆ ಪಡೆದಿದ್ದಾಗಿದ್ದು ಕಳ್ಳದಾರಿಯಲ್ಲಿ ಅದನ್ನು ತರಿಸುವ ಪ್ರಯತ್ನವಾಗುತ್ತಿದ್ದರೂ ಅದಿನ್ನೂ ಯಶಸ್ವಿಯಾದಂತಿಲ್ಲ. ಆದುದರಿಂದ ಬೆಲೆ ಬಿಗಿಯಾಗಿಯೇ ಇದೆ. ತಯಾರಿ ಚಿನ್ನ ೧೧೦—೦—೦ ಗಿಂತ ಕೆಳವು ಅಷ್ಟೆ ಏರಿಳಿಯುತ್ತಿದೆ. ಬೆಳ್ಳಿ ತುಸು ಮೆದುವಾಗಿದೆ. ೧೬೯-೮-೦ ರಿಂದ ೧೬೬-೮-೦ ರ ವರೆಗಿಳಿದರೂ ತಿರುಗಿ ೧೭೦-೧೨-೦ ಕ್ಕೇರಿತು.

ಅರಳೆ

ಅರಳೆ ಪೇಟೆಯಲ್ಲಿ ಏನೂ ಉತ್ಸಾಹವಿಲ್ಲ. ಸದ್ಯ ಸಪ್ಟೆಂಬರ ವಾಯಿದೆಯಲ್ಲಿಷ್ಟೇ ವ್ಯಾಪಾರ ಜರುಗಿದೆ. ಅದಕ್ಕಿಂತ ಮೊದಲಿನ ವಾಯಿದೆಯ ಅರಳೆಯ ಅನಧಿಕೃತ ವ್ಯಾಪಾರ ಸರಕಾರ ನಿಯಂತ್ರಿತ ಕನಿಷ್ಠ ಬೆಲೆಗಿಂತಲೂ ಕೆಳಮಟ್ಟದಲ್ಲಿ ನಡೆಯುತ್ತಿದೆ. ಪರಿಸ್ಥಿತಿಯನ್ನು ಪರಿಶೀಲಿಸಲು ಸರಕಾರವನ್ನು ಒತ್ತಾಯಗೊಳಿಸಲಾಗುತ್ತಿದೆ. ಸಪ್ಟೆಂಬರ ಅರಳೆ ೪೩೨-೧೪-೦ ರಿಂದ ೪೩೬-೪-೦ ಕ್ಕೆ ಸುಧಾರಿಸಿ ತಿರುಗಿ ೪೩೨-೦-೦ ಕ್ಕಿಳಿದ ೪೩೬-೮-೦ ಕ್ಕೇರಿತು.

ಎಣ್ಣೆಕಾಳು

ಶೇಂಗಾ	೧೪೮-೦-೦
ಅಗಸಿ	೨೬-೧೨-೦
ಅಗಸಿ ಎಣ್ಣೆ	೧೮-೧೦-೦

ಸಾಂಗಲಿ ಪೇಟೆ

	ತಾ.
ಅರಿಷಣ ಹೇರು	೯೮-೧೦೭
ಮೆಣಸಿನಕಾಯಿ ಹೇರು ,,	೧೦೦-೧೭೫
ಶೇಂಗಾ ಖಂಡಿ	೧೨೨-

ಹುಬ್ಬಳ್ಳಿ

ಜಯವಂತ ಹತ್ತಿ	ನಂ. ೧	೨೫೫-೨೬೦
„	ನಂ. ೨	೨೩೫-೨೪೫
„	ನಂ. ೩	೨೧೫-೨೩೦
ಅಕ್ಕಲಂಡ ಹತ್ತಿ		೨೫೦-೨೬೫
ಜಿನ ಹೊಸದು		೧೬೦-೧೭೦
ಜಿನ ಹಳೇದು		೧೭೦-೧೭೭
ಡಬಲರೋಲ		೧೫೫-೧೬೫
ಸಾಜಿನ		೧೫೫-೧೬೦

ಗಬೇಕು, "ವಂದೇ ಮಾತರಂ" ಶಾಲೆಗಳಲ್ಲಿ ಹಾಡುವುದನ್ನು ನಿಷೇಧಿಸಬೇಕು, ಪೋಲೀಸ ಪಡೆಯಲ್ಲಿ ಮುಸ್ಲಿಮರಿಗೆ ವಿಶೇಷ ಪ್ರಾತಿನಿಧ್ಯ ಬೇಕು—ಎಂಬ ಠರಾವುಗಳು ಪಾಸಾದವು.

ಸರಕಾರಿ ಕೆಳದರ್ಜೆ ನೌಕರರ ಸಭೆ ತಾ ೨೩ ರಲ್ಲಿ ಬೆಂಗಳೂರಿನ ಗೌ॥ ಸೋಪ್ ಫ್ಯಾಕ್ಟರಿಯ ಮೈದಾನದಲ್ಲಿ ಸೇರಿತ್ತು. ಕನಿಷ್ಠ ಸಂಬಳ, ತುಟ್ಟಿ ಭತ್ಯ, ವಿದ್ಯಾಭ್ಯಾಸ ಸೌಕರ್ಯ ಮೊದಲಾದವುಗಳ ಬಗ್ಗೆ ಬೇಡಿಕೆಗಳನ್ನು ಸರಕಾರದ ಗಮನಕ್ಕೆ ತರಬೇಕೆಂದು ನಿರ್ಧರಿಸಲಾಯಿತು.

ಬೆಂಗಳೂರ ಸಿಟಿ ಅಕ್ಕಿ ಪೇಟೆಯಲ್ಲಿರುವ ಶ್ರೀ. ಮಹದೇವಿ ಅಕ್ಕನವರ ಬೋರ್ಡಿಂಗ ಹೋಮ್ ನಲ್ಲಿ ವೀರಶೈವ ವಿದ್ಯಾರ್ಥಿನಿಯರಿಗೆ ಉಚಿತ ವಸತಿ ಭೋಜನಗಳು ದೊರಕುವವೆಂದು ಗೌ॥ ಕಾರ್ಯದರ್ಶಿನಿಯವರು ತಿಳಿಸುತ್ತಾರೆ.

ಮದರಾಸಿನ ಸೆಂಟ್ ಥಾಮಸ್ ಮೌಂಟ್ ನಲ್ಲಿ ಮಿ॥ ಎಚ್. ಜೆ. ಹಿಲ್ಬರನ್ನು ಕೊಲೆಮಾಡಿದ ಅಪರಾಧಕ್ಕೆ ಗುರಿಯಾದವನನ್ನು ಬೆಂಗಳೂರಿನ ದಂಡಿನಲ್ಲಿ ತಾ ೨೨ರಲ್ಲಿ ದಸ್ತಗಿರಿಮಾಡಿ ೨೩ರಲ್ಲಿ ಬೆಂಗಳೂರಿನ ಜುಬ್ಲಿ ರಾಸ್ಪತ್ರೆಯಲ್ಲಿ ಇಡಲಾಗಿದೆ.

ಬೆಂಗಳೂರಿನಲ್ಲಿ "ಪಾಲಿಟೆಕ್ನಿಕ್" ಸಂಸ್ಥೆಯೊಂದನ್ನು ಸ್ಥಾಪಿಸಲು ಧನಸಹಾಯಕ್ಕೆ ಸರಕಾರ ೨ ಲಕ್ಷ ೪೦ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದೆ. ಈ ಬಗ್ಗೆ ಶ್ರೀ. ದಾಜನಹಳ್ಳಿ ರಾಮಚೆಟ್ಟಿಯವರು ಸುಮಾರು ೧॥ ಲಕ್ಷ ರೂಪಾಯಿಗಳನ್ನು ದಾನಮಾಡಿದ್ದಾರೆ.

ಅಖಿಲಭಾರತ ಗ್ರಾಮ ಕೈಗಾರಿಕೆಯ ಸಂಘದ ಪ್ರಧಾನ ಕಾರ್ಯದರ್ಶಿಗಳೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ ಆದ ಶ್ರೀ. ಜೆ. ಸಿ. ಕುಮಾರಪ್ಪನವರು ತಾ. ೨೧ರಲ್ಲಿ ಮೈಸೂರಿಗೆ ಭೆಟ್ಟಿಯಿತ್ತು ನೀಲಗಿರಿಗೆ ತೆರಳಿದರು.

ಮೈಸೂರು ಸಿಟಿಯಲ್ಲಿರುವ ಬಸ್ ಸಂಚಾರ ವ್ಯವಸ್ಥೆಯನ್ನು ರಾಷ್ಟ್ರೀಕರಣಮಾಡಬೇಕೆಂದು ಸೂಚಿಸುವ ಠರಾಯೊಂದನ್ನು ಶಾಸನ ಸಭೆ

ಯಲ್ಲಿ ಕಾಂಗ್ರೆಸ ಪಕ್ಷದವರು ಮುಂದ್ರಿಸಲಿರುವರೆಂದು ತಿಳಿದುಬಂದಿದೆ.

ಎಕ್ಸ್ ಚೇಂಜ್ ಬ್ಯಾಂಕ್ ಅಫ್ ಇಂಡಿಯಾ ಎಂಡ್ ಆಫ್ರಿಕ—ಎಂಬ ಸಂಸ್ಥೆಯ ಬೆಂಗಳೂರಿನ ಶಾಖೆಯ ಆರಂಭೋತ್ಸವವು ತಾ. ೨೩ ರಲ್ಲಿ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿರುವ "ಶ್ರೀನಿವಾಸ ಬಿಲ್ಡಿಂಗ್ಸ್" ಭವನದಲ್ಲಿ ಜರುಗಿತು.

ತಾ ೨೧ ರ ಬೆಳಗ್ಗೆ ಬೆಂಗಳೂರಿನ ನಗರ ಸಭಾಧಿಕಾರಿಗಳು ರಾಜಾಜಿಪಾರ್ಕ್ ನ ಹಿಂದಿರುವ ಸ್ವತಂತ್ರ ಪಾಳ್ಯದಲ್ಲಿ ಬಡ ಕೂಲಿಕಾರರು ಕಟ್ಟಿಕೊಂಡಿದ್ದ ೨೦ ಮನೆಗಳನ್ನು ನೆಲಸಮಮಾಡಿದರೆಂದು ಗೊತ್ತಾಗಿದೆ.

ಶ್ರೀ ಕಾಳಿಂಗರಾವ ಶ್ರೀನಿವಾಸರ ನೃತ್ಯ ಪ್ರದರ್ಶನವು "ಮಾತೃಭೂಮಿ" ಯ ಸಂಪಾದಕರಾದ ಶ್ರೀ ಏನ. ಎಲ್. ಶ್ರೀ ಕಂಠಯ್ಯನವರ ಅಧ್ಯಕ್ಷತೆಯಲ್ಲಿ ದಾವಣಗೆರೆಯಲ್ಲಿ ಜರುಗಿತು.

ಕೋಲಾರದ ಚರಿಯಲ್ಲಿರುವ ಕೇಂದ್ರ ಕಸ್ತೂರಬಾ ಶಿಕ್ಷಣ ಕೇಂದ್ರಕ್ಕೆ ಶ್ರೀ ಮಹಾರಾಜರು ಒಂದು ಸಾವಿರ ರೂಪಾಯಿ ಕಾಣಿಕೆ ಕೊಟ್ಟರು.

ದಕ್ಷಿಣ ಕನ್ನಡ

ಮಂಗಳೂರಲ್ಲಿ ತಾ. ೪—೫—೪೭ ರಂದು ಶ್ರೀ ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ದಕ್ಷಿಣ ಕನ್ನಡವನ್ನು ಕೇರಳಕ್ಕೆ ಕೂಡಿಸಲು ಮಾಡುವ ಯತ್ನವನ್ನು ವಿರೋಧಿಸಿ ನಿರ್ಣಯಮಾಡಲಾಯಿತೆಂದು ತಿಳಿದುಬಂದಿದೆ.

ಮಂಗಳೂರಿನ ಹಂಚಿನ ಕಾರ್ಖಾನೆಯ ಮಾಲಿಕ ಮಜೂರರೊಳಗಿನ ವ್ಯತ್ಯಾಸಗಳನ್ನು ತೀರ್ಮಾನಿಸಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನಿಯಮಿಸಲಾದ ನಿರ್ಣಯಕ ಸಮಿತಿಯು ಮೂಲವೇತನದ ಹೆಚ್ಚಳ, ಬೋನಸ್ಸು ಪರಿಹಾರ-ಇವುಗಳ ಬಗ್ಗೆ ತನ್ನ ತೀರ್ಪನ್ನು ಕೊಟ್ಟಿದೆಯೆಂದು ಗೊತ್ತಾಗಿದೆ.

ಕಾರ್ಕಳದ ಕಾಂತಾವರದಲ್ಲಿ ತಾ ೨೮ ರಲ್ಲಿ ಮಂಗಳೂರು ಸಬ್ ಡಿವಿಜನಲ್ ಪೋಸ್ಟಲ್ ಇನ್ಸ್ಪೆಕ್ಟರಿಂದ ಪರೀಕ್ಷಾರ್ಥ ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ಸಂರಕ್ಷಣ ಮಿತ್ರಮಂಡಳಿಯವರು ಇ. ವಿ. ಶಾಲಾ ಹಳೆಯ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ವಿದ್ಯಾದಾಯಿನಿ ಹೈಸ್ಕೂಲಿನ ನೂತನ ರಾಮಕೃಷ್ಣ ಮಂದಿರದ ರಂಗಭೂಮಿಯಲ್ಲಿ 'ವಿಜಯೀ ಖಡ್ಗ' ಎಂಬ ಐತಿಹಾಸಿಕ ಸಂಗೀತ ನಾಟಕವನ್ನು ಕಳೆದವಾರ ಅಭಿನಯಿಸಿದರು.

ಮಣಿಪುರದಲ್ಲಿ ಒಂದು ಪರೀಕ್ಷಾರ್ಥ ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಪ್ರಥಮ ಸಭೆಯು ತಾ ೧೨-೫-೪೭ ರಲ್ಲಿ ಜರುಗಿ ಅಧಿಕಾರಿಗಳ ಚುನಾವಣೆಯಾಯಿತು.

ಇನ್ನಂಜೆಯ ಸ್ಥಳೀಯ ಗ್ರಾಮಸೇವಾ ಸಮಿತಿ ಹಾಗೂ ಹಳೆಯ ವಿದ್ಯಾರ್ಥಿ ಸಂಘಗಳ ವಾರ್ಷಿಕೋತ್ಸವ ಮತ್ತು ಶಿಶುವಿಹಾರದ ಶಂಕುಸ್ಥಾಪನೆ—ಇವು ಶ್ರೀ ಪಿ. ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ತಾ. ೨೫ ರಲ್ಲಿ ಜರುಗಿದವು.

ತಾ. ೨೨ ರಲ್ಲಿ ಮದರಾಸು ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀ ಬಿ. ಬಿ. ಶೆಟ್ಟರು 'ವೆನ್ ಲಾಕ್' ಆಸ್ಪತ್ರೆಯನ್ನು ಸಂದರ್ಶಿಸಿ ಎಲ್ಲ ರೋಗಿಗಳನ್ನು ನೋಡಿದರು.

ಶಿರ್ವದ ಹಿಂದೂ ಹೈಸ್ಕೂಲಿನಲ್ಲಿ ೪ ನೆಯ ಫಾರಮ್ ನ್ನು ತೆರೆಯಲು ಮಾನ್ಯ ಡಾಯರೆಕ್ಟರರ ಅನುಮತಿಯು ದೊರೆತಿದೆಯೆಂದು ತಿಳಿದಿದೆ.

ರಾಮಕೃಷ್ಣ ಮಿಶನ್ನಿನ ಒಂದು ಶಾಖೆ ಜೂನಿನ ಪ್ರಥಮ ವಾರದಲ್ಲಿ ಮಂಗಳೂರಿನ ಘಳ್ಳೇರಿನಲ್ಲಿ ತೆರೆಯಲಾಗುವುದೆಂದು ಸುದ್ದಿಯಿದೆ.

ಮದ್ರಾಸ ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀ ಬಿ. ಬಿ. ಶೆಟ್ಟರು ತಾ. ೨೬ ರ ರಾತ್ರಿ ಕುಂದಾಪುರಕ್ಕೆ ಬಂದು ಗಾಂಧೀ ಮೈದಾನದಲ್ಲಿ ಅನೇಕ ಸ್ಥಳೀಯ ಸಂಘ ಸಂಸ್ಥೆಗಳಿಂದ ಮಾನಪತ್ರಗಳನ್ನು ಸ್ವೀಕರಿಸಿ ಅವುಗಳಿಗೆ ಉತ್ತರ ಕೊಡುತ್ತ ಕಾಂಗ್ರೆಸ್ಸಿಗೆ ಜನರೆಲ್ಲರೂ ಬೆಂಬಲ ಕೊಡಬೇಕೆಂದು ಹೇಳಿದರು.

ಯಾದಗಿರಿಯಲ್ಲಿ ತಾ ೨೧ ರ ರಾತ್ರಿ ಆರ್ಯ ಸಮಾಜದ ಇಬ್ಬರನ್ನು ಇರಿತದಿಂದ ಗಾಯಗೊಳಿಸಿದ್ದು ಅವರನ್ನು ಆಸ್ಪತ್ರೆಗೆ ಕಳುಹಲಾಗಿದೆ. ಕೆಲಸದ ನಿಮಿತ್ತ ಬಂದ ಖಾದಿ ಕೆಲಸಗಾರರಾದ ಶ್ರೀ ಹುನಗುಂದ ವಾಸುದೇವಾಚಾರ್ಯರನ್ನು ಗಲಾಟೆಯಲ್ಲಿ ಎತ್ತಿ ಒಗೆದದ್ದರಿಂದ ಅವರಿಗೆ ಸ್ವಲ್ಪ ಗಾಯವಾಗಿ ಪಕ್ಕದ ಮನೆಯಲ್ಲಿ ಅಡಗಿಕೊಂಡು ಪಾರಾಗಿ ಹೋಗಬೇಕಾಯಿತು. ಶ್ರೀ ಚಂದ್ರಶೇಖರ ಶಾಸ್ತ್ರಿಗಳನ್ನು ಕಾಣಬೇಕೆಂದು ಹೊರಟ ತುಂಗಭದ್ರೆಯ ಸ್ವಾಮೀ ರಾಮಾಚಾರ್ಯರಿಗೆ ಯಾರೂ ಇಲ್ಲದ ಮನೆಯೊಂದನ್ನು ಅವರದೆಂದು ತೋರಿಸಿ ಅದರೊಳಗೆ ಆಚಾರ್ಯರು ಹೊಕ್ಕಾಗ 'ಇಲ್ಲಿಂದ ಹೊರಡಿರಿ, ಇಲ್ಲವಾದರೆ ಅಪಾಯ' ಎಂದು ಅವರನ್ನು ಪಾರುಮಾಡಲಾಯಿತು.

ಮುಕ್ಕಾಂ ಮುಂಬಯಿ*

★ ಲೇ:— ನರಸಿಂಹ ಜೋಶಿ

ಮುಂಬಯಿ ★

✻ ಪಾತ್ರಗಳು ✻

೧) ಮಾಧವ:— ಮಧ್ಯಮ ವರ್ಗದ ಕಾರಕೂನ
೨) ನಾರಾಯಣಪ್ಪ:— ಗಿರಣಿ ಕೂಲಿಕಾರ
೩) ವೆಂಕಣ್ಣ:— ಸ್ವಾವಲಂಬಿ ವಿದ್ಯಾರ್ಥಿ
೪) ಸುಂದರಾ:— ವೆಂಕಣ್ಣನ ಕಾಲೇಜದ ಗೆಳತಿ

[ಹಿನ್ನೆಲೆ:— ಮಾಧವ, ನಾರಾಯಣಪ್ಪ, ವೆಂಕಣ್ಣ ಈ ಮೂವರೂ ಗೆಳೆಯನೊಬ್ಬನಲ್ಲಿ ಬಹಳ ದಿನಗಳಿಂದ ಇರುತ್ತಿದ್ದರು. ಆದರೆ ಗೆಳೆಯನ ಮದುವೆಯಾದ ಕೂಡಲೆ ಕೋಣೆಯಿಂದ ಹೊರಗೆ ಹೋಗಲು ಅಪ್ಪಣೆಯಾಯಿತು. ಕಾಯದೆಯ ದೃಷ್ಟಿಯಿಂದ ಕೋಣೆಯು ಗೆಳೆಯನ ಹೆಸರಿನ ಮೇಲಿದ್ದುದರಿಂದ ಈ ಮೂವರು ನಿರುಪಾಯರಾಗಿ ಸದ್ಯಕ್ಕೆ ಕಾಲ್ದಾರಿಯ ಮೇಲೆ (Foot-Path) ತಮ್ಮ ಗಂಟು ಗದಡಿಗಳನ್ನಿಟ್ಟು ಇನ್ನು ಮುಂದೆಲ್ಲಿ ಹೋಗಬೇಕೆಂದು ಯೋಚನೆಗೊಳಗಾಗಿದ್ದಾರೆ.]

ಪ್ರವೇಶ ೧

ಸ್ಥಳ:— ಮಾಟುಂಗಾ ವಿಭಾಗದ ವಿಶಾಲವಾದ ಕಾಲ್ದಾರಿಯ ಗಿಡದ ನೆರಳಲ್ಲಿ

ಮಾಧವ:— ನಾಶಾಯಿತು, ಜೀವನ ಬೇಸರಾಯಿತು. ಪ್ರೇಮ ಮಿತ್ರರು ಯಾವಾಗ ಶತ್ರುಗಳಾಗಿ ಕೊಯ್ಯುವರೆಂಬುದನ್ನು ಹೇಳಲು ಬರುವದಿಲ್ಲ ಅಂತ ಹಿರೇರು ಹೇಳುತ್ತಿದ್ದರು. ಆದರೆ ಬಾಗಿಲ ಬಡಿಯೋ ತನಕಾ ಮನಸ್ಯಾ ಬಗ್ಗೋದುಲ್ಲಾ ಅಂತಾರ ಅನೇಕ ಜನ. (ಸ್ವಲ್ಪ ಧೈರ್ಯ ತಂದು ಕೊಂಡವನಂತೆ) ಹೀಂಗೆಲ್ಲಾ ವ್ಯಸನ ಪಟ್ಟುಕೊಂಡರ ಆಗೋದೇನು? ಎಲ್ಲಿಯಾದರೂ ಖೋಲಿ ದೊರಕೇ ದೊರಕತದ— ಕಾಳಜೀ ಮಾಡೋಣ ಬ್ಯಾಡರ್‍ಯೋ ಹುಡುಗೋರ್‍ಯಾ...... ನಾವೂ ಗಂಡಸರಿದ್ದೇವೆ!

ನಾರಾಯಣಪ್ಪ (ಸ್ವಲ್ಪ ಖಿನ್ನ ಮನಸ್ಸಿನಿಂದ)— ನಾಶಾಯಿತು ದಿಡೋ ನಿಶ್ಚ ದಾಯಿ ಬಡಾಯಿ. ನಾಲ್ಕು ದಿವಸಾಯ್ತು. ಈ ಉರಿಯೋ ಬಿಸಿಲಾಗ ಕಾಲು ದಾರಿ ಮ್ಯಾಲೆ ಬಿದ್ದುಕೊಂಡಿದ್ದೇವಿ. ಇನ್ನೂ ಖೋಲಿ ಸಿಗತದ ಅಂತ ಆಂಬ ಕೊಚ್ಚತೀರಿ. ಏನ ನಮ್ಮ ಸ್ಥಿತಿ, ಏನ ನಮ್ಮ ಗತಿ ಹೊಟ್ಟಿಪಾಡಿಗಾಗಿ ಊರ ಬಿಟ್ಟು ಮುಂಬಯಿ ಸೇರಿದಿ. ಆದರ ಹೊಟ್ಟೀ ಉದ್ಯೋಗ ಅಂತೂ ದೂರ ಉಳೀತು. ತಲಿಮ್ಯಾ ಇರಲಿಕ್ಕೆ ಸ್ಥಳ ಇಲ್ಲಾ. ಅಂತೂ ಇದೆಲ್ಲ ಪೂರ್ವ ಜನ್ಮದ ಪ್ರಾರಬ್ಧಕರ್ಮ.

ವೆಂಕಣ್ಣ:— ನೀವೆಲ್ಲ ಹೀಂಗ ಯಾಕ ಕೈಕಾಲು ಕಳಕೊಂತೀರಿ ಅನ್ನೋದು ನನಗ ತಿಳಿವಲ್ದು. ಬರಗಾಲ ಪ್ರದೇಶದಿಂದ ಗುಳೇ ಕಟ್ಟಿಕೊಂಡು ಮುಂಬಯಿ ಹೊಕ್ಕವರ್‍ಹ್ಯಾಂಗ ಹಿಂಗ್ಯಾಕ ಪ್ರಾಣ ಬಿಡತೀರಿ? ಐಸ್ಪೈದ ಆಧಾರ ಮಳೆಗಾಲ ಕಳದೀರಿ ಬಂದ ಸಂಕಟ ತಾತ್ಪೂರ್ತಿಕ ದಾಟಲಿಕ್ಕ ಎಷ್ಟೋ ಉಪಾಯ ಅವ. ನೀವೆಲ್ಲಾ ಬ್ಯಾಸತ್ತಿದ್ದರ ಹೀಂಗ ಮಾಡೋಣ. ಬಿ. ಬಿ. ಸಿ. ಆಯ್. ಲೋಕಲ ಗಾಡಿಯೊಳಗಿಂದ ಸೆಕೆಂಡ ಕ್ಲಾಸಿನಾಗ ಕೂತು ವಿರಾರಕ್ಕ ಹೋಗೋಣು ಮತ್ತು ವಿರಾರದಿಂದ ಚರ್ಚಗೇಟ ಸ್ಟೇಶನ್ನಿಗೆ ಪರತ ಬರೋಣು. ಚರ್ಚಗೇಟತನಕ ನಿದ್ದಿ ಉತ್ತಮ ಆಗತದ; ಅಷ್ಟೂ ಸಾಕಾಗದಿದ್ದರ ಮತ್ತ ವಿರಾರಕ್ಕೆ ಹೋಗೋಣು. ವಾರ್ಡರ ಬಂದ ನಮ್ಮನ್ನ ಎಬ್ಬಿಸೋದ ಅಷ್ಟರಾಗ ಆದ. ಮುಂದಿನ ವಿಚಾರ ಮುಂದ.

ಮಾಧವ:— ಟಿಕೀಟ ಚೆಕ್ಕರ ಬಂದರ...?

ವೆಂಕಣ್ಣ:— ಸೆಕೆಂಡ ಕ್ಲಾಸಿನಾಗ 'ಜಂಟಲಮನ್' ಪ್ರವಾಸ ಮಾಡ್ತಾರಂತ ಟಿಕಿಟ ಚೆಕರ ಸಹಸಾ ಬರೋದಿಲ್ಲ. ದುರ್ದೈವದಿಂದ ಒಂದು ವೇಳೆ ಬಂದರ ಕೈಬೆಚ್ಚಗ ಮಾಡಿ ಕಳಿಸಿದ್ರ ಆತು.

ನಾರಾಯಣಪ್ಪ:— ನೀವು ಹಗಲು ಕೆಲಸ ಮಾಡಾವ್ರು ಹೀಂಗ ಮಾಡಕೋತ ಹೋದ್ರ ನಡೀತದ. ನನಗ ರಾತ್ರಿಪಾಳಿ ಕೆಲ್ಸ ಇದ್ದಾಗ ಬೆಳತನಕ ದುಡಿದು ನಿದ್ದೆ ಬೇಕಾಗತದ. ಹಗಲು ಗಾಡೀಯೊಳಗೆ ಬಹಳ ಗದ್ದಲ ಇರತದ. ಆ ವಿರಾರದಿಂದ ಬರೋ 'ಭೈಯ್ಯಾ' ಜನರು ನಮಗ ಕಿಂತಾ ಬ್ಯಾಡ. ತಲೀ ಮ್ಯಾಲೆ ನಾಲ್ಕು ಬಾಳಿಫಡ, (ಗೊನೆ) ಎರಡು ಹಂಡೆ ಹಾಲು, ತರಕಾರಿ ಕಾಯಿಪಲ್ಲೇದ ಗಂಟು, ಹೊತಗೊಂಡು ಮೂರನೆ ತರಗತಿ 'ಪಾಸು' ತೆಗಿಸಿ ಸೆಕೆಂಡ ಕ್ಲಾಸಿನಾಗ ಅಡ್ಯಾಡತಾರ. ಅವರ ಮುಂದ ನಮ್ಮ ಆಟ ನಡ್ಯೋದಿಲ್ಲ!

ಮಾಧವ:— (ಏನೋ ನೆನಪಿಸಿಕೊಂಡವನಂತೆ) ನಾವು ಇಲ್ಲಿಂದ ಬೇಗ ಕಳಕಿತ್ತ ಬೇಕು. ಮರೆತ ಬಿಟ್ಟರೇನ್ರಿ, ಇಪ್ಪರಾಗ— ಯಜಮಾನರೆ ಈ ಊರಾಗ ತಿವಿತಾತಿವಿತದ ಹೂಲಿ ಏಳ್ತದ ಈ ಕಾಲು ದಾರಿ ಮ್ಯಾಲ ಒಂದು ಕ್ಷಣ ಇರೋದು ಯೋಗ್ಯ ಅಲ್ಲ...

ನಾರಾಯಣಪ್ಪ:— (ಉತ್ಸಾಹದಿಂದ) ಅವಾವನೋ ಅವನು ತಿವಿಯುವವನು—ನಾನು ಇಲ್ಲಿರುವತನಕ (ಎಂದು ಎದ್ದು ತಮ್ಮ ಹೊಡೆದು ಮೀಸಿಗೆ ಹುರಿ ಹಾಕುವನು)

ವೆಂಕಣ್ಣ:— ಇರಲಿ ನಾರಾಯಣಪ್ಪ! ನಿಮ್ಮ ಶೌರ್ಯದ ಪ್ರದರ್ಶನ ಬೇಡ. ನಿಮ್ಮ ಎದೆಗಾರಿಕೆಯ ಅರಿವು ನನಗದೆ.

ಮಾಧವ:— ಹಾಂಗಾದರ ಏನು ಮಾಡೋದು ಎಲ್ಲಿ ಹೋಗೋದು, ಇದ ಕ್ಷಣಕ್ಕೆ ನಿಶ್ಚಯಿಸಿಬಿಡ್ರಿ. ಯಾವದ ನಿರ್ಣಯಕ ನೀವು ಬರಲಿಲ್ಲ ಅಂದ್ರ ನಾ ನನ್ನ ಗುಡಚಾಪಿ ಊರಿಗೆ ಕಿತ್ತಾಂವೆ. ಇದೇ ನನ್ನ ಕೊನೆಯ ನಿರ್ಣಯ ಇಲ್ಲದ್ರ (ಮೂರ್ಛೆ ಬಂದು ಬೀಳುವನು).

[ನಾರಾಯಣಪ್ಪನೂ ವೆಂಕಣ್ಣನೂ ಮಾಧವನನ್ನು ಉಪಚರಿಸುವರು, ನಾರಾಯಣಪ್ಪನು ಓಡಿಹೋಗಿ ಇರಾಣೀಹಾಟೇಲಿನೊಳಗಿಂದ ಒಂದು ಗ್ಲಾಸು ನೀರನ್ನು ಒಯ್ದು ತಪ್ಪು ಚಕಾಪಕನ್ನು ತರುವನು. ಅವು ಚಹಾಕುಡಿದ ನಂತರ ಮಾಧವನಿಗೆ ಸ್ಮೃತಿ ಬರುವದು.]

ಪ್ರವೇಶ ೨

ಸ್ಥಳ—ಅದೇ ವಿಶಾಲವಾದ ಕಾಲುದಾರಿ

[ಗಿಡದ ತಂಪಾದ ನೆರಳಿನಲ್ಲಿ ಮೂವರು ಗೆಳೆಯರು ಚಿಂತೆಹಾಕಿ ಕುಳಿತಿದ್ದಾರೆ. ವೆಂಕಣ್ಣನ ಕೈಯಲ್ಲಿ "Housing Problem" ಪುಸ್ತಕ, ಮಾಧವ ಕೆಲವು ಇನಕ್ಕೂರನ್ಸ ಕಂಪನಿಯ ಫಾರ್ಮುಗಳನ್ನು ಪರೀಕ್ಷಿಸುತ್ತಲಿದ್ದಾನೆ. ನಾರಾಯಣಪ್ಪ ಸಿಗರೇಟು ಸೇದಿ ಹವೆಯಲ್ಲಿಯ ಹೊಗೆಯ ತರಂಗಗಳನ್ನು ನಿರೀಕ್ಷಿಸುತ್ತಲಿದ್ದಾನೆ.]

[ಇಷ್ಟರಲ್ಲಿ ಇಬ್ಬರು ಪೋಲೀಸರೂ ಒಬ್ಬ ಫೌಜದಾರನೂ ಬರುವರು.]

ವೆಂಕಣ್ಣ:— ಕ್ಷಮಿಸಿ ಫೌಜದಾರ ಸಾಹೇಬರೇ ನಮ್ಮ ಪರಿಸ್ಥಿತಿ ನಿವೇದಿಸಲು ನಾಚುತ್ತೇವೆ. ಕಾಲು ದಾರಿಯ ಮೇಲೆ ಜೀವನ ನಡೆಸುವ ನಮ್ಮಂಥವರು ೭ ಲಕ್ಷ ಜನ ಈ ಊರಲ್ಲಿದ್ದಾರೆ ನಾವಾವತರೂ ಪರಿಸ್ಥಿತಿಯ ಗುಲಾಮರಾಗಿದ್ದೇವೆ. ಯುದ್ಧಜನ್ಯ ಪರಿಸ್ಥಿತಿಯ ಮೂಲಕವೂ, ಔದ್ಯೋಗಿಕ ಪ್ರಗತಿಯಿಂದಲೂ ಜನಸಂಖ್ಯೆ ಮಿತಿಮೀರಿ ಬೆಳೆದಿದೆ. ಬೆಳೆಯುತ್ತಲಿದೆ ಆದರೆ ಅದರೊಡನೆ ಇರಲು ಸಾಕಷ್ಟು ಮನೆಗಳ ನಿರ್ಮಾಣವಾಗಿಲ್ಲ. ಎಲ್ಲೆಲ್ಲಿ ಹೋದರೂ ಜನಸಂದಣಿ ಹೀಗಾಗಿ ಸರಕಾರಕ್ಕೂ ಒಂದುದೊಡ್ಡ ಪ್ರಶ್ನೆಯಿದು. ಇಗೋ ಇವಂ ನೋಡಿ 'Housing Problem' ಲೇಖಕನ ಮತ. ಸಹಕಾರೀ ತತ್ವದ ಮೇಲೆ ಮನೆಗಳ ಏರ್ಪಾಡು ಮಾಡುವದು ಅತ್ಯವಶ್ಯ.

ಪೋಲೀಸಪ್ಪಯರು:— ಸಾಬ ಏ ಸಬ್ ಬದ್ಮಾಷ ದೀಖತಾ ಹೈ ಚೌಕಿ ಪರ.........

ಫೌಜದಾರ:— ಏ ಕ್ಯಾ ತುಹ್ಮಾರಿ ಗಡಬಡ?

[ಫೌಜದಾರನ ಬಿರುಸಾದ ಮಾತು ಕೇಳಿದೊಡನೆ ಪೋಲೀಸರು ಖಬರ್ ಖಬರ್ ಎಂದು ಸಪ್ಪಳ ಮಾಡಿ ಹಿಂದೆ ಸರಿಯುವರು.]

ಫೌಜದಾರ:— (ವೆಂಕಣ್ಣನ ಕಡೆಗೆ ಹೊರಳಿ) ಈಗ ಕಾಲು ದಾರಿಯ ಮೇಲೆ ಯಾರೂ ಇರಕೂಡದೆಂದು ಸರಕಾರದ ಆಜ್ಞೆ ಇದೆ. ಮೇಲಾಗಿ ಊರಲ್ಲಿ ವಿಷಮಸ್ಥಿತಿ. ನಿಮ್ಮ ಮುಖಚರ್ಯೆಯ ಮೇಲಿಂದ ಸುರಕ್ಷಿತರಾಗಿ ಕಾಣಿಸುವಿರಿ. ಬೇರೆ ಎಲ್ಲಿಯಾದರೂ ಕೆಲದಿನ ಕಾಲ ಕಳೆಯಬೇಕು. ಇಲ್ಲದಿದ್ದರೆ ಅನಿವಾರ್ಯದಿಂದ ನಿಮ್ಮನ್ನು ಬಂಧಿಸಬೇಕಾಗುವದು.

ನಾರಾಯಣಪ್ಪ:— ಬೇಲಾಶಕ್ ಬಂಧಿಸಿ ಮಾಡಿರಿ. ಫೌಜದಾರ ಸಾಹೇಬರು ಈ ಕೃತ್ಯದ ಬಗ್ಗೆ ನಾವು ತುಂಬಾ ಆಭಾರಿಯಾಗುವೆವು. ಜೇಲಿನಲ್ಲಿಯಾದರೂ ಇರಲು ಪ್ರಶಸ್ತವಾದ ಸ್ಥಳ ದೊರೆಯುವದು. ನಮಗೂ ಬೇಸರ ಬಂದಿದೆ.

ವೆಂಕಣ್ಣ:— ನಾರಾಯಣಪ್ಪನವರೇ ಬಾಯಿಗೆ ಸ್ವಲ್ಪ ಸಂಯಮವಿರಲಿ—

ಮಾಧವ:— ಬಂಧನ— ಜೇಲ— ವೆಂಕಣ್ಣಾ ಇದೇನು ಸುದ್ದಿ ಕೇಳ್ತೇವಿ.

ವೆಂಕಣ್ಣ:— ಒಳ್ಳೇದು ಫೌಜದಾರ ಸಾಹೇಬ ನಿಮ್ಮ ಆಜ್ಞೆಯಂತೆ ನಮಗೂ ಕರ್ತವ್ಯದ ಪರಿಸ್ಥಿತಿಯ ಕಡೆಗೆ ಗಮನವಿದೆ ನಾವೇನೂ ಗೂಂಡಾರಲ್ಲ. ನಾವೂ "—"ಆಫೀಸಿನಲ್ಲಿ ಕೆಲಸಮಾಡುತ್ತೇವೆ.

ಫೌಜದಾರ:—'Thanks'

ಪ್ರವೇಶ ೩

ಸ್ಥಳ:— ದಾದರ ಸಮುದ್ರದಂಡೆ

[ಮಾಧವನು ಗೆಳೆಯನಲ್ಲಿಗೆ ಹೋಗಿದ್ದಾನೆ, ನಾರಾಯಣಪ್ಪ ಕೆಲಸದ ಮೇಲೆ. ವೆಂಕಣ್ಣ ಏಕಾಕಿಯಾಗಿ ಸಮುದ್ರ ದಂಡೆಯಮೇಲೆ ವಿಹಾರಮಾಡುತ್ತ ಕುಳಿತಿದ್ದಾನೆ]

(ಆಕಸ್ಮಾತ್ತಾಗಿ ಸುಂದರಾಬಾಯಿಯವರ ಭೆಟ್ಟಿ)

ಸುಂದರಾ:—ನಮಸ್ಕಾರ ವೆಂಕಟರಾವ ನಾಲ್ಕೈದು ದಿನ ಕಾಲೇಜಕಡೆಗೆ ಬರಲಿಲ್ಲವಲ್ಲಾ ಗಡ್ಡ ಬೆಳೆದಿವೆ. ಕೂದಲು ಮಾಸಿವೆ ಮೈಯಲ್ಲಿ ಸ್ವಾಸ್ಥ್ಯವಿಲ್ಲವೋ ಹೇಗೆ?

ವೆಂಕಣ್ಣ:— ಹಾಗೇನಿಲ್ಲ ಸುಂದರಾ ದೇವಿಯವರೇ. ಕಾರಣಾಂತರದಿಂದ ಬರುವದಾಗಲಿಲ್ಲ. ಅಭ್ಯಾಸ ಹೇಗೆ–ವಿಶೇಷವೇನಾದರೂ ಕಾಲೇಜದಲ್ಲಿ ಚಟುವಟಿಕೆ–ಡಿಬೇಟಿಂಗ ಸೊಸಾಯಟಿಯ ಪ್ರಾಯಿಜು ನಿಮಗೇ ದೊರಕಿತಂತೆ Congratulations!

ಸುಂದರಾ:— Your absence was keenly felt ನೀವಿದ್ದಿದ್ದರೆ ನನಗೇನೂ ಭರವಸೆ ಇರಲಿಲ್ಲ. ಆದರೆ ಸುದೈವದಿಂದಲೋ ದುರ್ದೈವದಿಂದಲೋ ಅದು ನನ್ನ ಪಾಲಿಗೆ ಬಂತು.

ವೆಂಕಣ್ಣ:—ಹಾಗೇನಿಲ್ಲ.Only on account of your merit.

ಸುಂದರಾ:—, ಮೊನ್ನಿನ ವಿಷಯ ಅಷ್ಟಕ್ಕೇ ಉಳಿದಿದೆ ಬನ್ನಿ. ಆ ಪಾರ್ಶಿ ಹಾಟೇಲಿನಲ್ಲಿ ಚಹಾ ತೆಗೆದುಕೊಳ್ಳೋಣ. ಆ ಮಾತನ್ನು ಅಲ್ಲಿಯೇ ಮುಂದುವರಿಸೋಣ. ನಮ್ಮ ತಂದೆಯವರ ಸಮ್ಮತಿಯೂ ದೊರೆತಿದೆ. ನೀವೂ ಒಪ್ಪಿದರೆ ಒಂದು ವಾರದಲ್ಲಿ ಲಗ್ನ ಕಾರ್ಯಂ ಬಗೆಹರಿಯಬಹುದು.

ವೆಂಕಣ್ಣ:— ಇವನ್ನೆಲ್ಲ ಪ್ರಶಸ್ತ್ಯವಾಗಿ ಕುಳಿತು ಏಕಾಂತದಲ್ಲಿ ಅಲ್ಲಿಯೇ ಮಾತನಾಡೋಣ.

ಪ್ರವೇಶ ನಾಲ್ಕು

ಸ್ಥಳ:— ವಿಶಾಲವಾದ ಕಾಲುದಾರಿ

[ಗಿಡದ ನೆರಳಲ್ಲಿ ನಾರಾಯಣಪ್ಪ ರಾತ್ರಿ ಕೆಲಸ ಮಾಡಿ ಹಾಸಿಗೆಯಮೇಲೆ ಮಲಗಿದ್ದಾನೆ. ಮಾಧವ ಇನಕ್ಕೂರನ್ಸ ಪ್ರಾಸ್ಪೆಕ್ಟಸ್ ಓದುತ್ತಲಿದ್ದಾನೆ ಗಿಡಕ್ಕೆ ತೂಗುಬಿಟ್ಟ ಸೂಟು ಪ್ಯಾಂಟುಗಳು ಗಾಳಿಗೆ ಹಾರಾಡುತ್ತಲಿವೆ. ಇಷ್ಟರಲ್ಲಿ ವೆಂಕಣ್ಣ ಬರುವನು.]

ಮಾಧವ:— (ವೆಂಕಣ್ಣ ಬಂದದ್ದನ್ನು ನೋಡಿ) ನಾರಾಯಣಪ್ಪನವರೇ ಏಳುವಂಥವರಾಗಬೇಕು. ವೆಂಕಣ್ಣನಸ್ವಾರಿ ಬರತ್ತಿದೆ. ಬೇಗ ಏಳಿ "ಎದ್ದು ಮುಖ ತೊಳೆಯೋ ಳೋ ತಿದ್ದು ಕಸ್ತೂರಿ ತಿಲಕ" ಎಂದು ಹಾಡಲು ಪ್ರಾರಂಭಿಸುವನು.

ವೆಂಕಣ್ಣ:— ಆನಂದದ ಸುದ್ದಿ ತಂದಿದ್ದೇನೆ. ಖೋಲಿ ಗೊತ್ತು ಆಯಿತು. (ಅರೆ ನಿದ್ರೆಯಿಂದೆದ್ದ ನಾರಾಯಣಪ್ಪನತ್ತ ನೋಡಿ) ನಾರಾಯಣಪ್ಪನವರೇ ಎಲ್ಲ ಕಷ್ಟ ದಾಟಿದಂತಾಯಿತು. ನಾಳೆಯೆ ಪ್ರಕೃತಿ ಬಗೆ ಹರಿಯಿತು.

ನಾರಾಯಣಪ್ಪ:— ನಿಮಗಿನ್ನು ನಾನು ಕನಸಿನಲ್ಲಿ ಕೇಳುತ್ತಿಲ್ಲವಲ್ಲಾ!

ಮಾಧವ:— ವೆಂಕಣ್ಣ ಹ್ಯಾಂಗ ಖರೆಲೆಕ್ಕ ಹೇಳಿದಿ ಲೇಡಿ? (ಓಡಲು ಯತ್ನಿಸುವನು)

ವೆಂಕಣ್ಣ:—(ಮಾಧವನನ್ನು ಕೈಯಿಂದ ತಡೆದು) ಸಂಪೂರ್ಣ ಕೇಳೋ ಆ ಕಾಲೇಜದ ಗೆಳತಿ ಸುಂದರಾ— ಅವಳೊಡನೆ ನನ್ನ ಮದುವೆ ಇನ್ನೇನು ಇರಲಿಕ್ಕೆ ಬರುವದುಕೊಂಬಿಸ ಪ್ಲಾನು. ಆ ಮಾತು ನೀರು. ಮನೆಯು ಉಂಟು.

ನಾರಾಯಣಪ್ಪ:— ಮದುವೆ ಮಾಡುವವರ ಮೇಲೆ ವಿಶ್ವಾಸ ಹಾರಿದ; ನೀವು ಯಾವಾಗ ಹೊರಗೆ ಹಾಕ್ತೀರಿ ಹೇಳಲಿಕ್ಕೆ ಬರೋದಿಲ್ಲಾ; ನೀವು ನಿಮ್ಮ ಸ್ವಾರ್ಥ ನೋಡುವವರು ನೀವು ಗೃಹಸ್ವಾಮಿಗಳು.]

ಮಾಧವ:—ಹೀಂಗಾಗಿದೆ ನಮ್ಮ ಪರಿಸ್ಥಿತಿ. ವಿಶ್ವಾಸ ಹೇಗಿಡುವದು?

ವೆಂಕಣ್ಣ:— ನಾರಾಯಣಪ್ಪನವರೇ ಒಂದು ಕೋಣೆಯನ್ನು ನಿಮ್ಮ ಹೆಸರಿನಿಂದ ಮಾಡಿಸಿ ಕೊಟ್ಟು ಅನಂತರ ಮದುವೆ ಮಾಡುವೆ. ಇದಕ್ಕಾದರೂ ನಿಮ್ಮ ಸಮ್ಮತಿಯೋ ಇಲ್ಲವೋ?

ನಾರಾಯಣಪ್ಪ:— ಇನ್ ಕಿಲಾಬ ಝಿಂದಾಬಾದ! ವೆಂಕಣ್ಣ, ಮಹಾಂ ಜಿಕೀ ಜಯ.!

ಮಾಧವ:— ವೆಂಕಣ್ಣ ಅವೆಲ್ಲಾ ಹಸಗೇನ ಹೇಳಬ್ಯಾಡ; ನಿನ್ನ ಮದುವೆಯಾಗ ಮೇಲೆ ದಿನಾಲು ನಸುಕಿನ ೬ ಗಂಟೆಗೆ ಎರಡು ಕಪ್ಪು ಹಾಲಿನ ಟೀ ಮಾತ್ರ ಜರೂರ ಬರಲಿಕ್ಕೆ ಬೇಕು.

ನಾರಾಯಣಪ್ಪ:— ಹೌದು ಹೌದು ನಾವೆಲ್ಲರ ಹಾಲಿನ ಚಹಾ ಕುಡಿಯಲು ಬಹಳ ಬೇಸತ್ತಿದ್ದೇವೆ.

[ಮಾಧವ ನಾರಾಯಣಪ್ಪ ಇಬ್ಬರೂ ಕೂಡಿ ಇನ್ಕಿಲಾಬ ಝಿಂದಾಬಾದ. ವೆಂಕಣ್ಣ ಮಹಾರಾಜಕೀ ಜಯ ಎಂದು ಘೋಷಣೆ ಕೂಗುವರು.]

ತೆರೆ ಬೀಳುವದು.

✻ ಪಾತ್ರ ಸನ್ನಿವೇಶಗಳು ಯಾರನ್ನು ಉದ್ದೇಶಿಸಿ ಬರೆಯಲ್ಪಟ್ಟಿಲ್ಲ.

ಚಂದಾದಾರರಿಗೆ ಸೂಚನೆ


ಮೂರು ತಿಂಗಳಿಗೆ ಅಥವಾ ಕಡಿಮೆ ಮುದ್ದತಿಗೆ ವ್ಹಿ. ಪಿ. ಕಳಿಸುವದಿಲ್ಲ. ಮುಂಗಡ ಹಣ ಕಳಿಸಬೇಕು. ಅಂಚೆಯ ಅವ್ಯವಸ್ಥೆಯಿಂದ ಪತ್ರಿಕೆ ತಲ್ಪದಿದ್ದರೆ ನಾವು ಹೊಣೆಯಲ್ಲ. ಅವಧಿ ಮುಗಿಯುವದೆಂಬುದನ್ನು ನೀವೇ ನೆನಪಿಟ್ಟು ಹಣ ಕಳಿಸಬೇಕು. ಯೋಗ್ಯ ವೇಳೆಗೆ ಹಣ ಬರದಿದ್ದರೆ ಏನನ್ನು ತಿಳಿಸದೆ ಪತ್ರಿಕೆ ನಿಲ್ಲಿಸಲಾಗುವದು.

ಕರ್ಮವೀರ ಚಂದಾವಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.



ಜ್ಯೋತಿಷಿ:- ಕೃಷ್ಣಶಾಸ್ತ್ರಿ ಭಟ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜೂನ ೨ ರಿಂದ ೮ ರ ವರೆಗೆ

ಮೇಷ

[illegible]

ವೃಷಭ

[illegible]

ಮಿಥುನ

[illegible]

ಕರ್ಕ

[illegible]

ಸಿಂಹ

[illegible]

ಕನ್ಯಾ

[illegible]

ತುಲಾ

[illegible]

ವೃಶ್ಚಿಕ

[illegible]

ಧನು

[illegible]

ಮಕರ

[illegible]

ಕುಂಭ

[illegible]

ಮೀನ

[illegible]

ಪುಸ್ತಕ ಮತ್ತು ವಿಮರ್ಶೆ

(೨ನೇ ಪುಟದಿಂದ)

"ಹಕ್ಕಿಯಲಿ ಹಾಡಿಹರೆ
ಅಕ್ಕರೆಯು ಜೇನಿವೆ
ಅಕ್ಕರೆಯುರಿದಿಹಿರಿಯು
ಸಕ್ಕರೆಯು ಗೆಲುವೆ"

(ಬಂಕದೊಲುಮೆ)

ಎಂಬ ಧೈರ್ಯವಿದ್ದರೂ ಕನ್ನಪ್ರೇಮ "ಹುಲ್ಲು ಬೆಂಕಿ"ಯಂತೆ "ಕ್ಷಣಿಕ ಉತ್ಸಾಹ"ದ ಕಾಮವೇ ಎಂದು ಅವರಿಗೆ ಗೊತ್ತಿಲ್ಲದಿಲ್ಲ.

"ಅವಳು ನಾಕ, ಅವಳು ನರಕ
ನಾಕ-ಜೊತೆಯೊಳಿದ್ದರೆ
ನರಕ-ದೂರ ಹೋದರೆ"

ಎನ್ನುವಷ್ಟು ಅವರು ಪ್ರೇಯಸಿಯೆಂಬ "ಕಾಮುನ ದಿಕ್ಕಿನ ಒಬ್ಬಳ ಜೋಶಿ"ನಕ್ಕೆ ಬಿದ್ದಿದ್ದರೂ ಇದೆಲ್ಲ ದರ ಹಿಡಿವಾದ ಫಲ, ಕಾವ್ಯವಾದ ಫಲ ಸಂತಾನ ವೆಂದು ಗೊತ್ತಿದ್ದುದರಿಂದಲೇ "ಕಂದನದಲಿ ಶಿವನ ಕಾಣುವ ಬಂಧನವೆ ಮುಕ್ತಿ ಕಸಕೊಳ್ಳದುದು ತಾಯ್ತನಕೆ ಸಾಧ್ಯವೆ" ಎನ್ನುತ್ತಾನೆ. "ಪ್ರೇಮ ಕಾಶ್ಮೀರ"ದಲ್ಲಿರುವ ಕವಿತೆಗಳಲ್ಲೆಲ್ಲ ಅತ್ಯುತ್ತಮವಾದುವೆಂದರೆ ಈ ವಾತ್ಸಲ್ಯಪ್ರೇಮದ, ಸಂತಾನ ಪ್ರೀತಿಯ ಸೌಂದರ್ಯ ವನ್ನು ಒಳ್ಳೆಸಂದರ್ಭವೇ ಆಗಿವೆ ಮಿಲನ ಶೃಂಗಾರದ ಕವಿತೆಗಳು ಹೆಚ್ಚು ಕಡಿಮೆ ಚಾಟು ಶ್ಲೋಕಗಳಂತೆ ಹಗುರು, ವಿಲಾಸಾತ್ಮಕವಾಗಿ ರುವಾಗ ಕತ್ತು ವಿಪ್ರಲಂಭ ಶೃಂಗಾರದಲ್ಲಿ ವಿಯೋಗದ ಅನುಭವ ಒಪ್ಪೊಂದು ಹೃದಯ ಸ್ಪರ್ಶಿಯಾಗದಿರುವಾಗ ಸಂತಾನ ಪ್ರೀತಿಯುವು ಅನವಾಗಿವೆ. ತಾಯಿ ಮೊಲೆಯೂಡುವದನ್ನು

"ನಾಗಿದ್ದಿತು ಹಸುಳೆಯು-ತಾಯುಯು
ಹಾಲೊಳಕಂಡು"

(ಅಮೃತಕುಂಭ)

ಎಂದು ಬಣ್ಣಿಸಿದ್ದಾರೆ.

ಒಟ್ಟಿನ ಮೇಲೆ ಈ ಕವಿತೆಗಳೆಲ್ಲವೂ ರಸವತ್ತಾಗಿವೆ. ಹಸಿಗೋಡೆಯಲ್ಲಿ ಹರಳು ನಟ್ಟಂತೆ ಶುದ್ಧ ಕಿನಲ್ಲಿ ನಾಟಕೊಳ್ಳುವ ಅನೇಕಾನೇಕ ಖಂಡ ಗಳನ್ನು ಕಾಣಬಹುದು. ಆದರೂ ಕನ್ನಡಕ್ಕೆ ಅಸಹಜವಾದ ಶಬ್ದಗಳ ಪ್ರಯೋಗ, ಗದ್ಯ ಗಂಧಿತ್ವ ಮೊದಲಾದ ಶ್ರೀ ಪುಟ್ಟಪ್ಪನವರಿಗೆ ರೂಢಿ ಬಿದ್ದು ಹೋದ ದೋಷಗಳು ಇಲ್ಲಿಯೂ ಕಾಣಸಿಗದೆ ಇಲ್ಲ.

"ಜಪ ನೆರೆದು, ಸಭೆ ಸೇರಿ, ಕಯ್ಯ
ಚಪ್ಪಳೆಯುಕ್ಕೆ
ಕೊರಳಿಗುರುಳಿಪ (!) ಹಾರ ನನಗೆ
ನಿಸ್ಸಾರ;
ತಳಿರ ಬೆರಳಿನ ಕಯ್ಯ ಕಂದನಾ ನಳಿ
ದೋಳು
ಕೊರಳಳಸಪ್ಪಿದರೆನಗೆ ಸಗ್ಗಕ್ಕೆ ಸಾರ"

ಎಂಬ ಸುಂದರ ಪಂಕ್ತಿಗಳ ನಂತರ

"ಸಾವಧಾನ್ಯತಾಸುಖವೆ ಶಾಂತಿ ಜೀವಾಧಾರ"

ಎಂಬ ಅರ್ಥಾಂತರನ್ಯಾಸದ ಗದ್ಯಗಂಧಿತ್ವ ತಟ್ಟನೆ ಕಿವಿಗೆ ಶಲ್ಯಪ್ರಾಯವಾಗುತ್ತದೆ.

"ರಾಸಲೀಲೆ" ಯೆಂಬ ಕವಿತೆಯಲ್ಲಿ "ಶುಕ ಪಿಕಸಂಕುಲ 'ತುಮುಲ' ನಿನಾದ" ಎಂದು 'ತುಮುಲ' ಶಬ್ದದ ಪ್ರಯೋಗ ಅತ್ಯಂತ ಅನುಚಿತವೇ ಸರಿ. ಈ ಕೆಲವಾತುಗಳನ್ನು ಬಿಟ್ಟರೆ "ಪ್ರೇಮ ಕಾಶ್ಮೀರ"ದ ಕವಿತೆಗಳು ಸೊಗಸಾಗಿ ವೆಯೆಂದು ಅಡ್ಡಿಯಿಲ್ಲದೆ ಹೇಳಬಹುದು.

ಸಾದರ ಸ್ವೀಕಾರ

ಕನ್ನಡ

೧. ಮುಸುಕು ತೆರೆ--- (ಸಂಕಲನ)
ಸಂಪಾದಕರು- ಶಾಂತರಸ. ಪ್ರಕಾಶಕರು- ಸಂಗಡಿಗರ ಸಮಿತಿ ರಾಯಚೂರ. ಪುಟಗಳು ೧೨೦. ಬೆಲೆ ೧—೮—೦

೨. ಸಂಸ್ಕೃತ ನಾಟಕ ಕಥೆಗಳು--- (೨ ನೇ ಭಾಗ)
ಲೇಖಕರು- ಆಸ್ಥಾನ ವಿದ್ವಾನ್ ಎಂ ಎಸ್ ಸುಬ್ರಹ್ಮಣ್ಯ ಶಾಸ್ತ್ರಿ. ಪ್ರಕಾಶಕರು- ಎಸ್ ಎಸ್ ಎನ್ ಪುಸ್ತಕಾಲಯ ಹೊಸ ಮಾರ್ಕೆಟು ಬೆಂಗಳೂರ ಸಿಟಿ. ಮಾರಾಟಗಾರರು— ಸತ್ಯಶೋಧನ ಪುಸ್ತಕ ಭಂಡಾರ ಕೋಟೆ ಬೆಂಗಳೂರ ಸಿಟಿ. ಪುಟಗಳು ೧೫೦ ಬೆಲೆ ೧—೮—೦

೩. ಆಗಸ್ಟ ಒಂಬತ್ತು
ಲೇಖಕರು— ಬಸವರಾಜ ಕಟ್ಟೀಮನಿ. ಪ್ರಕಾಶನ— ಪ್ರಭಾತ ಸಾಹಿತ್ಯ ಬೆಂಗಳೂರ. ಮಾರಾಟಗಾರರು— ಮನೋಹರ ಗ್ರಂಥ ಭಂಡಾರ ಧಾರವಾಡ. ಪುಟಗಳು ೧೨೦ ಬೆಲೆ ೧—೮—೦

೪. ಸ್ವರಾಜ್ಯ ಶಾಸ್ತ್ರ
ಮೂಲ ಲೇಖಕರು— ವಿನೋಬಾ ಭಾವೆ ಅನುವಾದಕರು— ಸಾಲಿ ರಾಮಚಂದ್ರರಾಯರು ಪ್ರಭಾತ ಸಾಹಿತ್ಯ ಬೆಂಗಳೂರ. ಪುಟಗಳು ೫೬ ಬೆಲೆ ೧೨ ಆಣೆ

ಇಂಗ್ಲೀಷ

೫. The Doctrine of Home Land
By V. K. Javali, B. A. (Hon.) B. T. M. Ed., D. P. Ed. Dharwar.
ಪ್ರಕಾಶನ: ಕರ್ನಾಟಕ ಸಂಘ ಬನಹಟ್ಟಿ (ಜಮಖಂಡಿ) ಪುಟಗಳು— ೬.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ "ಲೋಕ ಶಿಕ್ಷಣ ಟ್ರಸ್ಟ್"ದ ಪರವಾಗಿ ಹ. ರಾ. ಪುರೋಹಿತ ಇವರಿಂದ ಮುದ್ರಿತವಾಗಿ ಪ್ರಕಟವಾಯಿತು.